'ಬೀಜಕೆ ಬಂದು'

ಕನ್ನಡ - ಇಂಗ್ಲಿಷ್

ಪಾಠ ಪುಸ್ತಕ

ಸಂ: ಬಂಕ್ನೂಯರ ಟಿ.ಪಿ.

1965.

ಜೂನ ೩೦ ರಂದು ಆರಂಭ

ಬೆಂಗಳೂರು ೨೦— ಹಾಸನ-ಮಂಗಳೂರ ರೇಲ್ವೆ ಮಾರ್ಗ ನಿರ್ಮಾಣದ ಕಾರ್ಯವನ್ನು ರೇಲ್ವೆ ಮಂತ್ರಿ ಖಾತೆಯಲ್ಲಿಯ ಸಚಿವರಾದ ಡಾ. ರಾಮಸುಭಾಗ ಸಿಂಗರವರು ಜೂನ ೩೦ ರಂದು ಉದ್ಘಾಟಿಸಲಿದ್ದಾರೆ. ಹಾಸನದ ಹತ್ತಿರ ಜೂನ ೩೦ ರಂದು ಬೆಳಗ್ಗೆ ಡಾ. ರಾಮಸುಭಾಗ ಸಿಂಗ ಅವರು ಮಣ್ಣನ್ನು ಅಗೆಯುವದರ ಮೂಲಕ ರೇಲ್ವೆ ಮಾರ್ಗ ರಚನೆಯ ಕೆಲಸವನ್ನು ಪ್ರಾರಂಭಿಸುವರು ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ರಜಿಸ್ಟ್ರೇಶನ್ ನಿಯಮಗಳು

ಬೆಂಗಳೂರು ೧೯— ಮೈಸೂರ ರಜಿಸ್ಟ್ರೇಶನ್ ೧೯೬೫ ಇದರ ಕರಡು ನಿಯಮಗಳು ಇದೇ ಮೇ ೨೬ರ ಮೈಸೂರ ಗ್ಯಾಜಿಟದಲ್ಲಿ ಪ್ರಕಟವಾಗಿವೆ. ಈ ಸಂಬಂಧದಲ್ಲಿ ಸಾರ್ವಜನಿಕರು ತಮ್ಮದೇನಾದರೂ ಆಕ್ಷೇಪ ಹಾಗು ಸೂಚನೆಗಳು ಇದ್ದಲ್ಲಿ ಇನಸ್ಪೆಕ್ಟರ ಜನರಲ್ ಆಫ ರಜಿಸ್ಟ್ರೇಶನ್ ಹಾಗು ಕಮೀಶನರ ಆಫ ಸ್ಟಾಂಪ ನ್ಯೂ ಪಬ್ಲಿಕ ಆಫೀಸಸ್ ಬೆಂಗಳೂರು ೧ ಇವರಿಗೆ ಜೂನ ೨೭ ಇಲ್ಲವೆ ಅ ಒಳಗಾಗಿ ತಲುಪುವಂತೆ ಕಳಿಸಬೇಕು.

ಲಾಗುವುದೆಂದು ತಿಳಿಸಲಾಗಿದೆ,

ತಂತಿ ಸೌಕರ್ಯ

ಬೆಂಗಳೂರು ೧೯— ಮೈಸೂರ ಜಿಲ್ಲೆಯ ಕಬಿನಿ ಕಾಲನಿ, ಕಲಬುರ್ಗಿ ಜಿಲ್ಲೆಯ ಜೇವರಗಿ ಹಾಗೂ ಬೆಳಗಾವಿ ಜಿಲ್ಲೆಯ ಸಿಂದಿ ಕುರಬೆಟ್ಟಗಳಲ್ಲಿ ತಂತಿ ಸಂಪರ್ಕ ಸೌಕರ್ಯಗಳನ್ನು ಒದಗಿಸಲಾಗಿದೆ.

ನಿಧನ

ಬೆಂಗಳೂರು ೨೦— ನಗರದ ಪತ್ರಿಕೋದ್ಯಮಿ ಶ್ರೀ ಕೆ ಎಂ ಆರ್ ವೀರಭದ್ರ ಶಾಸ್ತ್ರಿಯವರು ಇಂದು ಮಧ್ಯಾಹ್ನ ೨॥ ಗಂಟೆಗೆ ಜರ್ನಾಲಿಸ್ಟ ಕಾಲನಿಯಲ್ಲಿಯ ತಮ್ಮ ಗೌರಿ ಪ್ರಸಾದ ನಿಲಯದಲ್ಲಿ ಹೃದಯವಿಕಾರದಿಂದ ನಿಧನರಾದರು. ಮರಣ ಸಮಯದಲ್ಲಿ ೬೫ ವರ್ಷಗಳಾಗಿದ್ದವು.

ನಗರದ ಅನೇಕ ದೈನಿಕ, ಸಾಪ್ತಾಹಿಕಗಳಲ್ಲಿ ಸೇವೆಸಲ್ಲಿಸಿದ ಅವರು ೧೯೫೪ ರಲ್ಲಿ "ಮೈಸೂರ ಪ್ರಭಾ" ಎಂಬ ಸಾಪ್ತಾಹಿಕ ಹೊರಡಿಸಿ ಕೆಲ ವರ್ಷ ನಡೆಸಿದ್ದರು.

೭ ಸಿವಿಲ್ ಹಾಸ್ಪಿಟಲ್, ಧಾರವಾಡ	೮	–
೮ ಕೃಷ್ಣರಾಜೇಂದ್ರ ಹಾಸ್ಪಿಟಲ್, ಮೈಸೂರು	೨೪	೪
೯ ಡಿಸ್ಟ್ರಿಕ್ಟ ಹಾಸ್ಪಿಟಲ್, ತುಮಕೂರು	೭	೨
೧೦ ಡಿಸ್ಟ್ರಿಕ್ಟ ಹಾಸ್ಪಿಟಲ್, ಶಿವಮೊಗ್ಗ	೫	–
೧೧ ಡಿಸ್ಟ್ರಿಕ್ಟ ಹಾಸ್ಪಿಟಲ್, ಚಿತ್ರದುರ್ಗ	೧೧	೫
೧೨ ಕೆ.ಎಂ.ಸಿ. ಹಾಸ್ಪಿಟಲ್, ಹುಬ್ಬಳ್ಳಿ	೧೦	–

ತರಬೇತಿ ಕೋರ್ಸಿಗೆ ಪ್ರವೇಶವನ್ನು ಪಡೆಯಲು ಅಭ್ಯರ್ಥಿಗೆ ಬೇಕಾದ ಕನಿಷ್ಠ ಶೈಕ್ಷಣಿಕ ಅರ್ಹತೆಯು ಎಸ್.ಎಸ್.ಎಲ್.ಸಿ. ಕೋರ್ಸನ್ನು ಮುಗಿಸಿರತಕ್ಕದ್ದು. ಮತ್ತು ನರ್ಸರಿಗಳಿಗಾಗಿ, ಬೋರ್ಡ ಆಫ್ ಎಕ್ಸಾಮಿನರುಗಳಿಂದ ನಡೆಸಲ್ಪಡುವ ಎಂಟನ್ಸ್ ಎಕ್ಸಾಮಿನೇಶನ್ (ಪ್ರವೇಶದ ಪರೀಕ್ಷೆ) ದಲ್ಲಿ ಉತ್ತೀರ್ಣರಾಗಿ ಅರ್ಹತೆಯನ್ನು ಪಡೆದ ನಿಯಮಕ್ಕೊಳಪಟ್ಟಿದೆ. ಈ ಮೇಲಿನ ರಿಯಾಯಿತಿಯು ಹೈಸ್ಕೂಲುಗಳಲ್ಲಿ IV, V ಹಾಗೂ VI ಫಾರಂಗಳಲ್ಲಿ ನಿಯಮಿತ ಹಾಜರಿಯುಳ್ಳಂಥ ಮತ್ತು ಹೈಸ್ಕೂಲುಗಳ ಮುಂಬಾಂತರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತಂಥ ಅಭ್ಯರ್ಥಿಗಳಿಗೆ ಅನ್ವಯಿಸುತ್ತದೆ. ಎಸ್.ಎಸ್.ಎಲ್.ಸಿ. ಅಥವಾ ತತ್ಸಮ ಪರೀಕ್ಷೆಯಲ್ಲಿ ಪಾಸಾದ ಬಗ್ಗೆ ಸಾಕ್ಷ್ಯ ಪತ್ರವನ್ನು ಹಾಜರು ಪಡಿಸುವವರು ಪ್ರವೇಶ ಪರೀಕ್ಷೆಯಿಂದ (ಎಂಟ್ರನ್ ಎಕ್ಸಾಮಿನೇಶನ್) ಮುಕ್ತರಿರುತ್ತಾರೆ.

ವಯೋಮಿತಿಯು, ಮಹಿಳಾ ಅಭ್ಯರ್ಥಿಗಳ ಸಂಬಂಧವಾಗಿ ೧೭ ರಿಂದ ೩೫ ವರುಷಗಳು ಮತ್ತು ಪುರುಷರಿಗಾಗಿ ೧೭ ರಿಂದ ೩೦ ವರುಷಗಳು ಇರುತ್ತವೆ. ತರಬೇತಿ ಕೋರ್ಸಿಗೆ ಪ್ರವೇಶವನ್ನು ಪಡೆಯಲು ಮದುವೆಯಾದ ಮಹಿಳಾ ಅಭ್ಯರ್ಥಿಗಳು ಸಹ ಅರ್ಹತೆಪಡೆದಿರುವರು.

ಈ ಕೆಳಗಿನ ಡೈರೆಕ್ಟರ್‌ರವರ ಕಚೇರಿಗೆ ಕಳಿಸಿದಂಥ ಅರ್ಜಿಗಳನ್ನು, ಯಾರು ಅವುಗಳೊಂದಿಗೆ ವ್ಯವಹರಿಸುವರೋ ಅಂಥ ಸಂಬಂಧಿಸಿದ ಇನ್‌ಸ್ಟಿಟ್ಯೂಶನ್‌ಗಳಿಗೆ ಕಳಿಸುವದರಿಂದ, ಆ ಅರ್ಜಿಗಳ ಬಗ್ಗೆ ಈ ಕಚೇರಿಯಿಂದ ಕ್ರಮವನ್ನು ತಕ್ಕೊಳ್ಳುವದಿಲ್ಲ.

(ಸಹಿ) ....

೧೨೯೯ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಿಸ್ ಇವರ ಪರವಾಗಿ

ಲೋಕಬಂಧು

लोक बंधु

LOK BANDHU

ಆಧ್ಯಾತ್ಮಿಕ-ಸಾಂಸ್ಕೃತಿಕ ಮಾಸಪತ್ರಿಕೆ



ಮಹಾತಪೋಧನರಾದ ದಿವ್ಯ ಜ್ಞಾನಿಗಳಾದ
ಶ್ರೀ ಮ ಜ. ಶಿವಾನಂದ ಮಹಾ ಶಿವಯೋಗಿಗಳು
ಗದಗ

'ಲೋಕ ಬಂಧು' ವ್ಯವಹಾರ

ಸೂಚನೆ

ಲೇಖಕರಲ್ಲಿ,

ಲೇಖನಗಳು ಅಸ್ಪಷ್ಟರೀತಿಯಲ್ಲಿ ಬರುತ್ತಿದ್ದು ಮುದ್ರಣ ಕಾರ್ಯಕ್ಕೆ ತುಂಬಾ ತೊಂದರೆಯಾಗುತ್ತಿದೆ. ಕಾರಣ ಲೇಖಕರು ಲೇಖನಗಳನ್ನು ಸ್ಪಷ್ಟ ರೀತಿಯಲ್ಲಿ ಕಾಗದದ ಒಂದೇ ಬದಿಯಲ್ಲಿ "ಲೋಕ ಬಂಧು"ವಿನ ನಾಲ್ಕು ಪುಟಗಳಿಗೆ ಮಿಕ್ಕದಂತೆ ಕಳಿಸಬೇಕು.

ಅಸ್ವೀಕೃತ ಲೇಖನ ಬಯಸುವವರು ತಕ್ಕಷ್ಟು ಅಂಚೆ ಚೀಟಿ ಇಡಬೇಕು. ಮತ್ತು ತಮ್ಮ ಪೂರ್ಣ ವಿಳಾಸ ತಿಳಿಸಬೇಕು.

ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರ ಲೇಖನ, ಕಥೆ, ಕವನಗಳಿಗೆ ಸದಾ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಅದರ ಮೂಲ ಲೇಖಕರ ಹೆಸರನ್ನು ಸೂಚಿಸಬೇಕಲ್ಲದೆ ಅವರ ಒಪ್ಪಿಗೆ ಪಡೆಯುವುದು ಉತ್ತಮ.

ವಿಮರ್ಶೆಗೆ ಪುಸ್ತಕ ಪ್ರತಿಗಳನ್ನು ಕಳಿಸುವವರು ಎರಡು ಪ್ರತಿಗಳನ್ನು ಕಳಿಸಬೇಕು.

ಜಾಹೀರಾತುದಾರರಲ್ಲಿ,

ಜಾಹೀರಾತು ಕೊಡತಕ್ಕವರು ತಮ್ಮ ಜಾಹೀರಾತಿನ ಅಂದಾಜು ಹಣದ ಅರ್ಧದಷ್ಟು ಹಣವನ್ನು ಮುಂಗಡ ಕಳಿಸಿ, ಜಾಹೀರಾತು ಪ್ರಕಟವಾದೊಡನೆ ಉಳಿದ ಹಣದ ಬಗ್ಗೆ ವ್ಹಿ. ಪಿ. ಸ್ವೀಕರಿಸಲು ಸಿದ್ಧರಿರಬೇಕು (ಜಾಹೀರಾತಿನ ದರ ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ)

ಚಂದಾದಾರರಲ್ಲಿ,

ಕಳೆದ ಸಾಲಿನ ಚಂದಾ ಹಣ ಕಳಿಸದಿದ್ದವರಿಗೆ ಮುಂದಿನ ಸಂಚಿಕೆಗಳನ್ನು ಕಳಿಸಲಾಗುವುದಿಲ್ಲ. ಹೊಸದಾಗಿ ಚಂದಾದಾರರಾಗ ಬಯಸುವವರು ಮುಂಗಡ ವಾರ್ಷಿಕ ಚಂದಾ ಹಣ ಐದು ರೂಪಾಯಿ ಸಲ್ಲಿಸಬೇಕು; ಬಿಡಿ ಸಂಚಿಕೆಗಾಗಿ ೫೦ ಪೈಸೆಯ ಅಂಚೆ ಚೀಟಿ ಕಳುಹಿಸಬೇಕು

ಎಜಂಟರಲ್ಲಿ,

ಎಜಂಟರು ತಮಗೆ ಬೇಕಾದಷ್ಟು ಪ್ರತಿಗಳ ಬೆಲೆಯುಷ್ಟು ಕಮೀಶನ್ ಕಳೆದು ಉಳಿದ ಹಣ ಮುಂಚಿತವಾಗಿ ನಮಗೆ ಕಳಿಸಿ ಪ್ರತಿಗಳನ್ನು ಪಡೆಯಬೇಕು.

ಸಂಪುಟ ೨ ೧೯೬೫

ಲೋಕಬಂಧು

 लोक बंधु LOK BANDHU

ಅಧ್ಯಾತ್ಮಿಕ ಸಾಂಸ್ಕೃತಿಕ ಮಾಸ ಪತ್ರಿಕೆ

ಸಂಚಿಕೆ ೧೦ ಜುಲೈ

ವಾ. ಚಂ ೫= ೦೦

ಸಂಪಾದಕರು : ಹ. ಭೀ. ಬುಕ್ಕಣ್ಣವರ

ಬಿಡಿ ಪ್ರತಿ ೦೦=೫೦ ಪೈಸೆ

ಸಂಪಾದಕೀಯ

ಯೋಜನೆ

ಮಾನವನು ಈ ಲೋಕದಲ್ಲಿ ಜನಿಸಿರುವುದು ಏಕೆ? ಅವನು ಈ ಮೊದಲು ಎಲ್ಲಿಂದ ಬಂದವನು ಎಲ್ಲಿಗೆ ಹೋಗುವವನು ಈ ಜೀವನದ ಗೊತ್ತು ಗುರಿಗಳೇನು? ಮುಂತಾಗಿ ಅರಿಯಲು ಕ್ರಮಬದ್ಧವಾದ ಯೋಜನೆಯೊಂದನ್ನು ಅನುಸರಿಸಬೇಕಾಗಿರುವದು ಅಗತ್ಯ ಆದರೆ ಶಾಸ್ತ್ರದಲ್ಲಿ ವಿಷಯ ಸಂಬಂಧ ಪ್ರಯೋಜನ ಹಾಗು ಅಧಿಕಾರಿಗಳೆಂಬ ಅನುಬಂಧ ಚತುಷ್ಟಯಗಳನ್ನು ನಿರೂಪಿಸಲಾಗಿದೆ.

ಯಾವದೇ ಕೆಲಸ ಕಾರ್ಯಗಳನ್ನು ಪ್ರಾರಂಭಿಸಬೇಕಾದರೆ ನಾವು ಆ ಕೆಲಸದ ಅಥವಾ ಆ ವಸ್ತುವಿನ ಜ್ಞಾನ ಮಾಡಿಕೊಳ್ಳುವದೇ **ವಿಷಯ**ವೆಂದೆನಿಸುವದು ಆ ಬಗ್ಗೆ ಪೂರ್ವಾಪರ ವಿಚಾರಿಸುವದೇ "**ಸಂಭಂಧ**" ಅದರಿಂದ ಆಗುವ ಲಾಭಾಲಾಭಗಳು **ಪ್ರಯೋಜನ**ವೆನಿಸುವದು. ಆ ವಸ್ತು ಅಥವಾ ಕಾರ್ಯ ನೆರವೇರಿಸುವ ಯೋಗ್ಯತೆ ಅಥವಾ ಇಲ್ಲವೆಂದು ಅರಿಯುವದೇ **ಅಧಿಕಾರಿ** ಎನಿಸುವದು

ಉದಾ:— ಒಂದು ಹೊಲವನ್ನು ನಾವು ಖರೀದಿ ತೆಗೆದುಕೊಳ್ಳಬೇಕಾದರೆ ಅದರ ಬಗ್ಗೆ ಒಳಿತು—ಕೆಡಕು ಮುಂತಾಗಿ ವಿಚಾರಿಸುವದೇ ವಿಷಯವೆನಿಸುವದು. ಆ ಜಮೀನಿನ ಕಾಗದ—ಪತ್ರ ವಗೈರೆ ವಿಚಾರಿಸುವದೇ ಸಂಭಂಧ ಅದರಿಂದ ಆಗುವ ಫಲಾಫಲ ಕುರಿತು ಜ್ಞಾನವೇ ಪ್ರಯೋಜನ, ಆ ಜಮೀನು ಖರೀದಿ ಮಾಡುವಷ್ಟು ಹಣದ ಯೋಗ್ಯತೆ ನನ್ನಲ್ಲಿ ಅದೆ ಎಂಬುವದೇ ಅಧಿಕಾರಿ.

ಆಧ್ಯಾತ್ಮ ಶಾಸ್ತ್ರದಲ್ಲಿ ಹೇಳಿರುವ ಹಾಗೆ ಜೀವ ಬ್ರಹ್ಮೈಕ್ಯ ಶಾಸ್ತ್ರಕ್ಕೆ ವಿಷಯವೆನಿಸುವದು. ಬ್ರಹ್ಮ ಶಾಸ್ತ್ರಗಳಿಗೆ

ಪ್ರತಿಪಾದ್ಯ ಪ್ರತಿಪಾದಕ ಭಾವವೇ ಸಂಬಂಧವೆನಿಸುವದು ಸಕಲ ದುಃಖ ನಿವೃತ್ತಿ ಪರಮಾನಂದ ಪ್ರಾಪ್ತಿ ಸ್ವಸ್ವರೂಪಾವಸ್ಥಾನ ನಿತ್ಯ ಆನಂದದಾಯಕವಾದ ಮೋಕ್ಷವೇ ಪ್ರಯೋಜನವೆನಿಸುವವದು. ಮತ್ತು ಈ ವೇದಾಂತ ಶ್ರವಣ ಮನನ ಹಾಗು ನಿಧಿದ್ಯಾಸಗಳಿಗೆ ಧರ್ಮ ಜಿಜ್ಞಾಸಾ ಪೂರ್ವಕವಾಗಿ ಕರ್ಮ ಕಾಂಡ ಸಿದ್ಧನಾದ ಅಂದರೆ ನಿಷ್ಕಾಮ ಕರ್ಮದಿಂದ ಶ್ರದ್ಧಾಂತಹಃಕರಣವುಳ್ಳ ಸಚ್ಛ್ರೋತ್ರಿಯನೇ ಅಧಿಕಾರಿ ಆದರೆ ಬ್ರಹ್ಮಜ್ಞಾನ ಸ್ವಾಧ್ಯವಾದ ಮೋಕ್ಷವು ಜ್ಯಾತ್ಯದಿ ನಿರ್ಬಂಧಗಳಿಲ್ಲದೆ ಪರಿಪಕ್ವ ಹೃದಯವುಳ್ಳ ಸಾಧನ ಚತುಷ್ಟಯ ಸಂಪನ್ನನಾದವನೇ ಬ್ರಹ್ಮ ವಿಧ್ಯೆಗೆ ಅಧಿಕಾರಿಯೆಂದು ಶತ ಸಿದ್ಧವಾಗಿದೆ. ಆದುದರಿಂದ ಮಾನವನು ಯೋಜನಾಬದ್ಧವಾಗಿ ಪ್ರಗತಿ ಸಾದಿಸಬೇಕಾಗಿದೆ.

ಕ್ರಮತಪ್ಪಿ ನಡೆಯುವದರಿಂದ ಕಷ್ಟವಿನ್ನು ಂಟಿ ?

ಎಂಬ ನಿಜಗುಣ ಶಿವಯೋಗಿಗಳ ಅನುಭವವಾಣಿಯಂತೆ ಯಾವದೇ ಕಾರ್ಯ ನೆರವೇರಿಸಬೇಕಾದರೆ ಮಾನವನು ಅದರ ವಿಷಯವಾಗಿ ಸಾಧಕ ಭಾಧಕಗಳನ್ನು ಕುರಿತುವಿಚಾರಿಸಿ ಮುಂದಿನ ಧ್ಯೇಯಧೊರಣೆಗಳತ್ತ ಸಾಗಬೇಕಾಗಿದೆ. ಒಂದು ಮನೆ ಕಟ್ಟಬೇಕಾದರೂ ಅದರ (ಪ್ಲಾನ್)ಯೋಜನೆಯುಬಗ್ಗೆ ಮೊದಲೇ ವಿಚಾರಿಸಬೇಕಾಗಿರುತ್ತದ. ಅದೇ ರೀತಿ ನಮ್ಮ ಸರಕಾರವೂ ಕೂಡಾ ದೇಶದ ಪ್ರಗತಿಗಾಗಿ ಪಂಚವಾರ್ಷಿಕಯೋಜನೆಯನ್ನು ನಿರ್ಮಿಸಿದೆ. ರಾಷ್ಟ್ರ ರಕ್ಷಣೆಯ ಸಲುವಾಗಿ ಹೆಚ್ಚು ಪ್ರಮಾಣದಲ್ಲಿ ಆಹಾರೋತ್ಪಾದನೆ ಉಕ್ಕು ರಸಾಯನಿಕ ವಸ್ತುಗಳು ಖನಿಜಗಳು ವಿದ್ಯುತ್ ಪ್ರಮಾಣ ಸೌಕರ್ಯಗಳು ಮತ್ತು ಯಾಂತ್ರಿಕ ಶಿಕ್ಷಣ ಮೊದಲಾದವುಗಳೆಲ್ಲವೂ ನಮ್ಮ ಯೋಜನೆಯ ಮುಖ್ಯ ಚಟುವಟಿಕೆಗಳಾಗಿರತ್ತವೆ ಈ ಯೋಜನೆಯ ಮೂಲಕ ದೇಶದ ಆರ್ಥಿಕ ಸಮೃದ್ಧಿ ಶಾಂತಿಸ್ಥ ನೀತಿ ಪಾಲನೆ, ಸಾಮಾಜಿಕ ಪ್ರಗತಿ ವಿಧ್ಯಾರ್ಜನೆ ಹಾಗು ಉದ್ಯೋಗ ಭಿವೃದ್ಧಿಯೂ ಅಲ್ಲದೆ ಜನತೆಯ ಧ್ಯೇಯ ಮತ್ತು ಯೋಗ್ಯತೆಯ ವಿಶ್ವಾಸ ಹಚ್ಚಿಸುವುದೇ ಯೋಜನೆಯ ಜಯದ ಮೂಲವಾಗಿದೆ.

ಡಾ. ರಾದಕೃಷ್ಣನ್‌ರು ಹೇಳುವಂತೆ ಆದ್ಯಾತ್ಮಿಕ ಶಕ್ತಿಯಿಂದ ತನ್ನ ಎಲ್ಲ ಸಮಸ್ಯೆಗಳನ್ನು ತಂಟೆಗಳನ್ನು ಬಗೆಹರಿಸಿಕೊಳ್ಳಲು ಯತ್ನಿಸಬೇಕೆಂಬುದೇ ಭಾರತದ ಆಶಯ ನಾವು ಶಾಂತಿ ರಕ್ಷಣೆಗಾಗಿ ಯತ್ನಿಸುತ್ತೇವೆ. ಯುದ್ಧವಿಲ್ಲದ ಜಗತ್ತನ್ನು ನಿರ್ಮಿಸಲು ಶಕ್ತಿ ಮೀರಿ ಯತ್ನಿಸುತ್ತೇವೆ. ಶಸ್ತ್ರಾಸ್ತ್ರಗಳ ನಾಶಕಾಗಿ ನಾವು ಸದಾ ಹೆಣಗುತ್ತಿದ್ದೇವೆ. ಜಗತ್ತು ಇನ್ನು ಅಪರಿಪೂರ್ಣವಾಗಿರುವ ವರೆಗೆ ಮತ್ತು ರಾಷ್ಟ್ರಗಳು ಶಸ್ತ್ರಾಸ್ತ್ರಗಳನ್ನು ಬಿಟ್ಟುಕೊಡದಿರುವವರೆಗಾದರೂ ಭಾರತವು ರಕ್ಷಣಾ ಪಡೆಗಳನ್ನು ಇರಿಸ ಪುದು ಅಗತ್ಯ ಆದರೆ ಜೀವನದ ಮೌಲ್ಯ ಆಧ್ಯಾತ್ಮಿಕ ಸೋಗು ಹಾಕಿ ಜಿಥ ಹಿತ ಸೂಕ್ಷ್ಮಗಳಿಂದ ವ್ಯರ್ಥವಾಗಿ ಮೆರೆದಾಡುತ್ತಿರುವ ಪ್ರವೃತಿಯಲ್ಲಿ ಯಾವ ದೊಡ್ಡತನವು ಇಲ್ಲವೆಂದು ಹೇಳುವ ನಮ್ಮ ನಾಯಕರ ಯೋಜನಾಬದ್ಧ ವಾದಗಳತ್ತ ಗಮನ ಕೊಡುವದು ಉತ್ತಮವಾದ- (೮ ನೇ ಪುಟಕ್ಕೆ)

ನೆಚ್ಚಿನ ನಾಯಕ ನೆಹರು

ಒಮ್ಮೆ ನೆಹರೂ ಅವರನ್ನು ಮುಂದಿನ ಪೀಳಿಗೆಯು ನಿಮ್ಮನ್ನು ಯಾವ ರೀತಿ ಸ್ಮರಿಸಿಕೊಳ್ಳಬೇಕು ? ಎಂದು ಕೇಳಲಾಯಿತು ಸ್ವಾತಂತ್ರ್ಯಯೋಧ ರಾಜಕಾರಣ ಶಾಂತಿದೂತ ವಿಚಾರಶೀಲ ಮತ್ತು ರಚನಾತ್ಮಕ ಕಾರ್ಯಕರ್ತ ಈ ಪೈಕಿ ಏನೆಂದು ಸ್ಮರಿಸಿಕೊಳ್ಳಿ— " ಮುಂದಿನ ಪೀಳಿಗೆಯು ನನ್ನನ್ನು ಸ್ಮರಿಸಿಕೊಳ್ಳಬೇಕೆಂಬ ಕಾತರ ನನಗಿಲ್ಲ ಎಂದು ಅವರು ಹೇಳಿದರು. ನೆಹರೂ ಅವರು ಇನ್ನೊಂದು ಸಂದರ್ಭದಲ್ಲಿ ಹೀಗೆ ಅಭಿಪ್ರಾಯಪಟ್ಟರು ಮುಂದೆ ಯಾರಾದರೂ ನನ್ನನ್ನು ಸ್ಮರಿಸಿಕೊಂಡರೆ ಇವನು ತನುಮನಗಳಿಂದ ಭಾರತವನ್ನೂ ಭಾರತೀಯರನ್ನೂ ಪ್ರೀತಿಸುತ್ತಿದ್ದ ಈ ಪ್ರೇಮಕ್ಕೆ ಪ್ರತಿಯಾಗಿ ಭಾರತೀಯರೂ ಅಸಮಾನ ರೀತಿಯಲ್ಲಿ ಅವನಿಗೆ ತಮ್ಮ ಪ್ರೇಮವನ್ನು ಧಾರೆಯೆರೆದರು ಎಂದು ಸ್ಮರಿಸಿಕೊಳ್ಳಬಹುದು

ನೆಹರೂ ಅವರು ಜನತೆಯನ್ನು ತುಂಬಾ ಪ್ರೀತಿಸುತ್ತಿದ್ದರು. ಈ ಪ್ರೀತಿಯೇ ಅವರು ಆದರ್ಶ ಸಮಾಜದ ಕನಸು ಕಟ್ಟಿ ಅದನ್ನು ನನಸಾಗಿಸಲು ನಿರಂತರ ಶ್ರಮಿಸುವಂತೆ ಪ್ರೇರಣೆ ನೀಡಿತು ನೆಹರೂ ಅವರ ಮಾತಿನಲ್ಲಿಯೇ ಹೇಳುವುದಾದರೆ ಸಮಾಜದಲ್ಲಿ ಇಂದು ಕಂಡು ಬರುವ ಸಾಂಪತ್ತಿಕ ಅಸಮಾನತೆಗಳು ನಿವಾರಣೆಗೊಂಡು ದೇಶದ ಪ್ರತಿಯೊಬ್ಬ ಪ್ರಾಣಿಗೂ ಸಮಾನ ಸ್ಥಾನಮಾನ ಉದ್ಯೋಗಾವಕಾಶಗಳು ಅಭಿವೃದ್ಧಿ ಸೌಲಭ್ಯಗಳು ದೊರೆಯಬೇಕು ಇಂತಹ



ಸಮಾಜವೊಂದರ ರಚನೆಗಾಗಿಯೇ ನೆಹರೂ ಅವರು ಹಗಲಿರುಳು ಯತ್ನಿಸಿದರು ಜಾತಿಮತಭೇದಗಳು ಪ್ರತ್ಯೇಕತೆ ಅಸ್ಪೃಶ್ಯತೆ ಅಂಧಶ್ರದ್ಧೆಗಳಿಗೆ ಸ್ಥಾನವಿಲ್ಲದ ಧಾರ್ಮಿಕ ಸ್ವಾತಂತ್ರ್ಯವುಳ್ಳ ಆದರೆ ರಾಷ್ಟ್ರೀಯ ಜೀವನದ ರಾಜಕೀಯ ಆರ್ಥಿಕ ವ್ಯವಸ್ಥೆಗಳಲ್ಲಿ ಧರ್ಮದ ಹಸ್ತಕ್ಷೇಪವಿಲ್ಲದ ಭಾರತವನ್ನು ನಿರ್ಮಿಸಲು ಅವರು

ಶ್ರಮಿಸಿದರು.

ನೆಹರೂಅವರು 1955ರಲ್ಲಿ ಲೋಕ ಸಭೆಯಲ್ಲಿ ಮಾತನಾಡುತ್ತಾ ಒಂದು ದೇಶವು ರಾಜಕೀಯ ಮಟ್ಟದಲ್ಲಿ ಇಲ್ಲವೇ ಆರ್ಥಿಕ ಮಟ್ಟದಲ್ಲಿ ಪ್ರಗತಿ ಸಾಧಿಸಿದ ಮಾತ್ರಕ್ಕೆ ನಿಜವಾದ ಪ್ರಗತಿ ಸಾಧಿಸಿದಂತಾಗುವದಿಲ್ಲ ಸಾಮಾಜಿಕ ಮಟ್ಟದಲ್ಲಿಯೂ ಪ್ರಗತಿ ಸಾಧಿಸಿದಾಗಲೇ ಇಂತಹ ಪ್ರಗತಿ ಸಾಧ್ಯವಾಗಬಲ್ಲದು ಎಂದು ಅಭಿಪ್ರಾಯ ಪಟ್ಟರು.

ಗಾಂಧೀಜಿಯವರು ಅಸ್ಪೃಶ್ಯತೆಯ ವಿರುದ್ಧ ಆರಂಭಿಸಿದ ಧರ್ಮಯುದ್ಧವನ್ನು ಅವರ ಉತ್ತರಾಧಿಕಾರಿಯಾದ ನೆಹರೂ ಮುಂದುವರಿಸಿಕೊಂಡು ಬಂದರು ಜಾತೀಯತೆಯ ವಿರುದ್ಧ ಖಡ್ಗವನ್ನೆತ್ತಿದ ಅವರು ಈ ಹೋರಾಟದ ಯೋಜನಾಬದ್ಧ ಬೆಳವಣಿಗೆಗೆ ಕಾರಣರಾದರು

ನೆಹರೂ ಅವರು ಒಮ್ಮೆ ಜಾತೀಯತೆಯ ಬಗ್ಗೆ ಮಾತನಾಡುತ್ತಾ ಜಾತೀಯತೆಯು ಸಂಪ್ರದಾಯದ ಮೇಲೆ ರೂಪುಗೊಂಡ ಅವಾಸ್ತವ ದೃಷ್ಟಿಕೋನ ಈ ವಿಧವಾದ ದೃಷ್ಟಿಕೋನವು ಆಧುನಿಕ ಸ್ಥಿತಿಗಳು ಮತ್ತು ಪ್ರಜಾಪ್ರಭುತ್ವ ಆದರ್ಶಕ್ಕೆ ತೀರ ವಿರುದ್ಧವಾಗಿವೆ ಎಂದೂ ಅಭಿಪ್ರಾಯ ಪಟ್ಟರು.

1946 ರಷ್ಟು ಹಿಂದೆಯೇ ನೆಹರೂ ಅವರು ತಮ್ಮ ಸುಪ್ರಸಿದ್ಧ ಡಿಸ್ಕವರಿ ಆಫ್ ಇಂಡಿಯಾ ಗ್ರಂಥದಲ್ಲಿ ಜಾತೀಯತೆಯನ್ನು ಕುರಿತು ಪ್ರಸ್ತಾಪಿಸುತ್ತಾ ಇಂದಿನ ಸಮಾಜ ವ್ಯವಸ್ಥೆಯಲ್ಲಿ ಜಾತೀಯತೆ ಮತ್ತು ತತ್ಸಂಬಂಧವಾದ ಇನ್ನಿತರವಿಚಾರಗಳು ಪ್ರತಿಗಾಮಿಯಾಗಿದ್ದು ಪ್ರಗತಿಗೆ ಆತಂಕಕಾರಿಯಾಗಿವೆ ಇಂತಹ ಒಂದು ಚೌಕಟ್ಟಿನಲ್ಲಿ ಸಮಾನ ಸ್ಥಾನಮಾನಗಳು ಅವಕಾಶಗಳು ಸಿಗಲಾರವು ಇಷ್ಟೇ ಅಲ್ಲ ರಾಜಕೀಯ ಪ್ರಜಾಪ್ರಭುತ್ವವಾಗಲಿ ಆರ್ಥಿಕ ಪ್ರಜಾಪ್ರಭುತ್ವವಾಗಲಿ ಸಾಧ್ಯವಾಗಲಾರದು ಎಂದು ಹೇಳಿದರು.

1948 ರಲ್ಲಿ ರಾಷ್ಟ್ರವನ್ನುದ್ದೇಶಿಸಿ ಪ್ರಸಾರ ಭಾಷಣ ಮಾಡುತ್ತಾ ನೆಹರೂ ಅವರು ಅಸಮಾನತೆ ಪಕ್ಷಪಾತ ಮತ್ತು ದಬ್ಬಾಳಿಕೆ ಇರುವಲ್ಲಿ ಅನ್ಯಾಯ ಅಸತ್ಯಕ್ಕೆ ಕೇಡು ಖಂಡಿತವಾಗಿಯೂ ಇರುತ್ತವೆ........ ಮಾನವೀಯತೆಯ ದೃಷ್ಟಿಯಿಂದ ಮಾತ್ರವಲ್ಲ ರಾಜಕೀಯ ವ್ಯಾವಹಾರಿಕ ದೃಷ್ಟಿಯಿಂದಲೂ ಜನಸಾಮಾನ್ಯರ)ಜೀವನ ಮಟ್ಟವನ್ನು ಸುಧಾರಿಸುವದು ಮತ್ತು ಪ್ರಗತಿಗೆ ಪೂರ್ಣ ಅವಕಾಶ ಕಲ್ಪಿಸಿಕೊಡುವದು ಅಗತ್ಯವಾಗಿದೆ ಜನಸಾಮಾನ್ಯರಿಗೆ ಇಂತಹ ಅವಕಾಶವನ್ನು ನಿರಾಕರಿಸುವ ಸಮಾಜ ವ್ಯವಸ್ಥೆಯು ಖಂಡನಾರ್ಹವಾಗಿದ್ದು ಅಂತಹ ವ್ಯವಸ್ಥೆಯ ಪರಿವರ್ತನೆ ಅನಿವಾರ್ಯವಾಗುತ್ತದೆ ಎಂದೂ ಅವರು ಹೇಳಿದರು.

ಅಸ್ಪೃಶ್ಯತೆಯ ವಿರುದ್ಧ ಆರಂಭವಾದ ಧರ್ಮಯುದ್ಧವನ್ನು ನೆಹರೂ ಅವರು ಜಾತೀಯತೆಗೂ ಅನ್ವಯಿಸಿದರು. ಧರ್ಮ ಮತ್ತು ರಾಜಕೀಯಗಳೆರಡೂ ಜಾತೀಯತೆಗೆಸೇರಿಸುವದುಹೆಚ್ಚು ಅಪಾಯಕಾರಿಎಂದೂ ಅವರು ಅಭಿಪ್ರಾಯ ಪಟ್ಟರು.

೧೧ ನೇ ಪುಟಕ್ಕೆ

ಗೀತಾಧರ್ಮ

ಮೂಲ: ಅರವಿಂದರು

ಲೇ.:- ನಾ. ವ. ಪಂ. ದೊಡ್ಡಯ್ಯಶಾಸ್ತ್ರಿಗಳು ನಾಗರಹಾಳ್ಳ

ಗೀತೆಯನ್ನು ಶ್ರದ್ಧೆಯಿಂದ ಓದಿದವರ ಮನಸ್ಸಿನಲ್ಲಿ ಬಹುಶಃ ಈ ಪ್ರಶ್ನೆಯು ಉದ್ಭವಿಸಬಹುದು ಶ್ರೀ ಕೃಷ್ಣ ಭಗವಂತನು ಮಾತು ಮಾತಿಗೆ ಯೋಗ್ಯ ಶಬ್ದವನ್ನು ಹಿಡಿದು ವ್ಯವಹರಿಸುವ ಯುಕ್ತಾವಸ್ಥೆಯನ್ನು ವರ್ಣಿಸವದು ಕಾಣುತ್ತದೆ. ಏಕೆ? ಈ ಯೋಗವು ಸಾಧಾರಣವಾಗಿ ಲೋಕದಲ್ಲಿ ಯೋಗವೆಂದು ಹೆಸರಾದ ಅರ್ಥಕ್ಕೆ ಸರಿ ಹೋಗುವದೇ? ಎಂದು ಶ್ರೀ ಕೃಷ್ಣನು ಅಲ್ಲಲ್ಲಿಗೆ ಸನ್ಯಾಸ ಮಾರ್ಗವನ್ನು ಪ್ರಶಂಶಿಸಿರುವನು ಅನಿರ್ದೇಶ್ಯವೂ ಆದ ಪರಬ್ರಹ್ಮದ ಉಪಾಸನೆಗೆ ಫಲವು ಪರಮಗತಿಯೆಂದು ನಿರ್ದೇಶಿರುವನು.

ಆದರೂ ಅದನ್ನು ಬಹು ಸಕ್ಷಿಪ್ತವಾಗಿ ಸಮಾಪ್ತಿಮಾಡಿ ಗೀತೆಯ ಬಹುಭಾಗದಲ್ಲಿ ತ್ಯಾಗದ ಮಹತ್ವವು ವಾಸುದೇವನಲ್ಲಿ ಶ್ರದ್ಧೆಯಿಂದಲೂ ಆತ್ಮ ಸಮರ್ಪಣದಿಂದಲೂ ಪರಮಗತಿ ಪ್ರಾಪ್ತಿಯಂದು ಇದನ್ನು ವಿವಿಧೋಪಾಯಗಳಿಂದ ಅರ್ಜುನನಿಗೆ ಬೋಧಿಸಿದ್ದಾನೆ. ಆರನೇ ಅಧ್ಯಾಯದಲ್ಲಿ ರಾಜ ಯೋಗ ಸ್ವಲ್ಪ ಮಟ್ಟಿಗೆ ವರ್ಣಿಸಿರುವನು ಆದರೂ ಗೀತೆಯನ್ನು ರಾಜಯೋಗವನ್ನು ತಿಳಿಸುವ ಗ್ರಂಥವೆಂದು ಹೇಳಲು ಅವಕಾಶವಿಲ್ಲ

ಸಮತೆ ಅನಾಸಕ್ತಿ ಕರ್ಮ ಫಲ ತ್ಯಾಗವು ಇವೆಲ್ಲವು ಶ್ರೀ ಕೃಷ್ಣನಲ್ಲಿ ಸಂಪೂರ್ಣವಾದ ಆತ್ಮ ಸಮರ್ಪಣ ನಿಷ್ಕಾಮ ಕರ್ಮ ಗುಣಾತೀತತತ್ವ ಮತ್ತು ಸ್ವಧರ್ಮ ಸೆ ವಾ ಇವೆ ಮುಂತಾದವುಗಳು ಗೀತೆಯಮೂಲ ತತ್ವಗಳು ಈ ಶಿಕ್ಷಣವನ್ನೇ ಭಗವಂತನು ಪರಮ ಜ್ಞಾನಂವೆದು ಗೂಢ ತಮ್ಮ ರಹಸ್ಯವೆಂದು ಕೀರ್ತಿ ಆಗುವನು. ನಮ್ಮ ನಂಬಿಗಯ ಗೀತೆಯಲ್ಲಿ ಜಾಗತಿಕ ಭಾವಿ ಧರ್ಮಕ್ಕೆ ಸರ್ವ ಜನ ಸಮ್ಮತವಾದ ಶಾಸ್ತ್ರವಾಗಬಹುದು. ಆದರೆ ಗೀತೆಯ ನಿಜವಾದ ಧರ್ಮವು ಎಲ್ಲರಿಗೆ ತಿಳಿಯಲು ಶಕ್ಯವಿಲ್ಲ ದೊಡ್ಡ ದೊಡ್ಡ ಪಂಡಿತರು ಉತ್ತಮರಾದ ಮೇಧಾವಿಗಳು ತೀಕ್ಷ್ಣ ಬುದ್ಧಿ ಇರುವ ಲೇಖಕರು ಸಹ ಇದರ ಗೂಡಾರ್ಥವನ್ನು ಗ್ರಹಿಸಲ ಸಮರ್ಥರಾಗಿಲ್ಲ ಒಂದು ಭಾಗದಲ್ಲಿ ಮೋಕ್ಷಕ್ಕೆ ಪರಾಯಣರಾದ ವ್ಯಾಖ್ಯಾನುಕಾರ ರಾದರೂ ಗೀತೆಯಲ್ಲಿ ಅದ್ವೈತ ತವಾದವನ್ನು ಸನ್ಯಾಸ ಧರ್ಮ

ವನ್ನು ಶ್ರೇಷ್ಠತ್ವವೆಂದು ನೋಡಿರುವರು. ಮತ್ತೊಂದು ಭಾಗದಲ್ಲಿ ಆಂಗ್ಲೇಯ ದರ್ಶನ ಪಾರಂಗತರಾದ ಬಂಕಿಮಚಂದ್ರನು ಕೇವಲ ವೈರಭಾವದಿಂದ ಕರ್ತವ್ಯವನ್ನು ಪರಿಪಾಲಿಸಿದ ಮಾತ್ರವೇ ಗೀತೆಯಲ್ಲಿ ಉಪದೇಶಿಸಲ್ಪಟ್ಟಿರುವದೆಂದು ತಿಳಿದು ಆ ಅರ್ಥವನ್ನೇ ತರುಣ ಜನರ ಮನಸ್ಸಿನಲ್ಲಿ ನಾಟಿಸಲು ಯತ್ನಿಸಿದ್ದಾನೆ. ಸನ್ಯಾಸ ಧರ್ಮವು ಬಹುಶಃ ಧರ್ಮವೆಂದು ಹೇಳುವದರಲ್ಲಿ ಸಂದೇಹವಿಲ್ಲ. ಆದರೂ ಆ ಧರ್ಮವು ಬಹಳ ಸ್ವಲ್ಪ ಮಂದಿಗೆ ಮಾತ್ರವೇ ಆಚರಣೆಯುಳ್ಳದ್ದಾಗಿದೆ, ಧರ್ಮವು ಸರ್ವಜನ ಸಮ್ಮತವಾಗಲು ಅದನ್ನು ಆದರ್ಶ ತತ್ವ ಶಿಕ್ಷಣ ಸರ್ವ ಸಾಧಾರಣವಾಗಿ ಎಲ್ಲರೂ ತಮ್ಮ ತಮ್ಮ ಜೀವಿತದಲ್ಲಿ ಕರ್ಮ ಕ್ಷೇತ್ರದಲ್ಲಿ ಸುಗಮ ಮಾಡಿಕೊಳ್ಳಲು ಅವಕಾಶವಿರಬೇಕು ಮತ್ತು ಆ ಆದರ್ಶವು ಸಂಪೂರ್ಣವಾಗಿ ಆಚರಿಸುವದರಿಂದ ಅಲ್ಪಜನ ಸಾಧ್ಯವೆಂದು ಹೇಳುವ ಆ ಪರಮಗತಿಯು ಪ್ರಾಪ್ತಿಯಾಗಬೇಕು ವೀರಭಾವದಿಂದ ಕರ್ತವ್ಯವನ್ನು ಪಾಲಿಸುವ ಶ್ರೇಷ್ಠ ಧರ್ಮವು ನಿಜವಾಗಿದ್ದರೂ ಆದರೆ ಕರ್ತವ್ಯವೆಂದರೇನು? ಅನ್ನುವ ಈ ಜಟಿಲದಿಂದ ಪ್ರಶ್ನೆಯು ಮತಗಳಲ್ಲಿ ನೀತಿಯಲ್ಲಿ ಎಷ್ಟೋ ಸಂಕಟವಾಗಿರುತ್ತದೆ. ಕರ್ಮಗತಿ ಗಹನವೂ, ಕರ್ತವ್ಯವೆಂದರೇನು? ಅ ಕರ್ತವ್ಯವೆಂದರೇನು? ಯಾವುದು ಕರ್ಮ? ಯಾವುದು ಅ ಕರ್ಮ? ಮತ್ತು ವಿ ಕರ್ಮ? ಇವನ್ನು ನಿರ್ಣಯಿಸುವ ಜ್ಞಾನಿಗಳು ವಿಮೋಹಿತರಾಗಿದ್ದಾರೆ. ಆದರೂ ಯಾವ ಜ್ಞಾನದಿಂದ ಕರ್ತವ್ಯ ಮಾರ್ಗವೂ ಸುಲಭವಾಗಿಯೂ ನಿರ್ಣಯಿಸಲ್ಪಡುವುದು. ಕರ್ಮ ಜೀವಿತದ ಲಕ್ಷ್ಯವು ನಿತ್ಯವಾಗಿ ಅನುಷ್ಠಿಸಲ್ಪಡುವ ನಿಯಮಗಳು ಸುಸ್ಪಷ್ಟವಾಗಿ ಒಂದೇ ಮಾತಿನಲ್ಲಿ ವ್ಯಾಖ್ಯಾತವಾಗುವದೋ ಅಂತಹ ಜ್ಞಾನವು ನಿನಗೆ ಕೊಡುವೆನು ಎಂದು ಭಗವಂತನು ಹೇಳಿದ್ದಾನೆ. ಈ ಜ್ಞಾನ ಯಾವುದು? ಸಾವಿರ ಮಾತುಗಳ ಸಾರವಾದ ಈ ಒಂದು ಮಾತನ್ನು ಎಲ್ಲಿ ತಿಳಿದುಕೊಳ್ಳಬೇಕು? ಗೀತೆಯ ಕಡೆಯ ಅಧ್ಯಾಯದಲ್ಲಿ ಭಗವಂತನು ತನ್ನ ಮಹತ್ತರವಾದ ಪರಮವಚನವನ್ನು ಅರ್ಜುನನಿಗೆ ತಿಳಿಸುತ್ತೇನೆಂದು ವಾಗ್ದಾನ ಕೊಟ್ಟಿರುವನೋ ಅಲ್ಲಿಯೇ ಈ ದುರ್ಲಭವಾದ, ಅಮೂಲ್ಯವಾದ ವಸ್ತುವನ್ನು ಹುಡುಕಿದರೆ ದೊರೆಯಬಹುದೆಂದು ನನ್ನ ವಿಶ್ವಾಸ ಸರ್ವ ಗುಹ್ಯತಮವಾದ ಆ ಪರಮ ವಚನವಾವುದು?

ಮನ್ಮನಾಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ಮಾಮೇ ವೈಷ್ಯಸಿ ಸತ್ಯಂತೇ ಪ್ರತಿಜಾನೇ ಪ್ರಿಯೋಽಸಿ ಮೇ
ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚ.

ಈ ಎರಡು ಶ್ಲೋಕಗಳ ಅರ್ಥವನ್ನು ಒಂದೇ ಮಾತಿನಲ್ಲಿ ತಿಳಿಸಬಹುದು. ಆ ಮಾತು ಯಾವುದು? ಆತ್ಮ ಸಮರ್ಪಣ.

ಯಾವ ಯಾನ ದೃಷ್ಟಿಯಿಂದ ಶ್ರೀ ಕೃಷ್ಣನಲ್ಲಿ ಆತ್ಮ ಸಮರ್ಪಣ ಮಾಡುವು

ದನ್ನು ಕಲಿತಿರುವನೋ ಆತನ ಶರೀರದಾದ್ಯಂತ ಭಗವದ್ದತ್ತವಾದ ಶಕ್ತಿ ಪ್ರವೇಶಿಸಿ ಪರಮ ಮಂಗಳಪ್ರದವಾದ ಭಗವಂತನ ಪ್ರಸಾದದಿಂದ ಪಾಪ ವಿಮುಕ್ತಿಯನ್ನು ಹೊಂದಿ ದೇವ ಭಾವನೆಯನ್ನು ಒಡಮುಡಿಸಿಕೊಂಡಿರುವನು ಈ ಆತ್ಮ ಸಮರ್ಪಣವು ಮೊದಲನೇ ಶ್ಲೋಕದ ಮೊದಲನೇ ಪಂಕ್ತಿಯಲ್ಲಿ ವರ್ಣಿಸಲ್ಪಟ್ಟಿದೆ. ತನ್ಮನಸ್ಕನು ತದ್ಭಕ್ತನು ತದ್ಯಾದಿಯೂ ಆಗಬೇಕು. ತನ್ಮನಸ್ಕವೆಂದರೆ ಸರ್ವ ಭೂತಗಳಲ್ಲಿ ಆತನನ್ನು ಸ್ಮರಿಸುವುದು ಸರ್ವಕಾಲಗಳಲ್ಲಿಯೂ ಸರ್ವ ಘಟನೆಗಳಲ್ಲಿಯೂ ಆತನ ಶಕ್ತಿ ಜ್ಞಾನ ಪ್ರೇಮಗಳ ಲೀಲೆಯೆಂದು ನೋಡಿ ಪರಮಾನಂದ ಸ್ಥಿತಿಯಲ್ಲಿ ಇರುವದು ತದ್ಭಕ್ತವೆಂದರೆ ಆತನ ಮೇಲೆ ಸಂಪೂರ್ಣವಾದ ಶ್ರದ್ಧಾಪ್ರೇಮಗಳನ್ನು ನಿಲ್ಲಿಸಿ ಆತ್ಮನಲ್ಲಿ ಸಮರಸವಾಗುವಿಕೆ ತದ್ಯಾದಿ ಎಂದರೆ ಅಲ್ಪವೂ ಅನಲ್ಪವೂ ಆದ ಸರ್ವ ಕರ್ಮಗಳನ್ನು ಶ್ರೀ ಕೃಷ್ಣನನ್ನುದ್ದೇಶಿಸಿ ಯಜ್ಞ ಭಾವದಿಂದ ಸಮರ್ಪಿಸುವುದು ಮತ್ತು ಸ್ವಾರ್ಥದಲ್ಲಿ ಕರ್ಮ ಫಲದಲ್ಲಿ ಆಸಕ್ತಿಯನ್ನು ಬಿಟ್ಟು ಭಗವದರ್ಥವೇ ಕರ್ತವ್ಯ ಕರ್ಮವೆಂದು ತಿಳಿಯಬೇಕು. ಮಾನವನ ಪಕ್ಷವೂ ಸಂಪೂರ್ಣವಾದ ಆತ್ಮ ಸಮರ್ಪಣವು ಕಠಿಣವಾಗಿದೆ ಅಲ್ಲದೆ ಸ್ವಲ್ಪವಾದರೂ ಪ್ರಯತ್ನ ಮಾಡಿದರೆ ಸ್ವಯಂವಾಗಿ ಭಗವಂತನೇ ಗುರುವು ರಕ್ಷಕನು ಸಹಕಾರಿಯಾಗಿ ಅಭಯದಾನಕೊಟ್ಟು ಯೋಗ ಪಥದಲ್ಲಿ ನಮ್ಮನ್ನು ಮುಂದುವರಿಸಲು ಬಯಸುವನು. "ಸ್ವಲ್ಪ ಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್", ಈ ಧರ್ಮವನ್ನು ಆಚರಿಸುವದು ಸುಲಭವೆಂದು ಸುಖ ಪ್ರದವೆಂದೂ ಆತನು ನುಡಿದಿರುವನು. ಅದು ಯಥಾರ್ಥವಾಗಿದೆ ಮತ್ತು ಸಂಪೂರ್ಣ ಆಚರಣೆಯ ಫಲವು ಅನಿರ್ವಚನೀಯವಾದ ಆನಂದವು ಶುದ್ಧಿ ಶಕ್ತಿ ಲಾಭವು ಮಾಮೇ ವೈಷ್ಯಸಿ ಅಂದರೆ ನನ್ನನ್ನು ಸೇರುವಿ ನನ್ನ ಸಂಗಡ ವಾಸಿಸುವಿ ನನ್ನ ಪ್ರಕೃತಿಯನ್ನು ಹೊಂದುವಿ ಈ ಮಾತಿನಲ್ಲಿ ಸಾದೃಶ್ಯ ಸಾಲೋಕ್ಯ ಸಾಮೀಪ್ಯ ಸಾರೋಪ್ಯ ಎಂಬ ಫಲಗಳ ಪ್ರಾಪ್ತಿ ತಿಳಿಸಿರುವನು.

ಯಾವನು ಗುಣಾತೀತನೋ ಅವನು ಭಗವಂತನ ಸಾದೃಶ್ಯವನ್ನು ಹೊಂದುವನು. ಆತನಿಗೆ ಯಾವ ಆಸಕ್ತಿಯೂ ಇಲ್ಲ ಆದರೂ ಕರ್ಮವೆಸಗುತ್ತಾನೆ. ಪಾಪ ವಿಮುಕ್ತನಾಗಿ ಮಹಾಶಕ್ತಿಗೆ ಆಧಾರವಾಗುವನು ಆ ಶಕ್ತಿಯು ಸರ್ವಕಾರ್ಯಗಳಲ್ಲಿ ಆನಂದಿಸುವದು ದೇಹತ್ಯಾಗವಾದ ಬಳಿಕ ಬ್ರಹ್ಮಲೋಕವನ್ನು "ಸೇರುವುದೇ ಸಾಲೋಕ್ಯವೋ ಅಲ್ಲ, ಈ ಶರೀರದಲ್ಲಿಯೇ ಸಾಲೋಕ್ಯವು ಸಿದ್ಧಿಸುವುದು ದೇಹಯುಕ್ತನಾದ ಜೀವನ ತನ್ನ ಮನಸ್ಸಿನಲ್ಲಿ ಪರಮೋಶ್ವರನ ಸಂಗಡ ಕ್ರೀಡಿಸುವನು ಮನಸ್ಸು ಆತನಿಂದ ಕೊಡಲ್ಪಟ್ಟ ಜ್ಞಾನದಿಂದ ಪುಲಕಿತನಾಗುವನು. ಹೃದಯವು ಆತನ ಪ್ರೇಮ ಸ್ಪರ್ಶದಿಂದ ಆನಂದ ಸಂಪ್ಲುತನಾಗುವದು. ಬುದ್ಧಿಯೂ ಮಾತು ಮಾತಿಗೆ ಆತನ ನುಡಿಗಳನ್ನು ಕೇಳುವದು ಮತ್ತು ಪ್ರತಿ ಎಚ್ಚರಿಕೆಯಲ್ಲಿ ಆತನ ಪ್ರೇರಣದಿಂ

ದಲೇ ಅನು ಭೂತನಾಗುವನೋ ಆ ಸ್ಥಿತಿಯೇ ಮಾನವನ ಶರೀರದಲ್ಲಿ ಭಗವಂತನೀದ ಕೂಡಿದ ಸಾಲೋಕ್ಯವು

ಸಾಯುಜ್ಯವನ್ನು ಈ ಶರೀರದಲ್ಲಿ ಘಟಿಸುವದು ಭಗವಂತನ ಸಗಂಡ ಅನು ವಾಸಿಸುವದನ್ನು ಕುರಿತು ಗೀತೆಯಲ್ಲಿ ಹೇಳಲ್ಪಟ್ಟಿದೆ. ಸರ್ವ ಜೀವಿಗಳಲ್ಲಿ ಆತನೇ ಅನ್ನುವ ಉಪಲಬ್ದಿ ಯಾವನ ಸ್ಥಿರವಾಗಿ ನಿಲ್ಲಿಸಿರುವನೊ ಇಂದ್ರಿಯಗಳು ಯಾವಾಗಲೂ ಆತನನ್ನೇ ನೋಡುತ್ತಿರುವವೋ ಕೇಳುತ್ತಿರುವವೋ ಮೂಸುತ್ತಿ ುವವೋ ಆಸ್ವಾದಿಸುತ್ತಿರುವವೋ ಸ್ಪರ್ಶಿಸುತ್ತಿರುವೋ ಜೀವನು ಯಾವಾಗಲೂ ಆತನಲ್ಲಿ ಅತಿಯಾಗಿ ನಿಲ್ಲುವುದನ್ನು ಕಲಿಯುವದನ್ನು ಅಭ್ಯಸಿಸುತ್ತಿರುವನೋ ಆಗ ಈ ಶರೀರದಲ್ಲಿ ಸಾಯುಜ್ಯವು ಘಟ್ಟಿಸುತ್ತದೆ. ಸಂಪೂರ್ಣವಾದ ಅದು ಸೀಲನೆಗೆ ಫಲವು ಈ ಪರಮ ಗತಿ ಪ್ರಾಪ್ತಿಯಾಗುವದು ಅಲ್ಲದೆ ಈ ಧರ್ಮವನ್ನು ಸ್ವಲ್ಪ ಆಚರಿಸಿದರು ದೊಡ್ಡ ಶಾಂತಿ ವಿಮಲವಾದ ಆನಂದ ಪೂರ್ಣವಾದ ಸುಖ ವಿಶುದ್ಧಿ ಇವೇ ಮುಂತಾದುವುಗಳನ್ನು ಹೊಂದಬಹುದು ಈ ಧರ್ಮವು ವಿಶಿಷ್ಟ ಗುಣ ಸಂಪನ್ನರಾದಕೆಲವರಿಗೆ ಮಾತ್ರವೇ ಸೃಷ್ಟಿಸಲ್ಪಟ್ಟಿಲ್ಲ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಪುರುಷರು ಸ್ತ್ರೀಯರು ಮತ್ತು ಪಾಪಯೋನಿಸ್ಟರೂ ಆದ ಸಕಲ ಜೀವಿಗಳನ್ನು ಈ ಧರ್ಮದ ದ್ವಾರದಿಂದ ಆತನನ್ನು ಕಾಣಬಹುದು ಘೋರ ಪಾಪಿಗಳು ಆತನಿಗೆ ಶರಣುಹೋಗಿ ಸ್ವಲ್ಪ ಕಾಲದಲ್ಲಿಯೇ ಪವಿತ್ರ ರಾಗುವರು ಆದರಿಂದಲೇ ಗೀತಾದರ್ಮವು ಎಲ್ಲರಿಗೂ ಆಚಾರಣೀಯವಾದದ್ದು ಜಗನ್ನಾಥನ ಆಲಯದಲ್ಲಿ ಜಾತಿ ವಿಚಾರವಿಲ್ಲ ಮತ್ತು ಇದಕ್ಕೆ ಫಲವಾದ ಪರಮ ಗತಿಯೂ ಬೇರೆ ಯಾವ ಧರ್ಮದಿಂದ ನಿರ್ದೇಶಿಸಲ್ಪಟ್ಟ ಪರಮಗತಿಯನ್ನು ತೆಗೆದುಕೊಂಡು ಹೋಗುವುದಿಲ್ಲ

(೩ ನೇ ಪುಟದಿಂದ ಬಂದದ್ದು)

ಆಶಾವಾದವಾದವಾಗಿದೆ. ಆದರೆ ಅಗಮ್ಯ ಅನುಪಮ ಹಾಗೂ ಅನಂತವಾದ ಆನಂದವನ್ನು ಅನುಭವಿಸಬೇಕಾದರೆ ನಿತ್ಯಾನಿತ್ಯ ವಸ್ತುಗಳ ವಿವೇಕ ವಿಚಾರ ಪೂರ್ಣವಾದ ವೈರಾಗ್ಯ ಭಾಗ್ಯವೇ ಈ ಆಧ್ಯಾತ್ಮ ಯೋಜನೆಯ ಪ್ರಬಲ ಸಾಧನೆಯ ಗುರಿಯಾಗಿದೆ.

ಸಾಧಕನು ಸತ್ಯ ಅಹಿಂಸೆ ಮತ್ತು ಬ್ರಹ್ಮಚರ್ಯವನ್ನು ಪಾಲಿಸುತ್ತ ಜಪ, ಧ್ಯಾನ ಧರ್ಮಗ್ರಂಥಗಳ ಅಧ್ಯಯನಾದಿಗಳಲ್ಲಿ ನಿರತನಾಗಿ, ನಿರಹಂಕಾರಿಯಾಗಿ ನಿಸ್ವಾರ್ಥ ಸೇವೆಗೈಯುತ್ತಾ ನಾಮರೂಪಗಳಲ್ಲಿ ತೋರುವ ಯಾವತ್ತೂ ಜಗತ್ತಿನ ಭೋಗಭಾಗ್ಯ ವಸ್ತುಗಳಲ್ಲಿ ಆದ್ಯಂತವಾಗಿ ತನ್ನ ಆತ್ಮವನ್ನೆ ಕಾಣಲು ಸದಾ ಯತ್ನಿಸಿರುವಾತನು. ಭಗವಂತನ ಸಾನಿಧ್ಯವನ್ನು ಶೀಘ್ರ ಸೇರುವನು ಮಾಯಾ ಪ್ರಪಂಚವನ್ನು ದಾಟಿ ಆತನು ಸದಾ ಸುಖಸಾಮ್ರಾಜ್ಯಸಿಂಹಾಸನಾಧಿಪತಿಯಾಗುವನು ಇಂಥಹ ಅವಿನಾಶಾನಂದವನ್ನು ಪಡೆಯುವದೇ ಮಾನವನ ಧ್ಯೇಯವಾಗಿರಬೇಕು. ●

ಭಾವೋದ್ರೇಕ ದುಷ್ಪರಿಣಾಮ

ಲೇಖಕರು:—**ಡಾ. ಎನ್. ಕೆ. ಕುಲಕರ್ಣಿ**, ಹೋಮಿಯೊಪಥಿ ಮೆಡಿಕಲ್ ಆಫೀಸರ ಹುಬ್ಬಳ್ಳಿ.

ಮನುಷ್ಯನು ಬುದ್ಧಿ ಜೀವಿಯಾಗಿರುವಂತೆ ಭಾವಜೀವಿಯೂ ಹೌದು. ಬುದ್ಧಿ ಭಾವನೆಗಳೆರಡೂ ಹಾಸುಹೊಕ್ಕಾಗಿ ಸಮತೋಲವಾಗಿ ಕಾರ್ಯ ಮಾಡುತ್ತಿದ್ದರೆ ಮಾತ್ರ ಜೀವನವು ಸಮರಸವಾಗಿ ಸಾಗುವದು. ಎರಡರಲ್ಲೊಂದು ಪೂರ್ಣ ಲೋಪವಾಗಿ ಇನ್ನೊಂದು ಪೂರ್ಣ ಪ್ರಾಧಾನ್ಯತೆಯನ್ನು ಪಡೆದರೆ ಜೀವನವು ಸಮರಸವಾಗಿ ಕೇಡನ್ನು ತಂದೊಡ್ಡುವ ಒಟ್ಟು ಬುದ್ಧಿ ರಹಿತವಾದ ಭಾವನಾಧಾರೆಯು ಉದ್ರೇಕಗೊಂಡು ಉನ್ಮಾದ ರೂಪ ತಾಳಿತೆಂದರೆ ಸ್ವತಂದ ಆರೋಗ್ಯದ ಮೇಲೂ ಮತ್ತು ಅಕ್ಕ ಪಕ್ಕದವರ ಮೇಲೂ ಅನಿಷ್ಟ ಪರಿಣಾಮ ಬೀರಬಲ್ಲದು. ಇಂಥ ಪರಿಸ್ಥಿತಿಯಲ್ಲಿ ಬುದ್ಧಿಯು ಮೂಕ ಪ್ರೇಕ್ಷಕನಂತೆ ಎಲ್ಲಿಯೊ ಸ್ಥಬ್ಧವಾಗಿ ಕುಳಿತುಬಿಡುವದು.

ಭಾವನೆಗಳು ಪ್ರಸಂಗೋಚಿತವಾಗಿ ಪ್ರದರ್ಶಿಸುವವಷ್ಟು ಸೌಮ್ಯವಾಗಿರಬೇಕು. ಇಂಥ ಭಾವನೆಗಳು ಪ್ರಾಪಂಚಿಕ ಮತ್ತು ಸಾಮಾಜಿಕ ಬದುಕಿಗೆ ಅವಶ್ಯವಾಗಿವೆ. ಸರ್ವಸಂಗ ಪರಿತ್ಯಕ್ತನಾದ ಸನ್ಯಾಸಿಯಲ್ಲೂ ಕೆಲವು ಪೋಷಕ ಭಾವನೆಗಳು ಉದ್ಭವಿಸಲೇಬೇಕು. ಸಾಮಾನ್ಯ ಜನತೆಯಲ್ಲಿ ಕರುಣೆ, ಪ್ರೇಮ ಮತ್ತು ಸಮತಾ ಭಾವನೆಗಳೂ, ದೇವನಲ್ಲಿ ಭಕ್ತಿ ಭಾವನೆಯೂ ಪ್ರವಹಿಸುತ್ತಿರಬೇಕು.:

ಪ್ರೇಮ, ಆನಂದ, ಔದಾರ್ಯಗಳು ನಮಗೆ ಇಷ್ಟವಾದ ಮತ್ತು ಆರೋಗ್ಯಕರವಾದ ಭಾವನೆಗಳಾದರೂ—ಕ್ರೋಧ, ಭಯ, ದ್ವೇಷ, ಅಸೂಯೆಗಳು ಅನಿಷ್ಟ ಮತ್ತು ಅನಾರೋಗ್ಯಕರವಾದ ಭಾವನೆಗಳಾಗಿವೆ. ಪರಿಸ್ಥಿತಿ ಮತ್ತು ಪ್ರಕೃತಿಗನುಗುಣವಾಗಿ ಮನುಷ್ಯನು ಮೇಲ್ಕಂಡ ಎಲ್ಲ ಭಾವನೆಗಳನ್ನೂ ಪ್ರಸಂಗಾನುಸಾರ ಅನುಭವಿಸಬೇಕಾಗಬಹುದು. ಆದರೆ ಅನುಭವಿಸುವ ಭಾವನೆಯಾವುದೇ ಪ್ರಕಾರದ್ದಿದ್ದರೂ ಅದಕ್ಕೊಂದು ಮಿತಿ ಇರಬೇಕು. ಭಾವನೆಯು ಮೇರೆದಪ್ಪಿ ಉದ್ರಿಕ್ತಗೊಂಡರೆ ಆರೋಗ್ಯದ ಮೇಲೆ ಬಲವಾದ ಪೆಟ್ಟು ಬಿದ್ದು ಶಾರೀರಕ ವಿಕೃತಿಗಳು ಕಂಡು ಬರುವವಲ್ಲದೆ ಮನೋವಿಕೃತಿಯೂ ಸಂಭವಿಸಬಹುದು.

ಅಪಘಾತ ಮತ್ತು ಅಕಾಲಿಕ ಮರಣಗಳನ್ನು ಹೊರತುಪಡಿಸಿ ಮನುಷ್ಯನ ಜೀವನಾವಧಿಯು ಸಾಮಾನ್ಯವಾಗಿ ಅವನ ಬೆಳವಣಿಗೆಯ ಕಾಲಾವಧಿಯ ಐದುಪಟ್ಟು ಇರುವದೆಂದು ಗೊತ್ತಾಗಿದೆ. ಆದರೆ ಭಾವೋದ್ರೇಕಗಳ ಅನಿಷ್ಟ ಪರಿಣಾಮದಿಂದ ಈ ಜೀವನಾವಧಿಯ ಬಹುಭಾಗವು ಮೊಟಕುಗೊಳ್ಳುವದು. ಉದ್ರಿಕ್ತ ಭಾವನೆ

ಗಳನ್ನು ಯೋಗ್ಯ ರೀತಿಯಲ್ಲಿ ತಡೆಯು ದಿದ್ದರೆ ಶರೀರದ ಕಾರ್ಯ ಕ್ಷಮತೆಯು ಅಸ್ತವ್ಯಸ್ತಗೊಳ್ಳುವದು. ಭಿನ್ನ ಭಿನ್ನ ಭಾವೋನ್ಮಾದಗಳ ದುಷ್ಪರಿಣಾಮವು ಶರೀರ ದೊಳಗಿನ ಭಿನ್ನ ರಸ ಗ್ರಂಥಿಗಳ ಮೇಲಾಗಿ ಅದಕ್ಕನುಗುಣವಾದ ರೋಗ ಪ್ರಾಪ್ತವಾಗುವದು ಉದಾಹರಣೆಗೆ ದೀರ್ಘಾವಧಿಯ ದುಃಖ ಮತ್ತು ಚಿಂತೆಯಿಂದ ಅರ್ಬುದ (Cancer) ರೋಗ ಉಂಟಾಗಬಹುದು. ಕೋಪೋದ್ರೇಕವು ಮುಖದಲ್ಲಿಯ ಲಾಲಾ ರಸವನ್ನು ವಿಷಮಯವನ್ನಾಗಿ ಮಾರ್ಪಡಿಸಿ ತಿಂದ ಅನ್ನವು ಜೀರ್ಣಗೊಳ್ಳದೆ ಹುಳಿತು, ಅಪಚನ, ಹೊಟ್ಟೆನೋವು ಮತ್ತು ಹುಳಿವಾಂತಿಗೆ ಕಾರಣವಾಗುವದು.

ಅಂತೆಯೇ ತಾಯಿಯ ಕೋಪಾವೇಶವು ಶಿಶುವಿನ ಶರೀರ ಪೋಷಣೆಗೆ ಅಮೃತ ಸಮವಾದ ಅವಳ ಎದೆಯ ಹಾಲನ್ನು ವಿಷಮಯಗೊಳಿಸುವದು ಇಂಥ ಹಾಲನ್ನು ಮಗುವು ಸ್ವೀಕರಿಸಲು ನಿರಾಕರಿಸಿದ ಪರಿಣಾಮವಾಗಿ ಹಸಿವನ್ನು ತಾಳಲಾರದೆ ಕಿರುಚಿಕೊಳ್ಳುವದು. ವಸ್ತು ಸ್ಥಿತಿಯ ಅರಿವು ಇಲ್ಲದ ತಾಯಿಯು ಮತ್ತಷ್ಟು ರೇಗಿ ಮಗುವನ್ನೇ ದಂಡಿಸುವಳು. ಒಂದು ವೇಳೆ ಒತ್ತಾಯದಿಂದ ಮಗುವು ಅದೇ ಹಾಲನ್ನು ಕುಡಿದರೆ ಮರುಕ್ಷಣದಲ್ಲಿ ಕುಡಿದ ಹಾಲೆಲ್ಲಾ ಹುಳಿತು ವಾಂತಿಯಾಗಿಬಿಡುವದು.

ಭಯವು ಯಕೃತ್ತಿನಲ್ಲಿ ಸಂಚಯವಾದ ಪಿತ್ತರಸವನ್ನು ಸ್ಥಗಿತಗೊಳಿಸುವದು ಮಧುಮೇಹ ಮತ್ತು ಪುಪ್ಪಸುಗಳ ರಕ್ತಸ್ರಾವವು ಭಯ ಮತ್ತು ಕೋಪೋನ್ಮಾದಗಳ ಪರಿಣಾಮಗಳಾಗಿವೆ. ನಿರಂತರ ಚಿಂತೆ ಮತ್ತು ಖಿನ್ನತೆ ಶರೀರದಲ್ಲಿಯ ಜೀವನ ಸತ್ವಗಳನ್ನು ಹ್ರಾಸಗೊಳಿಸಿ ಇಂದ್ರಿಯಗಳನ್ನು ನಿಸ್ಸತ್ವ ಸಾನುಗ್ರಿಗಳಿಂದ ತುಂಬಿ ಬಿಡುವದಲ್ಲದೆ ಪಾಚಕ ರಸಗಳ ಮೇಲೂ ತನ್ನ ಪ್ರಭಾವ ಬೀರಿ ಕರುಳು ರೋಗಕ್ಕೆ ಕಾರಣವಾಗುವದು. ಮಿತಿಮೀರಿದ ಮನೋವ್ಯಾಕುಲತೆಯು ಕೆಲವುಸಲ ಮನಸ್ಸಿನ ಮೂಲವನ್ನೇ ವಿಕೃತಗೊಳಿಸುವದು. ಈ ಕಾರಣದಿಂದ ಏರಿಬರುತ್ತಿರುವ ಭಾವನೆಗಳ ಒತ್ತಡವನ್ನು ಸಕಾಲದಲ್ಲಿ ನಿಯಂತ್ರಣದಲ್ಲಿಡುವದು ಅವಶ್ಯವಾಗಿದೆ. ಆದರೆ ಸಾಮಾನ್ಯವಾಗಿ ಮತ್ತು ಸ್ವೈಸರ್ಗಿಕವಾಗಿ ನಮ್ಮಲ್ಲಿ ಉದ್ಭವಿಸುವ ಸೌಮ್ಯ ಸ್ವರೂಪದ ಭಾವನೆಗಳು ನಮ್ಮ ನಿತ್ಯ ಜೀವನದಲ್ಲಿ ಅವಶ್ಯವಾಗಿದೆ.

ಭಯದ ಭಾವನೆಯು ಕೆಲಮಂಶದಿಂದ ನಮ್ಮಲ್ಲಿರದಿದ್ದರೆ ಗಂಡಾಂತರಕಾರಿಯಾದ ಪ್ರಸಂಗಗಳಿಂದ ತಪ್ಪಿಸಿಕೊಳ್ಳಲು ನಾವು ಸಾಕಷ್ಟು ಜಾಗರೂಕರಾಗುತ್ತಿರಲಿಲ್ಲ ಕರುಣಾ ಭಾವನೆ ಇರದಿದ್ದರೆ ಇತರರು ಪಡುತ್ತಿರುವ ಕಷ್ಟಕ್ಕೆ ಪರಿಹಾರ ಒದಗಿಸಲು ಮನಸ್ಸು ಸಿದ್ಧವಾಗುತ್ತಿರಲಿಲ್ಲ. ಕೆಲ ಮಟ್ಟಿನ ಕೋಪವಿರದಿದ್ದರೆ ದೌರ್ಜನ್ಯವನ್ನು ವಿರೋಧಿಸಲು ಸಾಕಷ್ಟು ಬಲ ಬರುತ್ತಿರಲಿಲ್ಲ. ಇವುಗಳಿಗೆ ಜೊತೆಯಾಗಿ ನಮಗೆ ಇಷ್ಟವಾದ ಮತ್ತು ಆರೋಗ್ಯಕರ ಭಾವನೆಗಳನ್ನು ನಾವು ಬೆಳೆಸಿಕೊಳ್ಳಬೇಕು. ಪ್ರೇಮ, ಆನಂದ ಆಶಾಭಾವನೆಗಳು ನಮ್ಮ ಶರೀರ ಮತ್ತು ಮನಸ್ಸುಗಳ ಆರೋಗ್ಯಕ್ಕೆ ಪೋಷಕವಾಗಿವೆ ಭಾವನೆಗಳೊಂದಿಗೆ

೧೮ ನೇ ಪುಟಕ್ಕೆ

ನೆಹರೂ ಅವರು ೧೯೫೪ರ ಡಿಸೆಂಬರ ೨೩ರಂದು ತಿರುಚೂರಿನಲ್ಲಿ ಮಾತನಾಡುತ್ತಾ "ಜಾತೀಯತೆಯು ಒಂದು ತುಂಬಾ ಅಪಾಯಕಾರೀ ಮನೋವೃತ್ತಿ ಅದು ಪ್ರತ್ಯೇಕತೆಯ ವಿನಾಶದ, ದ್ವೇಷಾಸೂಯೆಯ ಮನೋವೃತ್ತಿ ಭಾರತದ ದೃಷ್ಟಿಯಿಂದ ಅಹಿತಕರ ಮನೋವೃತ್ತಿ ಇಂತಹ ಜಾತೀಯವಾದವನ್ನು ಅದು ಹಿಂದು ಮುಹಮ್ಮದೀಯ ಸಿಖ್ ಅಥವಾ ಕ್ರೀಶ್ಚಿಯನ್ ಯಾವುದೇ ಇರಲಿ– ಬೆಳೆಸಿಕೊಂಡು ಬಂದರೆ ಭಾರತ ತನ್ನ ಇಂದಿನ ಸ್ವರೂಪವನ್ನು ಖಂಡಿತವಾಗಿಯೂ ಕಳೆದುಕೊಳ್ಳುತ್ತದೆ, ಛಿನ್ನ–ವಿಚ್ಛಿನ್ನವಾಗುತ್ತದೆ ಈ ಕಾರಣದಿಂದಾಗಿ ನಾವು ಜಾತೀಯತೆಯನ್ನು ಬದಿಗೊತ್ತಬೇಕು- ಎಂದು ಅವರು ಕರೆಯಿತ್ತರು.

ದೇಶದ ಜನತೆ ಸಂಕುಚಿತ ಮನೋವೃತ್ತಿಯನ್ನು ತೊರೆದು ದೊಡ್ಡ ದೊಡ್ಡ ವಿಷಯುಗಳನ್ನು ಕುರಿತು ಆಲೋಚಿಸಬೇಕು. ಇದು ದೇಶದ ನವ ನಿರ್ಮಾಣ ಕಾರ್ಯದಲ್ಲಿ ಸಹಾಯಕವಾಗಬಲ್ಲದ್ದೆಂದೂ ನೆಹರೂ ಅವರು ಸಲಹೆ ನೀಡಿದರು. ಜನರು ಆತ್ಮವಿಶ್ವಾಸದಿಂದ ಕಾರ್ಯ ಪ್ರವೃತ್ತರಾಗುವಂತೆ ನೆಹರೂ ಅಗತ್ಯವಾದ ಉತ್ತೇಜನ ನೀಡಿದರು.

ಆರಾಮ್ ಹರಾಮ್ ಹೈ

೧೯೫೪ರ ಅಕ್ಟೋಬರ್ ೧೩ರಂದು ನಡೆದ ಸಭೆಯೊಂದರಲ್ಲಿ ಮಾತನಾಡುತ್ತಾ ನೆಹರೂ ಅವರು "ದುಡಿಮೆ.... ದುಡಿಮೆ.... ದುಡಿಮೆ.... ಇದೇ ನನಗೆ ಇಂದು ಬೇಕಾಗಿರುವುದು ಗುರಿ ಸಾಧನೆಯಲ್ಲಿಯೇ ನಮ್ಮ ದೃಢ ಸಂಕಲ್ಪವಾಗಬೇಕು ಈ ದಿಶೆಯಲ್ಲಿ ಧರ್ಮಯೋಧರಂತೆ ಹೋರಾಡುವ ಜನರು ನನಗೆ ಅತ್ಯಂತ ಪ್ರಿಯರು" ಎಂದೂ ಹೇಳಿದರು.

ಜವಾಹರರು ಆರಾಮ್ ಹರಾಮ್ ಹೈ ಎಂಬ ಸಂದೇಶವನ್ನು ನಮಗೆ ನೀಡಿದರು. ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳು ದೊರೆಯದ ವಿನಃ ನಿಜವಾದ ಪ್ರಗತಿ ಸಾಧ್ಯವಾಗಲಾರದು ಎಂದೂ ಅವರು ಅಭಿಪ್ರಾಯಪಟ್ಟರು.

ನೆಹರೂ ಅವರು ಮಹಿಳೆಯರ ಶೈಕ್ಷಣಿಕ ಉನ್ನತಿಗಾಗಿ ಶ್ರಮಿಸಿದರು. ಮಹಿಳಾ ಕಲ್ಯಾಣ ಕಾರ್ಯಯೋಜನೆಗಳಿಗೆ ಅಧಿಕ ಪ್ರಾಧಾನ್ಯ ನೀಡಿದರು ಅಂತರ್ಜಾತೀಯ ವಿವಾಹಗಳ ಪ್ರತಿಪಾದಕರೂ ಆಗಿದ್ದರು. ಭಾರತದಲ್ಲಿ ಅಂತರ್ಜಾತೀಯ ವಿವಾಹಗಳು ಎಲ್ಲಿಯವರೆಗೆ ನಡೆಯುವುದಿಲ್ಲವೋ ಅಲ್ಲಿಯವರೆಗೆ ಐಕಮತ್ಯ ಸಾಧ್ಯವಾಗದೆಂದೂ ಅವರ ಅಭಿಮತ.

ಸುದ್ದಿ—ಸಮಾಚಾರ

ಹುಬ್ಬಳ್ಳಿ ಶ್ರೀ ಸಿದ್ಧಾರೂಢ ಮಹಾಸ್ವಾಮಿಗಳವರ ಮಠದಲ್ಲಿ ಶ್ರೀ ಶಿವಪುತ್ರ ಸ್ವಾಮಿಗಳವರಿಂದ ಶ್ರೀ ಭಗವದ್ಗೀತಾ ಹಾಗೂ ವಿವೇಕ ಚಿಂತಾಮಣಿ ಗ್ರಂಥಗಳ ಶಾಸ್ತ್ರ–ಪ್ರವಚನ ಜರುಗಿದೆ ಶ್ರೀ ಜೀವೇಶ್ವರ ದೇವಸ್ಥಾನದಲ್ಲಿ ಶ್ರೀ ಚಂದ್ರಸ್ವಾಮಿಗಳವರಿಂದ ಶ್ರೀ ನಿಜಗುಣ ಶಿವಯೋಗಿಗಳವರ ಕೈವಲ್ಯ ಪದ್ಧತಿಯ ಗ್ರಂಥದಲ್ಲಿಯ ನೀತಿ ಕ್ರಿಯಾಚಾರ ವಿಷಯವನ್ನು ನಿತ್ಯಸಾಯಂಕಾಲ ೫ರಿಂದ ೬ರ ವರೆಗೆ ಪ್ರತಿಪಾದಿಸುತ್ತಾರೆ.

ಬುದ್ಧಿಯ ೊ ಸರಿಬೇಕೆಯಾಗಿ ಕಾರ್ಯ ಮಾಡಬೇಕಾಗುವದು. ಇಲ್ಲವಾದರೆ ಉದ್ರಿಕ್ತಗೊಳ್ಳುತ್ತಿರುವ ಭಾವನೆಗಳನ್ನು ನಿಯಂತ್ರಣವಡ್ಡುವದು ಕಠಿಣವೆನಿಸುವದು. ಬುದ್ಧಿರಹಿತವಾದ ಯಾವದೇ ಭಾವನೆಯು ಉನ್ಮಾದವೆನಿಸುವದು. ಅದರಂತೆಯೇ ದ್ವೇಷ, ಅಸೂಯೆ, ಕೋಪ, ಭಯ ಮುಂತಾದ ಅನಿಷ್ಟ ಭಾವನೆಗಳಿಗೆ ಬದ್ಧಿಯ ಲಗಾಮು ಹಾಕದಿದ್ದರೆ ಅವೇ ಭಾವನೆಗಳು ಉದ್ರಿಕ್ತಗೊಂಡು ಉನ್ಮಾದ ಸ್ವರೂಪ ತಾಳುವವು. ಅಷ್ಟೇಕೆ, ದೇವರಲ್ಲಿಯ ನಮ್ಮ ಪ್ರೇಮ, ಭಕ್ತಿ ಮುತ್ತು ವಿಶ್ವಾಸದ ಪೂಜ್ಯ ಭಾವನೆಗಳಲ್ಲಿ ಕೂಡಾ ನಮ್ಮ ಬುದ್ಧಿಯು ಸಮತೂಕದಲ್ಲಿ ಜಿರೆಯದಿದ್ದರೆ ನಾವು ಭಾವನಾ ಪರವಶರಾಗಿ ನಮ್ಮ ಭಕ್ತಿ ಭಾವನೆಯು ಕೇವಲ ಉನ್ಮಾದಾವಸ್ಥೆಯನ್ನು ಹೊಂದುವದು.

ಪುಸ್ತಕ ವಿಮರ್ಶೆ

ವಚನಾಜ್ ಆಫ್ ಬಸವಣ್ಣ (ಎ ಸಿಲೆಕ್ಶನ್) [ಬಸವಣ್ಣನವರ ವಚನಗಳು (ಇಂಗ್ಲೀಷಿನಲ್ಲಿ)]

ಭಾಷಾಂತರಿಸಿದವರು: ಶ್ರೀ ಆರ್ಮ್ಯಾಂಡೊ ಮೆನೆಜಿಸ್ ಎಂ. ಎ. ಮುತ್ತು ಶ್ರೀ ಎಸ್. ಎಮ್. ಅಂಗಡಿ ಬಿ ಎ. ಬಿ. ಟಿ.

ಪ್ರಕಾಶಕರು: ಅಣ್ಣನ ಬಳಗ ಸಿರಿಗೆರೆ (ಮೈಸೂರ)

ಆಕಾರ ಕ್ರೌನ: ೧/೮ ಪುಟಗಳು: ೧೬೦+೧೬

ಬೆಲೆ : ಒಂದು ರೂಪಾಯಿ

ಈ ಪುಸ್ತಕದಲ್ಲಿ ಮಹಾತ್ಮಾ ಬಸವಣ್ಣನವರ ಶ್ರೇಷ್ಠ ಕೃತಿಗಳನ್ನು ಇಂಗ್ಲೀಷಿಗೆ ಸುಂದರವಾಗಿ ಭಾಷಾಂತರಿಸಲಾಗಿದೆ. ೧೨ ಶತಮಾನದಲೂ ಕರ್ನಾಟಕದಲ್ಲೂ ಮಾನವತೆಯ ಮಹತ್ವವನ್ನು ಬೀರಿದ ಮಹಾಪುರುಷನೊಬ್ಬನ ಅರಿವನ್ನು ಪರಭಾಷೆಯನ್ನಾಡುವವರಿಗೆ ಮಾಡಿಕೊಡಲು ಇದು ಸಹಾಯಕವಾಗಿದೆ ಭಾಷಾಂತರಿಸಪ್ಪಟ್ಟ ೧೩೨ ವಚನಗಳು ಈಗ ನಿತ್ಯ ರೂಢಿಯಲ್ಲಿದ್ದು ಅವುಗಳಲ್ಲಿಯ ಸಾಹಿತ್ಯದ ಮುತ್ತು ಆಧ್ಯಾತ್ಮಿಕ ಸಾರವು ನಿರರ್ಗಳವಾಗಿ ಹರಿದು ಬಂದಿದೆ.

ಇಂದು ಶ್ರೇಷ್ಠವಾದ ಮುತ್ತು ಮಹತ್ವಪೂರ್ಣವಾದ ಕಾರ್ಯ ಕೈಕೊಂಡ ಶ್ರೀ ಮೆನೆಜಿಸ್ ಮುತ್ತು ಅಂಗಡಿಯವರಿಗೆ, ಅಲ್ಲದೆ ಇವನ್ನು ಪ್ರಕಟಿಸಿದ ಸಿರಿಗೆರೆಯ ಅಣ್ಣನ ಬಳಗದವರಿಗೂ ಕನ್ನಡಿಗರು ಅಭಿನಂದನೆಗಳನ್ನು ಸಲ್ಲಿಸದೇ ಇರಲಾರರು. ಇದರಂತೆ ಕರ್ನಾಟಕದಲ್ಲಿ ಆಗಿ ಹೋದ ಇತರ ಸಂತಶರಣರ ಕೃತಿಗಳನ್ನು ಪರಭಾಷೆಯಲ್ಲಿ ಭಾಷಾಂತರಿಸುವ ಪುಣ್ಯದ ಕಾರ್ಯವನ್ನು ಮಾಡಲು ದೇವರು ಅವರಿಗೆ ಶಕ್ತಿಯನ್ನೀಯಲಿ.

—ವಿಮರ್ಶಕ
ಲೋಕಬಂಧು

ಕನಕದಾಸರ ಆಧ್ಯಾತ್ಮ ವಿಚಾರ

ಲೇಖಕರು : — ಎಂ. ಸಿ. ಬಿ.

○ ○ ○

ಧಾರವಾಡ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದ ಮಹಾತ್ಮಾ ಕನಕದಾಸರು ಹುಟ್ಟಿನಿಂದ ಕುರುಬರಾದರೂ ವರಕವಿಗಳಾಗಿದ್ದರು. ಅವರ ಜೀವನ ಪರಿಚಯವು ಎಲ್ಲರಿಗೂ ಗೊತ್ತಿದೆ. ಅವರು ತಮ್ಮ ಕೀರ್ತನೆಗಳಮೂಲಕ ಮತ್ತು ಕೃತಿಗಳಿಂದ ಜನರಿಗೆ ಆತ್ಮೋನ್ನತಿಯ ಮಾರ್ಗವನ್ನು ಬೋಧಿಸಿದರು. ಅವರ ಆಧ್ಯಾತ್ಮದ ನಿಲುವು, ಲೋಕಾನುಭವ, ಅಪಾರವಾದ ಪಾಂಡಿತ್ಯವನ್ನು ಅವರ ಕೀರ್ತನೆ ಮತ್ತು ಕೃತಿಗಳು ತಿಳಿಸುತ್ತವೆ ಆ ಆಧ್ಯಾತ್ಮ ಜೀವನದ ವಿಚಾರಗಳನ್ನು ನಾವು ತುಸು ಮಾವರೂ ತಿಳಿದುಕೊಳ್ಳುವುದು ಅವಶ್ಯಕ.

ಕನಕದಾಸರ ತಂದೆ ಕಾಲವಾದ ನಂತರ ದಾಸರೇ ಬಂಕಾಪುರ ಸೇನಾಧಿಪತಿಗಳಾದರು. ಆದರೆ ತಿರುಪತಿಯ ವೆಂಕಟೇಶ್ವರನ ಪ್ರೇರಣೆಯಿಂದ ಕನಕನಾಯಕರು ಕನಕದಾಸರಾಗಿ, ಹಂಪೆಯಲ್ಲಿಯ ಶ್ರೀ ವ್ಯಾಸರಾಯರಲ್ಲಿಗೆ ಹೋಗಿ ಅವರ ಪರಮ ಶಿಷ್ಯರಾದರು. ಇವರಲ್ಲಿಯ ಶ್ರದ್ಧೆ ಮತ್ತು ದೃಢ ಭಕ್ತಿಯನ್ನು ಕಂಡ ಶ್ರೀ ವ್ಯಾಸರಾಯರು "ಕನಕನೊಬ್ಬನೆ ದಿವ್ಯಜ್ಞಾನಿ ಆತ್ಮಾನುಭವಿ ಇವನೊಬ್ಬನಿಂದಲೇ ಲೋಕದ ಜನರು ಬೆಳಕು ಕಾಣುತ್ತಾರೆ" ಎಂದು ಆಶೀರ್ವದಿಸಿದರು.

ಈ ರೀತಿ ದಾಸರಾದ ಕನಕದಾಸರಲ್ಲಿ ವೈರಾಗ್ಯವುಂಟಾಗಿ ದೇವರ ಬಗೆಗೆ ದೃಢ ಭಕ್ತಿಯುಂಟಾದಾಗ ಆತ್ಮದಲ್ಲಿ ನೆಲೆಸಿದ ಪರಮಾತ್ಮನ ದಿವ್ಯದರ್ಶನ ಆಗದೆ ಇರುವದೆ? ಕನಕದಾಸರಿಗೆ ಗುರುಕೃಪೆಯು ಇಂಥ ದಿವ್ಯಯೋಗವನ್ನು ದೊರಕಿಸಿ ಕೊಟ್ಟಿತು. ಅವರ ಮನಸ್ಸು ವಿಲಾಸದಿಂದ ವಿಕಾಸದತ್ತ ತಿರುಗಿ ಸರ್ವತೋಮುಖವಾದ ಶಕ್ತಿ ವಿಕಾಸವಾಯಿತು. ಈ ರೀತಿ ಅವರ ಜೀವನ ಜಗತ್ತಿಗೆ ಬೆಳಕನ್ನು ನೀಡುವ ತಾರಕಮಂತ್ರವಾಯಿತು.

ಜ್ಞಾನೋದಯವಾದೊಡನೆ ಕನಕದಾಸರು ಸರ್ವವ್ಯಾಪಿ ವಿಷ್ಣುವನ್ನು ಭಕ್ತಿಯಿಂದ ಪೂಜಿಸಲಾರಂಭಿಸಿದರು. ಅವರು ವಿಷ್ಣು ಭಕ್ತರೆನಿಸಿದರೂ ಶಿವದ್ವೇಷಿಗಳಾಗಿರಲಿಲ್ಲ ಯಾವುದೇ ಸಾಧಕನು ದೇಹ ಧರ್ಮಕ್ಕೆ ಅಂಟಿಕೊಳ್ಳದೆ ಆತ್ಮಧರ್ಮದ ಅರಿವಿನಿಂದ ನಿತ್ಯ ಸುಖಿಯಾಗಬೇಕೆಂಬುದು ಪರ ಅಭಿಲಾಷೆಯಾಗಿತ್ತು. ಅದನ್ನು ನಾವು ಅವರ 'ತಾನ್ಯಾರೋ ತನ್ನ ದೇಹವ್ಯಾರೋ ದಿವ್ಯ ಜ್ಞಾನದಿಂದ ತಿಳಿದವನೇ ಪರಮಯೋಗಿ' ಎಂಬ ನುಡಿಯಲ್ಲಿ ಕಾಣಬಹುದು.

ಸಾಕಾರನಾದ ಗುರುವಿನಲ್ಲಿ ಮತ್ತು ನಿರಾಕಾರನಾದ ದೇವನಲ್ಲಿ ಸಾಮರಸ್ಯ

ವನ್ನು ಕನಕದಾಸರು ಚೆನ್ನಾಗಿ ತಿಳಿದಿದ್ದರು ಅವರ ಹತ್ತಿರ ಅಹಂಕಾರ ಮಮಕಾರಗಳು ಸುಳಿವಿರಲಿಲ್ಲ. ಒಮ್ಮೆ ಶ್ರೀ ವ್ಯಾಸರಾಯರು ಸಭೆಯಲ್ಲಿ ವಿದ್ವಾಂಸರನ್ನು ಕುರಿತು 'ನಿಮ್ಮಲ್ಲಿ ಯಾರು ವೈಕುಂಠಕ್ಕೆ ಹೋಗಬಹುದು' ಎಂದು ಕೇಳಿದರು. ಆಗ ಎಲ್ಲರೂ ತಮಗೆ ತಿಳಿದ ರೀತಿಯಲ್ಲಿ ಹೇಳಿದರು ಆದರೆ ಯಾರಿಗೂ ಗಟ್ಟಿಯಾದ ಉತ್ತರ ಕೊಡಲು ಬರಲಿಲ್ಲ ಆಮೇಲೆ ಕನಕದಾಸರು 'ನಾನು ಹೋದರೆ ಹೋಗಬಹುದು' ಎಂದು ನುಡಿದರು. ಇದರ ಗೂಢಾರ್ಥ ಯಾವ ಪಂಡಿತರಿಗೂ ತಿಳಿಯಲಿಲ್ಲ. ಆಗ ವ್ಯಾಸರಾಯರು ಕನಕದಾಸರಿಂದಲೇ ಇದರ ಅರ್ಥವನ್ನು ಹೇಳಿಸಿದರು. 'ನಾನು ಎಂಬ ಅಹಂಕಾರ ಇಲ್ಲವಾದರೆ ಎಲ್ಲರಿಗೂ ಮೋಕ್ಷ ಸಾಧ್ಯ ಇದು ಅದರ ಅರ್ಥವಾಗಿತ್ತು. ಹೀಗೆ ನಿರಹಂಕಾರದಿಂದ ಜಗತ್ ಕಲ್ಯಾಣಕ್ಕೆ ಹೋರಾಡಿ ನಿತ್ಯ ಸುಖಿಗಳಾದರು.

ಕೇವಲ ತಮ್ಮ ಒಡಲನ್ನು ತುಂಬಿಕೊಳ್ಳಲು ಪರದಾಡುವ ಅಜ್ಞಾನಿ ಜನತೆಯ ಬಗ್ಗೆ ಅವರು ಕನಿಕರದಿಂದ 'ಎಲ್ಲರೂ' ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಆದಿಕೇಶವನ ಅನುದಿನ ನೆನೆವುದು ಭಕ್ತಿಗಾಗಿ ಪರಮ ಮುಕ್ತಿಗಾಗಿ ಎಂದು ಹೊಟ್ಟೆಬಟ್ಟೆಗಾಗಿ ದುಡಿಯುವುದು ಸಹಜವಾದರೂ ಕೇವಲ ಅದಕ್ಕಾಗಿಯೇ ಶ್ರಮಪಡದೆ ಆತ್ಮ ಕಲ್ಯಾಣಕ್ಕೆ ದುಡಿಯಬೇಕು. ಧನ-ಕನಕವನ್ನು ನಾವು ಕಷ್ಟಪಟ್ಟು ಪಡೆಯಬಹುದು. ಆದರೆ ಮೋಕ್ಷ ಸಾಧನೆಗಾಗಿ ಎಷ್ಟು ಕಷ್ಟಪಟ್ಟರೂ ಸಾಲದು. ಕಾರಣ ಅನುದಿನವೂ ಆ ಭಗವಂತನ ಸ್ಮರಣೆ ಮಾಡುತ್ತ ತನ್ನ ಕಾಯಕದಲ್ಲಿ ನಿರತನಾಗಿರಬೇಕು. "ಕಾಯಕವೇ ಕೈಲಾಸ"ವಾದುದರಿಂದ ಅದನ್ನು ತೊರೆಯಕೂಡದು ಆದಕಾರಣವೇ ನಮ್ಮ ಕಾಯಕದೊಡನೆ ದೇವರನ್ನು ನೆನೆಯುತ್ತಲಿದ್ದರೆ ಅದಕ್ಕಿಂತ ದೊಡ್ಡ ಮೋಕ್ಷ ಮತ್ತೊಂದಿಲ್ಲವೆಂಬ ತತ್ವವನ್ನೇ ಕನಕದಾಸರು ಬೀರಿದರು ಆತ್ಮ ಕಲ್ಯಾಣಕ್ಕೆ ನಾವು ದುಡಿಯುದವರೆ ನಾವಿಲ್ಲಿ ಹುಟ್ಟಿದ್ದು ಸಾರ್ಥಕ ಆತ್ಮೋನ್ನತಿಯ ಸಾಧನೆಯಲ್ಲಿ ಎಲ್ಲರೂ ಸಮಾನರು ಯಾರೂ ಅಯೋಗ್ಯರಲ್ಲ ಆಧ್ಯಾತ್ಮ ಸಾಧನೆ ಕೇವಲ ಕೆಲವರ ಸೊತ್ತಲ್ಲ ಜೀವಿಯಾದ ಪ್ರತಿಯೊಂದು ಹೊಟ್ಟೆಗಾಗಿ ದುಡಿಯುವಂತೆ ಆಧ್ಯಾತ್ಮ ವ್ಯವಸಾಯವನ್ನು ಮಾಡಬೇಕೆಂಬ ಧ್ಯೇಯವನ್ನು ಬೋಧಿಸಿದರು.

ಅಜ್ಞಾನದಿಂದ ಮಾಯೆ ಮುಸುಕುತ್ತದೆ. ನಿರಹಂಕಾರದಿಂದ ಮಾಯೆಯ ಪರೆಯನ್ನು ಹರಿದು ಆ ದೇವರ ಕೃಪೆಗೆ ಪಾತ್ರರಾಗಬೇಕೆಂದು ತಿಳಿಸಿದರು. ನಮ್ಮ ದೇಹವು ದೇವರು ರಚಿಸಿದ ಯಂತ್ರ ಅದರಲ್ಲಿಯ ಪ್ರತಿ ಅವಯವವೂ ಪರಮಾತ್ಮನ ಪ್ರೇರಣೆಯಿಂದ ಕಾರ್ಯ ಮಾಡುತ್ತದೆ. ಇದನ್ನು ತಿಳಿದರೆ ವಿನಮ್ರತೆ ವಿಧೇಯತೆಗಳು ತಾವಾಗಿಯೇ ನಮ್ಮಲ್ಲಿ ನೆಲೆಸಬಲ್ಲವು. ತನ್ನಲ್ಲಿಯೇ ಇರುವ ಪರಮಾತ್ಮನ ಇರು

ವನ್ನು ತಿಳಿಯದೆ ಪೂರ್ಣ ಸಂಬಿಕೆಯಿಂದ ಮಾನವ ತೊಳಲಾಡುತ್ತಾನೆ. ಇಲ್ಲಿದ್ದುದೆಲ್ಲ ಪರಮಾತ್ಮನದು ಎಂತಲೆ ಕನಕದಾಸರು "ಕಾಯಪಂಚೇಂದ್ರಿಯಗತಿ ನಿನ್ನದಯ್ಯಾ ಆದಿಕೇಶವ ನೀನಲ್ಲದೆ ನರರೇಸ್ವತಂತ್ರರೇ?" ಎಂದು ದೇವರಿಗೆ ತಮ್ಮನ್ನು ಅರ್ಪಿಸಿ ಕೊಂಡಿದ್ದಾರೆ.

ಅತ್ತಿತ್ತ ಹರಿದಾಡುವ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ನಮ್ಮ ಮನಸ್ಸನ್ನು ಪರಮಾತ್ಮನತ್ತ ತಿರುಗಿಸಿ, ಆ ದೇವನನ್ನು ಸ್ಮರಿಸುತ್ತಿದ್ದರೆ ಕಷ್ಟಗಳೆಲ್ಲ ದೂರಾಗಿ ನಾವು ನಿಜವಾದ ಮಾನವರಾಗಬಲ್ಲೆವು. ಇದೇ ಭಾವವನ್ನೇ ಕನಕದಾಸರು ತಮ್ಮ ಕೀರ್ತನೆಯಲ್ಲಿ ತಿಳಿಸಿದ್ದಾರೆ. "ತಲ್ಲಣಿಸದಿರು ಕಂಡ್ಯ ತಾಳು ಮನವೇ ಎಲ್ಲರನ್ನು ಸಲಹುವೆನು ಇದಕ್ಕೆ ಸಂಶಯವೇಕೆ........ ಬಲ್ಲಿದನು ಕಾಗಿನೆಲೆಯಾದಿ ಕೇಶವರಾಯ ಎಲ್ಲರನ್ನು ಸಲಹುವನು ಇದಕ್ಕೆ ಸಂಶಯವೇಕೆ" ಈ ಕೀರ್ತನೆಯನ್ನು ಕೇಳಿದ ಮಾನವನು ಆಸ್ತಿಕನಾಗಿ ತನ್ನಲ್ಲಿಯ ದೋಷಗಳನ್ನು ಪರಿಪಡಿಸಿಕೊಂಡು ಶುದ್ಧನಾಗದೆ ಇರಲಾರ. ಆ ದೇವರು ಹುಟ್ಟಿಸಿ ಹುಲ್ಲು ಮೇಯಿಸಲಾರ. ತಾನು ಸೃಷ್ಟಿಸಿದ ಸಕಲ ಜೀವಿಗಳ ಯೋಗಕ್ಷೇಮವನ್ನು ಅವರವರ ಕರ್ಮಫಲಕ್ಕನುಸಾರವಾಗಿ ನೋಡಿಕೊಳ್ಳುತ್ತಾನೆ ದೃಢಭಕ್ತಿ ಭಾವನೆಯಿಂದ ನಡೆಯಿಸುವ ಜೀವನ ನಿಜವಾದುದು ಮತ್ತು ಸುಖಕರವಾದುದು. ಆದರೆ ಬಾಹ್ಯಾಡಂಬರದಲ್ಲಿ ಹುರುಳಿಲ್ಲ. ಅಂತರಂಗಶುದ್ಧಿ ದೃಢಭಕ್ತಿಗೆ ಅವಶ್ಯಕ ಆದುದರಿಂದಲೇ "ಜಪವ ಮಾಡಿದರೇನು ತಪವ ಮಾಡಿದರೇನು ಕಪಟಗುಣ ವಿಪರೀತ ಕಲುಷವಿದ್ದವರು" ಎಂದು ಕನಕದಾಸರು ಅಂತರಂಗ ಶುದ್ಧಿಯ ಅಗತ್ಯತೆಯ ಬಗೆಗೆ ತಿಳಿಸಿದ್ದಾರೆ.

ಕಾರಣ ಮಾನವನು ಹೃದಯವೆಂಬ ಹೊಲವನ್ನು ಹಸನುಮಾಡಿ ದೇವರನ್ನು ಅಲ್ಲಿ ನೆಲೆಗೊಳಿಸಿ ಕಾಮಕ್ರೋಧಗಳೆಂಬ ಕಸಕಳೆ ಬೆಳೆಯದಂತೆ ನೋಡಿಕೊಳ್ಳಬೇಕು. ಅಲ್ಲದೆ ನಿರಂತರವೂ ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸಿ ಹಗಲಿರುಳು ಆಧ್ಯಾತ್ಮಿಕ ಸಾಧನೆಯ ಮೂಲಕ ನಾರಾಯಣನ ಕೃಪೆಗೆ ಪಾತ್ರರಾಗಬೇಕು. ಇಂಥ ನಿತ್ಯ ಸುಖವನ್ನು ಜನಕ್ಕೆ ಉಣಬಡಿಸಲು ಪ್ರಯತ್ನಿಸಿದರು. ಕನಕದಾಸರು ಇಂಥ ನಿತ್ಯ ಸುಖವನ್ನು ಉಂಡು ಅನ್ಯರಿಗೂ ಉಣ್ಣಲು ತಿಳಿಸಿದರು.

ಹೀಗೆ ಕನಕದಾಸರು ಜನಕ್ಕೆ ಆತ್ಮೋನ್ನತಿಯ ಮಾರ್ಗವನ್ನು ತಿಳಿಸಿದ ಮಹಾತ್ಮರು. ಅವರು ಭೌತಿಕ ದೇಹವನ್ನು ತೊರೆದಿದ್ದರೂ ತಮ್ಮ ಕೃತಿಗಳ ಮೂಲಕ ಅಮರರಾಗಿದ್ದಾರೆ. ಇಂಥ ಪುಣ್ಯ ಪುರುಷನ ನಾಡಿನಲ್ಲಿ ಜನಿಸಿದ ನಾವೆಲ್ಲ ನಿಜವಾಗಿಯೂ ಭಾಗ್ಯಶಾಲಿಗಳು.

ಸಮಾಜ ಸುಧಾರಣೆಯು

ಸಂಗಡಗಳಾದುದು

ಲಿಂಗದೋಷವ ಹಿಂಗಲಾರದ ಆಯ್ಯ ಜನಗಳು ವೀರರೆ ।
ಲಿಂಗಶುದ್ಧಿಯ ತಾರತಮ್ಯದೊಳೆರಡು ಜಾತಿಯು ವೀರರೆ ॥೧೩॥
ಲಿಂಗಮಹಿಮೆಯ ಪರಿವೆಯಿಲ್ಲದೆ ಮಾಡಿನಡೆದರು ವೀರರೆ ।
ಸಂಗದೋಷದ ಭ್ರಾಂತಿ ಮಹಿಮೆಯನೇನು ಪೇಳ್ವುದು ವೀರರೆ ॥೧೪॥
ಜಾತಿದೋಷವ ಭ್ರಾಂತಿ ತಾನದು ಬೆಳೆಯುತಿತ್ತು ಜಾಣರೆ ।
ಮಾತುಗಾರರ ತಂತ್ರಜಾಲಕೆ ಬೆಳೆಯು ಬಂದಿತು ಜಾಣರೆ ॥೧೫॥
ಆತುಕೊಂಡಿತು ಜಾತಿಮತ್ಸರ ಕಸಬುಕಸಬಿಗೆ ಜಾಣರೆ ।
ಘಾತವಾಯಿತು ಮುಂದೆ ಸಂಗಡ ಬೇರೆಗೊಂಡವು ಜಾಣರೆ ॥೧೬॥
ಕುಲವನಾಯಲು ಹತ್ತಿ ಭಕ್ತರು ಜಾತಿಭ್ರಮೆಯೊಳು ಬಿದ್ದರು !
ಛಲವ ಹಿಡಿಯುತ ತಮ್ಮೊಳು ಭೇದಬುದ್ಧಿಯ ಕಲಿತರು ॥೧೭॥
ಹಲವು ಹಂಬಲ ಹಿಡಿದು ಬಳಿಕೆಯ ಮುರಿದು ನಡೆಯುತ ಬಂದರು ।
ಹೊಲೆಯತನವನು ಲಿಂಗಮಹಿಮೆಯ ಮರೆತು ಮಾಡುತ
ನಡೆದರು ॥೧೮॥

ಕೆಲವು ತಾಂತ್ರಿಕರು ಸಾಧಿಸಿದ ಮಂತ್ರಿತನವು

ಭಕ್ತರೊಳಗಿನ ಭೇದಬುದ್ಧಿಯ ಜಂಗಮರಿಗದು ಜಾಣರೆ ।
ಶಕ್ತಿಯಿಲ್ಲದೆ ಸ್ವಾರ್ಥಸಾಧಿಸಲನುವು ಕೊಟ್ಟಿತು ಜಾಣರೆ ॥೧೯॥
ಯುಕ್ತಿಯಿಂದಲಿ ತಾಂತ್ರಿಕರು ಹೊಕ್ಕರಿದರೊಳು ಜಾಣರೆ ।
ತಕ್ಕ ಅಡಿವಿಡಿದು ನಮ್ಮನೆಲ್ಲರ ತಂಗಹತ್ತಿದರೀರರೆ ॥೨೦॥
ಕೂಳು ನೀರಿನ ಶೀಲ ಹೆಚ್ಚಿಸಿ ಭಕ್ತರನು ಭವಿ ಮಾಡಿದರ್ ।
ಹೇಳಲೇನ್ನೈ ಯಂತ್ರ ತರಿಸುತ ಕೂಳಿಗೂ ಪಿರಿಮಾಡಿದರ್ ॥೨೧॥
ಗೋಳು ಹಿಡಿಸುತ ನಮ್ಮನೆಲ್ಲರ ಕೆಟ್ಟ ಮಾರ್ಗಕೆ ಹಚ್ಚಿದರ್ ।
ಮೂಳ ಜಂಗಮರೆಲ್ಲರನು ಬಲೆಯೊಳಗೆ ಕೆಡವುತ ಮೀರಿದರ್ ॥೨೨॥
ಜಡ ಪದಾರ್ಥಂಗಳನು ಮಾರುತ ಬತನಗೆಡಿಸುತ ನಡೆದಿಹರ್ ।
ಬಡ ಜನಂಗಳ ಗೋಣು ಮುರಿಯು ಹೊಟ್ಟೆಯನು
ಹೊರಕೊಳ್ಳುವರ್ ॥೨೩॥

—ಎಚ್. ಬಿ. ಕಲಬುರಗಿ ಬಿ. ಎ. ಹುಬ್ಬಳ್ಳಿ. ಸಶೇಷ

ಶೀಲ ರಕ್ಷಣೆ

ಲೇಖಕರು :— ಶ್ರೀಮತಿ ಎಮ್. ಎ. ಕವಾಲ, ಬಿ ಎ ಸುಬ್ಬಳ್ಳಿ.

● ● ●

ಅಂದು ಶಿವರಾತ್ರಿ, ಕಾರ್ಗತ್ತಲೆಯ ರಾತ್ರಿ ರಜೆಯ ದಿನಗಳಾಗಿದ್ದರಿಂದ ದಿನ ವಿಡೀ ಅಭ್ಯಾಸ ಮಾಡಿದ ಮಂದಾಕಿನಿಯು ವಾಯು ವಿಹಾರಕ್ಕೆಂದು ತನ್ನ ಮನೆಯ ಸುತ್ತಲಿರುವ ಮಾವಿನ ತೋಪಿನಲ್ಲಿ, ಕತ್ತಲಾಗುವವರೆಗೆ ವಿಹರಿಸುತ್ತಿದ್ದಳು. ಅವಳು ಮನೆಗೆ ಬಂದಾಗ ಸುತ್ತಲೂ ಕತ್ತಲೆ ಮುಸುಕಿತ್ತು. ತನ್ನ ಮನೆಯಿಂದ ದೀಪಗಳ ಪ್ರಕಾಶವು ಕಂಡು ಬರಹತ್ತಿತು. ಮಂದಾಕಿನಿಯು ಇಂಟರ ಕ್ಲಾಸಿನ ಅಭ್ಯಾಸ ಮಾಡುತ್ತಿದ್ದಳು. ಪರ ಭಾಷೆಯಾಗಿ ಪರ್ಶಿಯನ್ ತೆಗೆದುಕೊಂಡಿದ್ದಳು. ಪರ್ಶಿಯನ್ ಕ್ಲಾಸಿನಲ್ಲಿ ಅನೇಕ ತರುಣರು ಇವಳೊಟ್ಟಿಗೆ ಕಲಿಯುತ್ತಿದ್ದರು. ಆದರೆ ಆ ಭಾಷೆ ಕಲಿಸುವ ಪ್ರೊಫೆಸರು ಮಾತ್ರ ನೈತಿಕ ಬಲವಿಲ್ಲದವರಾಗಿದ್ದು ವಿಷಯ ಲಂಪಟರಾಗಿದ್ದರು. ಮಂದಾಕಿನಿಯನ್ನು ಕೈವಶ ಮಾಡಿಕೊಳ್ಳಬೇಕೆಂದು ಅವರು ಮಾಡಿದ ಪ್ರಯತ್ನಗಳೆಲ್ಲ ವಿಫಲಗೊಂಡಿದ್ದವು. ಅವರ ಹೇಯವಾದ ವರ್ತನವನ್ನು ಕ್ಲಾಸಿನ ವಿದ್ಯಾರ್ಥಿಗಳೇ ಕ್ಲಾಸಿನಲ್ಲಿ ಪ್ರತಿಭಟಿಸಿದ್ದುದರ ಪರಿಣಾಮವಾಗಿ ಮಂದಾಕಿನಿಯ ಶೀಲ ರಕ್ಷಣೆಯಾಗುತ್ತ ಸಾಗಿತ್ತು.

ಪರ್ಶಿಯನ್ ಪ್ರೊಫೆಸರರ ಕಾಕದೃಷ್ಟಿಯು ತನ್ನ ಮೇಲೆ ಕ್ಲಾಸಿಗೆ ಹೋದಾಗೆಲ್ಲ ಬಿದ್ದಿರುವದನ್ನು ಮಂದಾಕಿನಿಯು ತಿಳಿದಿದ್ದರೂ, ಅವರಲ್ಲಿ ಆಕೆಯ ಮೇಲಿನ ಮೋಹದ ಸಸಿಯು ಕವಲೊಡೆಯುತ್ತಿರುವದನ್ನು ಅವಳು ತಿಳಿದಿರಲಿಲ್ಲ !

ಪರೀಕ್ಷೆಯು ಸಮೀಪಿಸಿ ಮೂರು ತಿಂಗಳುಗಳಿರುವಾಗ ಅಭ್ಯಾಸಕ್ಕೆಂದು ಮಂದಾಕಿನಿಯು ತನ್ನ ಕಾಲೇಜದಿಂದ ಎರಡೇ ಫರ್ಲಾಂಗು ದೂರದಲ್ಲಿರುವ ಮಾವಿನ ತೋಟದ ಮಧ್ಯದಲ್ಲಿ ಇರುವ ಚಿಕ್ಕ ಮನೆಯನ್ನು ಬಾಡಿಗೆ ತೆಗೆದುಕೊಂಡು ವಾಸಿಸುತ್ತಿದ್ದಳು. ತೋಟದ ಕಂಪೌಂಡಿನ ಗೇಟಿನಿಂದ ಅವಳ ಚಿಕ್ಕ ಮನೆಯು ಒಂದು ಫರ್ಲಾಂಗು ದೂರದಲ್ಲಿತ್ತು. ಅಡಿಗೆಮಾಡಲಿಕ್ಕೆಂದು ಅವಳೊಡನೆ ಬಂದ ವೃದ್ಧೆಯು ವಿಶ್ವಾಸ ಪ್ರೇಮಗಳಿಂದ ಮಂದಾಕಿನಿಯನ್ನು ತಾಯಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಳು.

ವಾಯು ವಿಹಾರದಿಂದ, ಮರಳಿದ ಮಂದಾಕಿನಿಯು ಅಭ್ಯಾಸ ಮಾಡುವ ಕೋಣೆಯಲ್ಲಿ ದೀವಿಗೆ ಹಚ್ಚಿರುವದನ್ನು ಕಂಡು ಲಗುಬಗೆಯಿಂದ ಅಭ್ಯಾಸ ಮಾಡಲಿಕ್ಕೆಂದು ಆ ಕೋಣೆಯನ್ನು ಪ್ರವೇಶಿಸಲು, ಮೇಜಿನ ಬಳಿಗಿದ್ದ ಖುರ್ಚಿಯ ಮೇಲೆ ಕುಳಿತ ವ್ಯಕ್ತಿಯನ್ನು ನೋಡಿ ದಿಙ್ಮೂಢ

ಳಾಗಿ ನಿಂತಿರುವದನ್ನು ನೋಡಿ ಆಗಂತುಕನು "ಇತ್ತ ಬಾ ಮಂದಾ!" ಎಂದು ನುಡಿಯಲು ಮಂದಾಕಿನಿಯು ಕಣ್ಣು ಕತ್ತಲಿಗೂಡಿಸಿಕೊಂಡರೂ, ಧೈರ್ಯ ತಂದು ಕೊಂಡು "ನಮಸ್ಕಾರ ರಾಯರೇ, ಏನಿತ್ತ ಬಂದಿರಿ? ಮಾಡುವುದೇನು, ಎಲ್ಲ ಒಳಿತೇ?" ಇತ್ಯಾದಿ ಕುಶಲ ಪ್ರಶ್ನೆಗಳನ್ನು ತೊಡಗಿದಳು.

"ನಿನ್ನ ನಮಸ್ಕಾರ ನಿನಗೇನೇ ಇರಲಿ! ಇಷ್ಟು ಕಾಲ ತಪ್ಪಿಸಿಕೊಳ್ಳುತ್ತಾ ಸಾಗಿದ್ದೆ. ಈಗ ಹೊಸದೊಂದು ಕಾರನ್ನು ಕೊಂಡಿರುವೆನು ನಡೆ, ಇಬ್ಬರೂ ಕೂಡಿ ವಿಹಾರಕ್ಕೆ ಸಮೀಪದ ಅಡವಿಗೆ ದೃಷ್ಟಿ ಮಾಡಿಕೊಂಡು ಹೋಗಿ ಬರೋಣ! ಒಪ್ಪಿಗೆಯೇ? ನೀನೊಪ್ಪಿದರೆ ಕಾರನ್ನು ಕಾಂಪೌಂಡಿನ ಗೇಟಿನ ಬಳಿಯಲ್ಲಿ ನಿಲ್ಲಿಸುವೆ ಕಾರಿನ ಹಾರ್ನ ಕೇಳುತ್ತಲೇ ನೀನು ಮನೆಯಿಂದ ಹೊರಟು ಬಂದು ಕಾರಿನಲ್ಲಿ ಕುಳಿತುಕೋ ತಿಳಿಯಿತೇ?" ಎಂದು ಆತುರದಿಂದ ಪ್ರೋಫೆಸರು ಕೇಳಲು "ಆಗಲಿ ರಾಯರೆ" ಎಂದು ಮಂದಾಕಿನಿಯ ಮುಖದಿಂದ ಶಬ್ದಗಳು ಹೊರಡಲು ಹರ್ಷಚಿತ್ತರಾಗಿ ವೇಗವೇ ವೇಗದಿಂದ ನಡೆದು ಪ್ರೋಫೆಸರು ಹೊರಟು ಹೋದರು

ಈಗ ಹೆದರಿದರೆ ಕೆಲಸ ಕೆಡುವದೆಂದು ಮಂದಾಕಿನಿಯು ತಿಳಿದು ತನ್ನ ಜತೆಗಾರ್ತಿಯಾದ ವೃದ್ಧ ಪರಿಚಾರಿಕೆಯನ್ನು ಕರೆದು "ನೋಡು ಗಂಗಮ್ಮಾ! ಮಾನಾಪಮಾನದ ಪ್ರಶ್ನೆಯಿದು! ಬೇಗಬಾ! ಬಾಗಿಲು ಕಿಡಿಕೆಗಳನ್ನು ಭದ್ರವಾಗಿ ಮುಚ್ಚೋಣ! ಆಗಲೇ ಬಂದು ಹೋದ ಶನಿಯು ನನ್ನನ್ನು ಕರೆದೊಯ್ಯಲು ಕಾರು ತರಲಿಕ್ಕೆ ಹೋಗಿದೆ! ಕಾರನ್ನು ಗೇಟಿನಬಳಿ ತಂದು ಹಾರ್ನ ಬಾರಿಸುವನು. ನಾನು ಕಾರಿನ ಬಳಿ ಹೋಗದಿದ್ದರೆ ಆ ಶನಿಯೇ ಇಲ್ಲಿಗೆ ಬರುವದು ನಿಶ್ಚಿತ! ಇಲ್ಲಿಗೆ ಬಂದು ಕದ ಬಡೆದರೆ ನೀನು ನನ್ನನ್ನು ಅತಿಯಾಗಿ ಬೈದಂತೆ ನಟಿಸು. ನಿನ್ನ ಕಸರತ್ತಿಗೆ ಬೆದರಿ ಇಂದು ಯಶ ಸಿಕ್ಕು ನನ್ನ ಮಾನರಕ್ಷಣೆಯಾಗಬಹುದು" ಎಂತ ಅಂಗಲಾಚಿದಳು.

ಮಂದಾಕಿನಿಯ ಭವಿಷ್ಯ ವಾಣಿಯಂತೆ ಪ್ರೋಫೆಸರರು ಕಾರನ್ನು ಗೇಟಿನ ಬಳಿ ನಿಲ್ಲಿಸಿ ಹಾರ್ನ ಮಾಡಲು ತೊಡಗಿದನು. ಮಂದಾಕಿನಿಯು ಅಲ್ಲಿಗೆ ಬಾರದಿರುವದನ್ನು ಕಂಡು ಘನ ಕಾಯದ ಪ್ರೋಫೆಸರರು ಹೊರಟೇಬಂದರು. ಭಾರವಾದ ಅವರ ಹೆಜ್ಜೆಗಳಿಂದ ಭೂಮಿಯೇ ಅದಿರುವಂತೆ ಕಂಡಿತು! ಆ ಹೆಜ್ಜೆಗಳ ಸಪ್ಪು ಕೇಳಿ ಮಂದಾಕಿನಿಯ ಹೃದಯವು ಬೇಗ ಬೇಗ ಬಡಿದುಕೊಂಡಿದುದರ ಪರಿಣಾಮವಾಗಿ ಅವಳ ಶರೀರವೆಲ್ಲ ಬೆವರಿನಿಂದ ನೀರೊಡೆಯಿತು! ಅದರೂ ಧೈರ್ಯ ತಂದುಕೊಂಡು ತನಗೆ ನೈತಿಕ ಬಲವನ್ನು ಕೊಟ್ಟು ರಕ್ಷಿಸೆಂತ ಪರಮಾತ್ಮನನ್ನು ಮರೆಹೊಕ್ಕಳು

"ಧಪ್.........ಧಪ್............ಧಪ್"

ಬಾಗಿಲು ಬಡಿದು ಶಬ್ದವಾಯಿತು

ಬಾಗಿಲನ್ನು ತೆರೆಯದೇ ಮಂದಾಕಿನಿಯು "ಯಾರು?" ಎಂತ ಕೇಳಿದಳು.

— ಸಶೇಷ

ಶರಣರ ವಚನಾಮೃತ

ದಾಸಿಮಯ್ಯನ ದಾರಿ

ಉಣ್ಣೆ ಕೆಚ್ಚಲು ಹತ್ತಿ ಉಂಬುದೆ ನೊರೆ ವಾಲ? ಪುಣ್ಯಕ್ಷೇತ್ರದಲ್ಲಿ ಹುಟ್ಟಿ ಉಣ್ಣದವ ಆ ಉಣ್ಣೆಯಿಂದ ಕರಕಷ್ಟ ರಾಮನಾಥ !

ಪ್ರಭು ಪ್ರಕಾಶ

ಅಂಜಬೇಡ ಅಳುಕಬೇಡ ಹೋದವರಾರು? ಇದ್ದವರಾರು? ಎಲೆ ಮರುಳೆ ಒಂದು ಮುಖದಲ್ಲಿಪ್ಪ ದೇವನೊಬ್ಬನೆ ಹಲವು ಮುಖದಲ್ಲಿಪ್ಪ ದೇವನೊಬ್ಬನೆ ನಾಮ ಹಲವಲ್ಲದೆ ಕಾರ್ಯ ಒಂದೆ ನೋಡಾ ಮನದೊಳಗಣ ಘನವು ತನುವನಗಲುವುದೆ? ಗೊಹೇಶ್ವರ ಲಿಂಗದಲ್ಲಿ ವಿಯೋಗಕ್ಕೆ ತೆರಹಿಲ್ಲ ಕೇಳಾ ಸಂಗನ ಬಸವಣ್ಣ

ಆವು ನೀ ಬಂದೆ ಬೆಂಬಳಿಯಲ್ಲಿ ನಾ ಬಂದೆ ಅಂದಂದಿನ ಸಂದೇಹ ಹರಿಯಿತ್ತು ನೀ ಭಕ್ತನಾಗಿ ನಾ ಜಂಗಮವಾಗಿ ಗೊಹೇಶ್ವರ ಲಿಂಗವೆಂಬುದಕ್ಕೆ ಅಂಗವಾಯಿತು.

ಬಸವ ವಾಣಿ

ಅರಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟು ಪುರುಷನ ಬಲವಿಲ್ಲದ ಲಲನೆಯಂತಾಗಿರ್ದೆನಯ್ಯಾ ! ವಿಭೂತಿಯನೆ ಹೂಸಿ ರುದ್ರಾಕ್ಷಿಯನೆ ಕಟ್ಟಿ ಶಿವ ನಿಮ್ಮೊಲವಿಲ್ಲದಂತೆ ಆಗಿರ್ದೆನಯ್ಯಾ ಕೆಟ್ಟು ಬಾಳುವರಿಲ್ಲಾ ಎಮ್ಮವರ ಕುಲದಲ್ಲಿ ನೀ ನೊಲಿದಂತೆ ಸಲಹಯ್ಯಾ ಕೂಡಲ ಸಂಗಮ ದೇವಾ

ಅರಿವನಯ್ಯಾ ಸಣ್ಣವಹನ್ನಕ್ಕೆ ಬರಿವನಯ್ಯಾ ಬಣ್ಣಗಾಣ್ಬನ್ನಕ್ಕೆ ಅರಿದರೆ ಸಣ್ಣವಾಗಿ ಬರಿದರೆ ಬಣ್ಣವಾದರೆ ಕೂಡಲ ಸಂಗಮ ದೇವನೊಲಿದು ಸಲಹುವನು.

ಅಕ್ಕನ ಅನುಭವ

ಆಡುವದು ಪಾಡುವದು ಕೇಳುವದು ಹೇಳುವದು ನಡೆವುದು ನುಡಿವುದು ಸರಸ ಸಮ್ಮೇಲನವಾಗಿಪ್ಪುದಯ್ಯಾ ಶರಣರೊಡನೆ ಚನ್ನಮಲ್ಲಿಕಾರ್ಜುನಯ್ಯ ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ ಲಿಂಗ ಸಂಗದಲ್ಲಿ ದಿನಂಗಳ ಕಳೆದೆನಯ್ಯಾ

ಆದಯ್ಯನ ಆದರ್ಶ

ಅನವರತ ಲಿಂಗಭಾವದಲ್ಲಿ ನೆನಹು ಎಲೆಗೊಂಡುಬಿಡುವಡಗಿ ಪಂಚಾವಸ್ಥೆಯಲ್ಲಿ ಎಲ್ಲ ವೇಳೆಯಲ್ಲಿ ನಿಮ್ಮ ಅರಿವು ಮರೆಯದ ಘನ ಪರಿಣಾಮದ ಸುಯಿಧಾನಿ ಸೌರಾಷ್ಟ್ರ ಸೋಮೇಶ್ವರ ನಿಮ್ಮ ಶರಣ.

೧೮ ನೇ ಪುಟದಿಂದ ಸಾಗಿಬಂದದ್ದು

"ನಾನು! ಕದತೆರೆ" ಎಂತ ಪ್ರೊಫೆಸರರು ನುಡಿಯುತ್ತಲೇ ಆ ಧೀರ ವೃದ್ಧೆಯು ಹಸಿದ ಸಿಂಹಿಣಿಯಂತೆ ಗರ್ಜಿಸುತ್ತ "ಯಾರವರು? ಇಂಥ ಕಾಳರಾತ್ರಿಯಲ್ಲಿ ಹೆಂಗಸರ ಮನೆಗೆ ಬರಲು ನಾಚಿಕೆ ಇಲ್ಲವೇ?" ಇತ್ಯಾದಿ ಬೆದರು ನುಡಿಗಳನ್ನು ನುಡಿದು, ಮಂದಾಕಿನಿಯು ಬಾಗಿಲು ತೆರೆಯದಂತೆ ಬಾಗಿಲಿಗೆ ಅವಿತು ನಿಂತುಕೊಂಡಳು

ಕನ್ನಡ ತಿಳಿಯದ ಪ್ರೊಫೆಸರಿಗೆ ಇದಾವುದರ ಅರ್ಥವಾಗದೇ "ಏನನ್ನುವಳು ಅವಳು?" ಎಂತ ಪ್ರಶ್ನಿಸಲು ಮಂದಾಕಿನಿಯು ದೈವೀ ಪ್ರೇರಣೆಯಿಂದ "ನಾನು ನಿಮ್ಮೊಟ್ಟಿಗೆ ಈಗ ಹೋದರೆ ಮನೆಯ ಮಾಲಿಕರನ್ನು ಕರೆತಂದು ಎಲ್ಲವನ್ನೂ ಹೇಳುವೇನು" ಎಂತ ಅನ್ನುತ್ತಿರುವಳೆಂತ ತರ್ಜುಮೆ ಮಾಡಿದಳು.

ಆದನ್ನು ಕೇಳುತ್ತಲೇ ಪ್ರೊಫೆಸರರು ಕ್ರೋಧಗೊಂಡು "ಆ ಮುದಿಗೂಬೆಯನ್ನು ಸುಡು! ಉದ್ಧಟಳು" ಕಿಡಿಕಿಯತ್ತ ಬಾ ಎಂತ ನುಡಿದರು.

ಮಂದಾಕಿನಿಯು ಕಿಡಿಕಿಯತ್ತ ತೆರಳಲು ವೃದ್ಧೆಯು ಉತ್ತಮ ನಟಿಯಂತೆ ಬೈಗಳ ಸುರಿಮಳೆಯನ್ನು ಸುರಿಸತೊಡಗಿದಳು ಮತ್ತು ತಾನೂ ಕಿಡಿಕಿಯತ್ತ ಹೊರಟಳು

ಮುಚ್ಚಿದ ಕಿಡಕಿಯತ್ತ ಆಚೆಗೆ ಪ್ರೊಫೆಸರರು ಈಚೆಗೆ ಮಂದಾಕಿನಿಯು! ವೃದ್ಧೆಯ ಅಭಿನಯ ಪ್ರಬಲವಾಯಿತು.

"ಏನನ್ನುವಳು ಬಿಲಿಗೇಡಿ!" ಎಂತ ಪ್ರೊಫೆಸರರು ಕೇಳಲು, ದೈವೀ ಪ್ರೇರಿತಳಾದ ಮಂದಾಕಿನಿಯು "ನಾನೀಗ ನಿಮ್ಮೊಟ್ಟಿಗೆ ಬಂದರೆ ವೃದ್ಧೆಯು ನಿಮ್ಮ ಮಡದಿಗೆ ಎಲ್ಲವನ್ನೂ ತಿಳಿಸುವಳಂತೆ" ಎಂತ ನುಡಿದಳು.

ಮಡದಿಯ ಹೆಸರು ಕೇಳಿದವರೇ ಪ್ರೊಫೆಸರರ ಜಂಗಾ ಬಲವೇ ಉಡುಗಿದಂತಾಗಿ "ನನ್ನ ಮನೆಯು ಅವಳಿಗೇನು ಗೊತ್ತು?" ಎಂತ ಪ್ರಶ್ನಿಸಲು—

'ಮೊನ್ನೆ ದೇವ ಮಂದಿರಕ್ಕೆ ಹೋಗುವಾಗ ವೃದ್ಧೆಯೂ ನನ್ನೊಟ್ಟಿಗೆ ಬಂದಿದ್ದಳು. ಆ ಕಾಲಕ್ಕೆ ಮಾರ್ಗದ ಪಕ್ಕದಲ್ಲಿದ್ದ ನಿಮ್ಮ ಬಂಗಲೆಯನ್ನು ಅವಳಿಗೆ ತೋರಿಸಿರುವೆನು" ಎಂತ ಚತುರ ವಕೀಲನಂತೆ ಮಂದಾಕಿನಿಯು ನುಡಿದಳು. ಪ್ರೊಫೆಸರರು ತಮ್ಮ ಮಡದಿಗೆ ಅಷ್ಟೊಂದು ಬೆದರುವರೆಂಬುದು ಅವಳಿಗೆ ಗೊತ್ತಿರಲಿಲ್ಲವಾದರೂ ದೈವೀ ಪ್ರೇರಣೆಯೋ ಆಕೆಯನ್ನು ಹಾಗೆ ನುಡಿಯಹಚ್ಚಿತು.

ಹೆಂಡತಿಯ ಹೆಸರು ಕೇಳಿ ಗರಬಡಿದ ಹಾವಿನಂತೆ ನಿರ್ವೀರ್ಯರಾಗಿ ಪ್ರೊಫೆಸರು "ಹಾಗಾದರೆ ಹೀಗೆ ಮಾಡು! ನಾಳೆ ಸಾಯಂಕಾಲ ಕಾಲೇಜು ಬಿಡುತ್ತಲೆ ಆರು ಘಂಟೆಯ ಸುಮಾರಿಗೆ ನೀನು ಸಂಕದ ಕಟ್ಟೆಯ ಹತ್ತಿರ ಬಾ ನಾನು ಅಲ್ಲಿ ನನ್ನ ಕಾರನ್ನು ನಿಲ್ಲಿಸುತ್ತೇನೆ" ಎಂದು ನುಡಿದರು.

(೨೨ ನೇ ಪುಟಕ್ಕೆ)



ಆತ್ಮ

ವೇದವು, ಮುಕ್ತಿಯುಮತ್ತು ಬಂಧ ಸಂಮಿಶ್ರಣ ಎನ್ನುತ್ತದೇ. ಆದರೆ ಇವುಗಳೆಲ್ಲದರ ಮೂಲಕ ನಿತ್ಯ ಮುಕ್ತವೂ ಅಮೃತವೂ ಪರಿಶುದ್ಧವೂ ಪರಿಪೂರ್ಣವೂ ನಿತ್ಯ ಮಂಗಳವೂ ಆವ ಆತ್ಮ ಪ್ರಕಾಶಿಸುತ್ತಿರುವುದು. ಇದು ಸ್ವತಂತ್ರವಾಗಿದ್ದರೆ ಎಂದಿಗೂ ನಾಶವಾಗಲಾರದು ಏಕೆಂದರೆ ನಾಶ ಎಂದರೆ ಆದೊಂಸು ಬದಲಾವಣೆ. ಅನ್ಯಾಶ್ರಯ ಇದು ಸ್ವತಂತ್ರವಾಗಿದ್ದರೆ ಇದು ಪರಿಪೂರ್ಣವಾಗಿರಬೇಕು. ಏಕೆಂದರೆ ಅಗರಿಪೂರ್ಣತೆ ಅನ್ಯಾಶ್ರಯದ ಮೇಲೆ ನಿಂತಿದೆ ಪರಿಪೂರ್ಣವ ದ ಅಮೃತ ಸ್ವರೂಪವಾದ ಆತ್ಮ ಅತಿಶ್ರೇಷ್ಠ ದೇವನಲ್ಲಾಗಲಿ ಅತಿದೀನ ಮಾನವನಲ್ಲಾಗಲಿ ಒಂದೇ ರಿತಿಯಾಗಿ ಇದ್ದಾನೆ. ಇರುವ ಅಂತರ ಇದರ ಪ್ರಕಾಶನದ ತರತಮದಲ್ಲಿ ಮಾತ್ರ

ಆತ್ಮ ಶ್ರದ್ಧೆ ಆತ್ಮಶ್ರದ್ಧೆ ನಮಗೆ ಮಹೋಪಕಾರಿ. ಆತ್ಮಶ್ರದ್ಧೆಯ ತತ್ವವನ್ನು ಜನರಿಗೆಲ್ಲ ಬೋಧಿಸಿದ್ದರೆ. ಅದನ್ನು ಅವರು ಅನುಷ್ಠಾನದಲ್ಲಿ ತಂದಿದ್ದರೆ ನಮ್ಮಲ್ಲಿರುವ ಬಹು ಪಾಲು ಶೋಕ ತಾಪಗಳು ಮಾಯವಾಗುತ್ತಿದ್ದವು ಎನ್ನುವದರಲ್ಲಿ ಸಂದೇಹವಿಲ್ಲ. ಜಗತ್ತಿನ ಮಹಾ ಮಹಿರಾದ ಸ್ತ್ರೀಪುರುಷರ ಶೀಲಗಳಲ್ಲಿ ಕ್ರಿಯೋತ್ತೇಜಕ ಶಕ್ತಿಗಳಲ್ಲಿ ಅತಿ ಶ್ರೇಷ್ಠವಾದುದೇ ಅವರಲ್ಲಿದ್ದ ಆತ್ಮ ಶ್ರದ್ಧೆ ಎಂಬುದು ನಮಗೆ ಅರಿವಾಗುತ್ತದೆ. ನಾವು ಮಹಾಪುರುಷರಾಗುವದಕ್ಕೆ ಜನ್ಮವೆತ್ತಿರುವುದು ಎಂದು ನಂಬಿದ್ದರಿಂದ ಅವರು ಮಹಾಪುರುಷರಾ

ಯೋಗ ಎಲ್ಲಾ ಮಾನವರ ಗುಂ

ಎಲ್ಲಾ ಧರ್ಮಗಳಅಂತವೂ ಒಂದೇ ಆದ೦ದರೆ ಪರಮಾತ್ಮನೊಂದಿಗೆ ಒಂದಾಗುವದು ಅಂದರೆ ಎಲ್ಲರಲ್ಲಿಯೂ ಇರುವ ಪವಿತ್ರತೆಯೊಂದಿಗೆ ಐಕ್ಯವಾಗುವದು ಗುರಿ ಒಂದೇ ಆದರೆ ಜನರ ಪ್ರಕೃತಿಗನು ಸಾರ ಮಾರ್ಗಗಳು ಹಲವು ಗುರಿ ಮತ್ತು ಅವನ್ನು ಸೇರುವ ಮಾರ್ಗ ಇವುಗಳೇ ಯೋಗ Yoke ಎಂದರೆ ಸೇರಿಸು ಎಂಬ ಪದದಂತೆಯೇ ಯೋಗವೆನ್ನುವ ಸಂಸ್ಕೃತ ಮೂಲಕ್ಕೆ ಗೂಡಿಸು ಎಂಬ ಅರ್ಥ ಹಲವು ಯೋಗಗಳಿವೆ ಇವುಗಳಲ್ಲಿ ಮುಖ್ಯವಾದುದೆ. ಕರ್ಮಯೋಗ, ಭಕ್ತಿಯೋಗ, ರಾಜಯೋಗ, ಜ್ಞಾನಯೋಗ.

○ ಈಸು ಕಲಿತುಕೊಳ್ಳುವದಕ್ಕೆ ಮುಂಚೆ ನೀರಿನಲ್ಲಿ ಬಹಳ ಒದ್ದಾಡಬೇಕು ಇವರಂತೆಯೇ ಸಚ್ಚಿದಾನಂದ ಸಾಗರದಲ್ಲಿ ಈಸು ಕಲಿಯಬೇಕಾದರೆ ನೀನು ಬಹಳ ಕಷ್ಟಪಡಬೇಕು.

— ಶ್ರೀ ರಾಮಕೃಷ್ಣರು

○ ಮಾನವ ಜನ್ಮದ ಘನತೆ–ಗೌರವಗಳನ್ನು ಕಾಯ್ದುಕೊಳ್ಳಲು ಪ್ರಾಣಭಯವನ್ನು ಸಹ ಲೆಕ್ಕಿಸದೆ ಪ್ರತಿಯೊಬ್ಬನು ಮಹಾತ್ಮಾಗಾಂಧಿ ಮತ್ತು ವಿನೋಬಾ ಭಾವೆಯವರ ಇಂದ್ರಿಯ ನಿಗ್ರಹ ಮತ್ತು ಸ್ವಾರ್ಥ ತ್ಯಾಗದ ಆದರ್ಶಗಳನ್ನು ಕಾರ್ಯಗತ ಮಾಡುವದರಲ್ಲಿ ನಿರತರಾಗಬೇಕು

— ಡಾ ಎಸ್ ರಾಧಾಕೃಷ್ಣನ್

ಶೀಲ ರಕ್ಷಣೆ

(೨೦ ನೇಯ ಪುಟದಿಂದ ಬಂದದ್ದು)

ಪೀಡೆ ತೊಲಗಿತು ಎಂದ್ಹೇಳಿ ಮಂದಾಕಿನಿಯು "ಹಾಗೆ ಆಗಲಿ ರಾಯರೇ" ಎಂದು ನುಡಿಯಲು ಪ್ರೋಫೆಸರರು ಅಲ್ಲಿಂದ ಸರಸರನೇ ಹೊರಟು ಹೋದರು. ಮಂದಾಕಿನಿಯೂ ಆ ಧೀರ ಗಂಗಮ್ಮನೂ ಸಮಾಧಾನದ ನಿಟ್ಟುಸಿರು ಬಿಡುತ್ತ ಸಂಕಟದಿಂದ ಪಾರುಮಾಡಿದ ಪರಮಾತ್ಮನ ಮಹಿಮೆಯನ್ನು ಅನನ್ಯ ಭಾವದಿಂದ ನೆನೆಯುತ್ತ ಮಲಗಿ ನಿದ್ರಿಸಿದರು.

ಮಾರನೆಯ ದಿನ ಮಂದಾಕಿನಿಯು ತಾನು ಹೇಳಿದಂತೆ ಕಾರಿನತ್ತ ಹೋಗಲಿಲ್ಲ ತನ್ನ ಶೀಲ ರಕ್ಷಣೆಗಾಗಿ ಕಷ್ಟ ಪರಂಪರೆಗಳನ್ನು ಸಹಿಸಿ ಕೊನೆಗೆ ಜಯಶೀಲಳಾಗಿ ತನ್ನ ನೈತಿಕ ಬಲದಿಂದ ಕೇಡನ್ನು ಎದುರಿಸಿದಳು. ಪ್ರೋಫೆಸರರು ಮಾತ್ರ ನೈತಿಕ ಅಧಃಪತನದಿಂದ ಅಧೋಗತಿಗಿಳಿದು ನಿರ್ನಾಮವಾದರು. ಸ್ತ್ರಿಯಶ್ಚರಿತ್ರ್ಯಂ ಪುರುಷಸ್ಯ ಭಾಗ್ಯಂ ದೈವೋ ನಜಾನಾತಿ ಕುತೋ ಮಾನವಾ.

○ ಹೃದಯದಿಂದ ಹೃದಯಕ್ಕೆ ದಾರಿಗಳು ಇದ್ದೇ ಇವೆ.

ಷಟಸ್ಥಲ ಬ್ರಹ್ಮನಿಷ್ಠೆ

ಲೇಖಕರು —ಶ್ರೀ ಬ. ಕ. ಪಾಟೀಲ (ನಿವೃತ್ತ ಶಿಕ್ಷಕರು) ಗದಗ

(ಕಳೆದ ಸಂಚಿಕೆಯಿಂದ ಒಂದದ್ದು)

೩) ಚರಲಿಂಗ— ಒಳಹೊರಗೆ ಸ್ಫುರಣ ಹೊಂದತಕ್ಕ ಸರ್ವೇಂದ್ರಿಯಗಳಿಗೆ ವಾದ ಪುರುಷ ಸ್ವರೂಪ ಆದಿ ಶಕ್ತಿಯುತ ಪರಶಿವ ಚೈತನ್ಯವು ಅನುಭವ ಭಕ್ತಿಯುತ ಪ್ರಾಣ ಲಿಂಗಿಗೆ ಉಪಾಸ್ಯವಾಗಿರುವದು

೪) ಶಿವಲಿಂಗ— ಜ್ಞಾನ ಕಲೆಯೊಡನೆ ಅತ್ಯಂತ ಶೋಭಯಮಾನ ಇಚ್ಛಾ ಶಕ್ತಿ ಯುಕ್ತ ಪರಶಿವ ಚೈತನ್ಯವು ಅವಧಾನ ಭಕ್ತಿಯುಕ್ತ ಪ್ರಸಾದಿಗೆ ಉಪಾಸ್ಯಲಿಂಗ ವಾಗಿದೆ

೫) ಗುರುಲಿಂಗ ಆಚಾರದ ಪೂರ್ಣ ಸ್ಥಿತಿಯಿಂದ ತನ್ನಲ್ಲಿ ಬೆಳೆಯುತ್ತಿರುವ ಪರ ಶಿವ ಜ್ಞಾನವೇ ಗುರುಲಿಂಗ ಜ್ಞಾನ ಶಕ್ತಿ ಯುಕ್ತ ವ ಹೇಶಂಗೆ ಉಪಾಸ್ಯ ದೇವತಯು—

೬) ಆಚಾರಲಿಂಗ— ಶಿವಲಿಂಗ ಸಾಕ್ಷಾತ್ಕಾರಕ್ಕೆ ಸಾಧಕವಾದ ಆಚಾರ ವಾಸನೆ ಗಳಲ್ಲಿ ಹುದುಗಿದ ಶಿವಚೈತನ್ಯವೇ ಆಚಾರ ಲಿಂಗ ಕೇವಲ ಚಿತ್ತಗವ್ಯ ಶ್ರದ್ಧಾ ಭಕ್ತಿ ಯುಕ್ತ ಭಕ್ತನಿಗೆ ಉಪಾಸ್ಯಲಿಂಗವಾಗಿ ರುವದು

೭ **ನೇಪ್ರಕಾರ** ಮಹಾಲಿಂಗ ಪರಮಾ ನಂದವು ಪರವಸ್ತುವಿನಲ್ಲಿ ಅಗಲದಿರುವದು

೨ ಪ್ರಸಾದಲಿಂಗ— ಭಾವಲಿಂಗದ ಸಮ್ಯಕ್ ಜ್ಞಾನವು ಅನುಭವದ ಮುಂದಿನ ಪೆಟ್ಟಾದ ಆನಂದ ಸ್ವರೂಪವನ್ನು ಹೊಂದಲು ಪ್ರಸಾದಲಿಂಗವೆನಿಸುವದು.

೩ ಚರಲಿಂಗ— ವಿವೇಕಾಚಾರವು ಸ್ಥಿರತ್ವ ಹೊಂದಿಅನುಭವಜ್ಞಾನವಾದುದೇಚರಲಿಂಗ

೪ ಶಿವಲಿಂಗ— ಪ್ರಾಣಲಿಂಗದ ಸುಜ್ಞಾನವೇ ವಿವೇಕಾಚರಣೆಯುಳ್ಳದ್ದಾದುದೇ ಶಿಲಿಂಗ ೫ ಗುರುಲಿಂಗ ಇಷ್ಟಲಿಂಗದ ಜ್ಞಾನೋದಯಕ್ಕೆ ಕಾರಣವಾದುದೇ ಗುರು ಲಿಂಗ ೬ **ಆಚಾರಲಿಂಗ** ಇಷ್ಟಲಿಂಗದ ಸುವಿಚಾರವೇ ಸದಾಚಾರ ಮೂಲಕ ಆಚಾರ ಲಿಂಗಅಂತರಂಗಲಿಂಗ ಸ್ಥೂಲಶರೀರ ಇಷ್ಟ ಲಿಂಗಸೂಕ್ಷ್ಮಶರೀರ ಪ್ರಾಣಲಿಂಗ ಕಾರಣಶರೀರ ಭಾವಲಿಂಗ ಗುದದಲ್ಲಿ ಆಚಾರಲಿಂಗವಿದ್ದು ನಾಶಿಕಅದರಮುಖವಾಗಿದೆ ಗುದಆಚಾರ ಲಿಂಗಗುಹ್ಯದಲ್ಲಿಗುರುಲಿಂಗವಿದ್ದು ನಾಲಿಗೆ ಅದರಮುಖವು ಗುಹ್ಯಗುರುಲಿಂಗ ನಾಭಿ ಯಲ್ಲಿಶಿವಲಿಂಗವಿದ್ದು ನೇತ್ರವು ಅದರಮು ಖವು| ಪಾದ ಶಿವಲಿಂಗ ಹೃದಯದಲ್ಲಿ ಚರ ಲಿಂಗವಿದ್ದು ಚರ್ಮವು ಅದರಮುಖವು| ಪಾಣಿಚರಲಿಂಗ ಕಂಠದಲ್ಲಿ ಪ್ರಸಾದಲಿಂಗ ವಿದ್ದು ಕಿವಿಯುಅದರಮುಖ| ವಾಕ್ಕು ಪ್ರ ಸಾದಲಿಂಗ ಭ್ರೂಮಧ್ಯದಲ್ಲಿ

ಮಹಾಲಿಂಗ ವಿದ್ದು ಮನ ಆದರ ಮುಖ। ಪ್ರಾಣ, ಹೃದಯ ಮಹಾಲಿಂಗ ಅಂತರಂಗ ಲಿಂಗ– ಚರಿಸಿವರ್ತಿಸುವದಾಚಾರವಾದಕಾರಣ ಇಡ ಪಿಂಗಳ ನಾಡಿಯಿಂ ರೇಚಕಾದಿಗಳಂಚರಿಸುವದರಿಂದ, ಗಂಧವಂಗ್ರಹಿಸುವ ರಿಂ ನಾಶಿಕ ಆ–ಲಿಂಗ

೨)ಗುರುಲಿಂಗ– ಜಿಹ್ವೆ ನಾಲಿಗೆ।ಮಂತ್ರ ಮೂರ್ತಿಯೇ ಗುರುವಾದ ಕಾರಣ ಷಡಕ್ಷರಿಯೇ ಷಡ್ರುಚಿಯಾಗಿ ಜಹ್ವೆಯ ಮುಖಕ್ಕೆ ಸಲ್ಲುವ ನಾಲಿಗೆಯು ಗುರುಲಿಂಗವು–

೩) ಶಿವಲಿಂಗ-ನೇತ್ರ– ಸ್ವಯಂ ಪ್ರಕಾಶವೇ ಶಿವನು. ಆ ಮಹಾಪ್ರಕಾಶ ನೇತ್ರದಲ್ಲಿ ನೆಲೆಗೊಂಡು ಸಕಲವಸ್ತುಗಳಂ ಕಾಣಿಸಿ ತೋರ್ಪುದರಿಂ ಸರ್ವವಸ್ತುಗಳನರಿಯುವದರಿಂದ ನೇತ್ರವು ಶಿವಲಿಂಗವು–

೪) ಚರಲಿಂಗ-ತ್ವಕ್ಕು ಸರ್ವಾಂಗದಲ್ಲಿ ನೆಲೆಗೊಂಡು ಅಲ್ಲಲ್ಲಿಯ ಸ್ಪರ್ಶನಂ ಅರಿಯುವದರಿಂ ತ್ವಕ್ಕು ಚರಲಿಂಗವೆನಿಸುವದು

೫) ಪ್ರಸಾದಲಿಂಗ- ಶ್ರೋತ್ರ (ಕಿವಿ) ಪ್ರಸಾದವಪ್ಪ ಶಬ್ದಗಳು ಶ್ರೋತ್ರ ಮುಖಕ್ಕೆ ಸಲ್ಲುವದರಿಂದ ಸಕಲ ಶಬ್ದ ನಾದಗಳನರಿಯುವ ಕಿವಿಯೇ ಪ್ರಸಾದಲಿಂಗ

೬) ಮಹಾಲಿಂಗ–ಹೃದಯ ಸರ್ವಪರಿಣಾಮವನರಿಯುವ ಮನವೇ ಮಹಾಲಿಂಗ

೨ನೆ ಪ್ರಕಾರ—ದೇಹ ಆಚಾರಲಿಂಗ। ಆತ್ಮ ಗುರುಲಿಂಗ । ಪ್ರಾಣ ಶಿವಲಿಂಗ ಇಂದ್ರಿಯ ಸಮೂಹ ಚರಲಿಂಗ। ಸೇವಿಸುವ ಷಡ್ವಿಷಯಗಳು ಪ್ರಸಾದಲಿಂಗ ಲಿಂಗ ಪ್ರಸಾದಗಳಿಂ ತೃಪ್ತಿ ಹೊಂದುವದು ಮಹಾಲಿಂಗವು–

ಶಿವಯೋಗಿಗಳಿಗೆ. ಆಕಾರಸಿತ್ಕರಿಗೆ ಸರ್ವಾಂಗವು ಲಿಂಗಮಯವಾಗಿರುವದು. ಲಿಂಗಬಾಹ್ಯಾತ್ ಪರಂನಾಸ್ತಿ. ಲಿಂಗದವಿನಾ ಅನ್ಯವಸ್ತುವೇ ಇಲ್ಲ– ಸರ್ವ ವಸು ಲಿಂಗ ಸ್ವರೂಪವು.

ಜೋಗುಳ ಪದ

ಮಗನ ತೂಗಿರೋ........

ಮಗನ ತೂಗಿರೋ।
ಮಗನ ತೂಗಿರೋ।
ಆಗಜೆ ತನಗೆ ಮೊಲೆ ಹಾಲಿಲ್ಲದೆ।
ಜಗಕೆ ಕಳುಹಿದಳು ಪುತ್ರನ ॥

ಭಕ್ತಿ ರಸವ ತಣಿಯುಲುಂಡು।
ಶಕ್ತಿವಂತನಾಗಿ ಬಕಳ
ಮುಕ್ತಿ ಮಾರ್ಗ ಪಿಡಿದು ಬಾರೆಂ —।
ದ್ಯುಕ್ತಿಯಿಂದ ಕಳುಹಿದಳು ।೧॥

ತಾಯಿ ತಂದೆಗಳನು ಆಗಲು —।
ಪಾಯಿ ತಪ್ಪಿಧರೆಗೆ ಬಂದೆ
ಸಾಯಗೊಡದೆ ಭವದಿ ಕೆಡಹಿ।
ಘಾಯ ಮಾಸಿ ಜನ್ಮರೋಗದ ॥೨॥

ಪರಮ ಶಿವ ಮಹೇಶ ಗಿರಿಜೆ।
ಹಿರಿಯ ತಂದೆ ತಾಯಿಗಳೆನ್ನ
ಮರತರವರು ಮಗನ ಚಿಂತೆ।
ಗುರಿಯ ಮಾಡಿದಿರಯ್ಯ ಸಿಮಗೆ ॥೩॥

— ಶ್ರೀ ಮಹಾಂತ ಶಿವಯೋಗಿಗಳು

ಸುಖಮಯ ಜೀವನ

ವ್ಯಾಪಾರದಲ್ಲಿ ಆಶಾವಾದಿ ಯಾಗಿರಿ

ಲೇ :- ಡಾ ಜೋಶೆಫ್ M.M.M.D.S. Bihar [London]

ವ್ಯಾಪಾರ ಮಾಡುವ ಸಮಯದಲ್ಲಿ ನೀವು ನಿಮ್ಮ ವಿಚಾರವುದ ಬಗ್ಗೆ ನಿಮಗೇನೇ ನಂಬಿಕೆ ಇರದಿದ್ದರೆ ನಿಮ್ಮ ಸಂಗಡಿಗರ ಸಂಗಡ ನೀವು ನಾಚಿಗೇಡಿಗೆ ಈಡಾಗುವಿರಿ.

ನೀವು ಯಾವದೇ ಒಂದು ಇಚ್ಛಿಸಿದ ವ್ಯಾಪಾರವನ್ನು ಮಾಡುತ್ತಿದ್ದೀರೆಂದು ತಿಳಿಯುವಾ ಆದರೆ ನೀವು ನಿಮ್ಮ ಕೆಲಸದ ಬಗ್ಗೆ ಯಾವದೇ ನಂಬಿಕೆ ಇಲ್ಲದೆ ಕೆಲಸ ಮಾಡಬೇಡಿ. ನಿಮ್ಮ ಪ್ರತಿಯೊಂದು ಕೆಲಸಗಳಿಗೆ ನೀವೇ ಆಶಾದಿಯಾಗಿರಿ ನಿಮ್ಮ ಸಂಗಡಿಗರು ನಿಮ್ಮ ಕೆಲಸಗಳನ್ನು ನಂಬಿ ಆದನ್ನು ನೀವು ಕೇಳುವದನ್ನು ನಡಿಸಿ ಕೊಡುತ್ತೀರೆಂದು ನಂಬಿಕೆಯಿಂದ್ದ ಆಶಾವಾದಿಯಾಗಿರಿ.

ನಮ್ಮ ಮಿತ್ರ ಶ್ರೀ ಮಾನ್ ಶಾಂತಾರಾಮಸಿಂಗ ಬಿ. ಎ. ಇವರು ಕಾಳುಕಡಿಗಳ ಅಂಗಡಿಗಳನ್ನಿಡಬೇಕೆಂಬು ಮನಸ್ಸು ಮಾಡಿದರು. ಇದೇ ವಿಷಯುವನ್ನು ನಾನು ಅವರಿಗೆ ಬೆಟ್ಟಿಯಾದಾಗ್ಗೆ ನನ್ನ ಸಂಗಡ ಹೇಳಿದರು ಅದಕ್ಕೆ ನಾನು ಸಹಿತ ಸಂತೋಷದಿಂದ ನನ್ನ ಒಪ್ಪಿಗೆಯನ್ನು ಕೊಟನ್ದೆ.

ಶಾಂತಾರಾಮಸಿಂಗರು. ವಿದ್ಯಾವಂತರಿದ್ದರೇನು ನಿಜ ಅವರಿಗೆ ತಮ್ಮದೇ ಆದ ಅಭಿಮಾನ ವಿದ್ದಿತು. ಯಾವದೇ ಕೆಲಸ ಮಾಡಬೇಕಾದರೂ ತಮ್ಮ ಮನಸ್ಸಿಗೆ ಬಂದಿದ್ದನ್ನೇ ಮಾಡುತ್ತಿದ್ದರು. ಆದರೆ ತಾವು ಮಾಡುವದರಲ್ಲಿ ಕೆಲಸವಾಸಿಯಾಗುತ್ತೇವೆಂಬುವದರಲ್ಲಿ ಆಶಾವಾದಿ ಯಾಗಿಲಿಲ್ಲ.

ಕೆಲವು ವರುಷಗಳ ನಂತರ ಶಾಂತಾರಾಮಸಿಂಗರು ತಾವು ಹೇಳಿದಂತೆ ಕಾಳು-ಕಡಿಗಳ ಅಂಗಡಿಯನ್ನೇನೋ ಇಟ್ಟರು ಆದರೆ ತಮ್ಮ ಮನಸ್ಸಿಗೆ ಬಂದ ಕಾಳು-ಕಡ್ಡಿಗಳನ್ನು ಪರಸ್ಥಳಗಳಿಂದ ತರಿಸಿ ಮಾರಾಟ ಮಾಡಹತ್ತಿದರು. ಆ ಕಾಳು-ಕಡಿಗಳು ನಮ್ಮ ದೇಶದಲ್ಲಿ ಸಿಗುತ್ತಿರಲಿಲ್ಲ ಅಲ್ಲದೆ ಅಲ್ಲಿಯ ನೂರಕ್ಕೆ ೯೦ರಷ್ಟು ಜನರು ಶಾಂತಾರಾಮಸಿಂಗರು ಇಟ್ಟ ಕಾಳುಕಡಿಗ-ಳನ್ನು ಉಪಯೋಗಿಸುತ್ತಿದ್ದಿಲ್ಲ.

ಅದೇ ಅವರ ಅಂಗಡಿಯ ಮುಗ್ಗಲದಲ್ಲಿರುವ ಚಿಕ್ಕ ಕಿರಾಣಿ ಅಂಗಡಿಯಲ್ಲಿ ಗಿರಾಕಿಗಳ ಗದ್ದಲವು ತುಂಬಿರುತ್ತಿತ್ತು ಹಿಗಾಗಿ ಶಾಂತಾರಾಮಸಿಂಗರ ವ್ಯಾಪಾರವು ಕುಂದತೊಡಗಿತು.

ಒಮ್ಮೆ ನಾನು ಶಾಂತಾರಾಮಸಿಂಗರನ್ನು ಭೆಟ್ಟಿಯಾದೆ ಅವರ ವ್ಯಾಪಾರದ

ಬಗ್ಗೆ ವಿಚಾರಿಸಿದೆ. ನಂತರ ನೋಡಲಾಗಿ ಅವರ ಅಂಗಡಿಯಲ್ಲಿ ರಾಗಿ, ಸಜ್ಜೆ, ನಣಿ ಈ ಪ್ರಕಾರ ಜನರು ಹೆಚ್ಚಾಗಿ ಉಪಯೋಗಿಸಲಾರದ ಕಾಳುಕಡಿಗಳೇ ಇದ್ದವು.

ನಾನು ಇದನೆಲ್ಲ ನೋಡಿ ಶಾಂತಾರಾಮ ನೀವು ಅಂಗಡಿಯನ್ನೇನೋ ಸರಿಯಾಗಿ ಇಟ್ಟಿದ್ದೀರಿ ಕಾಳುಕಡಿಗಳನ್ನೇನೋ ಸರಿಯಾಗಿಯೇ ತರಿಸಿದ್ದೀರಿ. ಇಂಥ ಕಾಳುಕಡಿಗಳಿಂದ ನಿಮ್ಮ ವ್ಯಾಪಾರವು ಅಭಿವೃದ್ಧಿಹೊಂದಲಾರದು. ನನ್ನ ಅಭಿಪ್ರಾಯವು ನೀವು ಕಾಳುಕಡಿಗಳನ್ನು ನಿಮ್ಮ ಅಂಗಡಿಯಲ್ಲಿ ಇಡಬೇಕೆಂದೇನೂ ಇಲ್ಲ ಆದರೂ ನೀವು ಇರಿಸಿದ ಕಾಳುಕಡಿಗಳ ಸಂಗಡ ಸಾರ್ವಜನಿಕರು ಸಾರ್ವತ್ರಿಕವಾಗಿ ಯಾವಾಗಲೂ ಉಪಯೋಗಿಸುತ್ತಿರುವ ಅಕ್ಕಿ, ಜೋಳ, ಗೋದಿ, ತೊಗರಿಬೇಳೆ, ಗೋದಿಯನುಚ್ಚು ಹಿಟ್ಟು ಮುಂತಾದವುಗಳನ್ನು ಹೆಚ್ಚಾಗಿ ಇಡಬೇಕು.

ಈಗ ನೀವು ಇಟ್ಟ ಕಾಳುಕಡಿಗಳು ಸಾರ್ವಜನಿಕರು ಯಾವಾಗಲೂ ಪ್ರತಿ ದಿವಸ ಉಪಯೋಗಿಸಲಾರರು. ಎಂದಾದರೊಮ್ಮೆ ನಿಮ್ಮಿಂದ ಕೊಂಡು ಕೊಂಡು ತಿನ್ನುವದರಿಂದ ನಿಮಗೆ ಸಾಕಷ್ಟು ವ್ಯಾಪಾರವಾಗಲಾರದು.

ನನ್ನ ಅಭಿಪ್ರಾಯದಂತೆ ನಾನು ತಿಳಿಸಿದ ಕಾಳುಕಡಿಗಳನ್ನು ನೀವು ಅಂಗಡಿಯಲ್ಲಿ ಇಟ್ಟದ್ದೇ ಆದರೆ ಇದರಿಂದ ಎಲ್ಲರೂ ನಿಮ್ಮ ಅಂಗಡಿಗಳಿಗೇ ಬಂದು ಹೋಗುವರು. ನಿಮ್ಮ ವ್ಯಾಪಾರದ ಬಗ್ಗೆ ನೀವು ಯಾವದೇ ಚಿಂತೆ ಪಡಬೇಕಾಗಿಲ್ಲ ಎಂದು ತಿಳಿಸಿದೆನು.

ಮುಂದೆ ಶಾಂತಾರಾಮಸಿಂಗರು ಅದರಂತೆ ತನ್ನ ಅಭಿಪ್ರಾಯವನ್ನು ತಿಳಿಸಿದಹಾಗೆ ಮಾಡಿದ್ದರಿಂದ ಅವರ ವ್ಯಾಪಾರವು ಅಭಿವೃದ್ಧಿ ಹೊಂದತೊಡಗಿತು.

ನಾವು ಯಾವದೇ ಕೆಲಸವನ್ನು ಮಾಡುತ್ತಿದ್ದರೂ ಆ ಕೆಲಸವು ಸಾರ್ವಜನಿಕರಿಗೆ ಉಪಯೋಗವಾಗುತ್ತದೆಯೋ ಏನೋ ಎಂಬುದನ್ನು ನಾವು ಮೊದಲು ವಿಚಾರಿಸತಕ್ಕದ್ದು. ನಾವು ಮಾಡುವಂಥ ಕೆಲಸವು; ಸಾರ್ವಜನಿಕರಿಗೆ ಆಕರ್ಷಣೆಯುಂಟಾಗುತ್ತಿರಬೇಕು.

ನಾನು ಒಮ್ಮೆ ಒಂದು ಚಪ್ಪಲ ಮಾರುವ ಅಂಗಡಿಗೆ ಹೋಗಿದ್ದೆ. ಅಲ್ಲಿ ನನಗೆ ಬೇಕಾಗಿದ್ದ ಚಪ್ಪಲನ್ನು ಕೊಂಡುಕೊಳ್ಳುವವರ ಸಲುವಾಗಿ ಕೆಲವು ಜೋಡಿ ಬೇರೆ ಬೇರೆ ತರಹದ ಚಪ್ಪಲುಗಳನ್ನು ತರಿಸಿ ಪರೀಕ್ಷಿಸುತ್ತಾ ಕುಳಿತಿದ್ದೆ. ಆ ಸಮಯದಲ್ಲಿ ನವ ತರುಣಿಯೊಬ್ಬಳು ಆ ಅಂಗಡಿಯೊಳಗೆ ಬಂದಳು ಅವಳು ಒಳಗೆ ಬರುತ್ತಲೇ ತನ್ನ ದೃಷ್ಟಿಯನ್ನು ಆ ಅಂಗಡಿಯ ಸುತ್ತಲೂ ತಿರುಗಿಸಿ ತನಗೆ ಬೇಕಾದ ನಮೂನೆಯ ಚಪ್ಪಲನ್ನು ನೋಡತೊಡಗಿದಳು ಆಗ ಅವಳಿಗೆ ಅಲ್ಲಿಯೇ ಡಸ್ಕಿನಲ್ಲಿದ್ದ ಒಂದು ಹೊಸ ನಮೂನೆಯ ಹಸಿರು ಬಣ್ಣದ ಚಪ್ಪಲಿನ ಮೇಲೆ ಅವಳ ದೃಷ್ಟಿ ಹರಿಯಿತು.

ಆಗ ಅಂಗಡಿಯ ಮಾಲಕನು ಅವಳ ಹತ್ತಿರ ಮುಗುಳುನಗೆ ನಗುತ್ತಲೇ ಬಂದು ನಮಸ್ಕಾರ ಬಾಯಿ ಯವರೇ, ಬನ್ನಿ ಕುಳಿತುಕೊಳ್ಳಿ ನಿಮಗೆ ಬೇಕಾದದು ಚಪ್ಪಲುತಾನೇ ನಮ್ಮಲ್ಲಿ ನಿಮ್ಮ ಮನಸ್ಸಿಗೆ ಒಪ್ಪುವಂಥ ಚಪ್ಪಲ ಬೇಕಲ್ಲವೆ? ಎಂದು ಕೇಳಿದನು.

ಆ ನವತರುಣಿಯು ಕುರ್ಚಿಯ ಮೇಲೆ ಕುಳಿತು ನಿಮ್ಮಲ್ಲಿ ಉತ್ತಮವಾದ ಒಳ್ಳೇ ಚಪ್ಪಲ ಇದ್ದರೆ ಕೊಡಬೇಕು. ಚಪ್ಪಲ ಗಟ್ಟಿಮುಟ್ಟಾಗಿದ್ದು, ಚಂದವುಳ್ಳದ್ದಾಗಿರಬೇಕು ಎಂದು ಹೇಳಿದಳು.

ಆಗ ಅವನು ಸೀದಾ ಕಪಾಟಿನ ಹತ್ತಿರ ಹೋಗಿ ಅವಳ ಕಣ್ಣಿಗೆ ನೋಡಲು ಬಿದ್ದ ಹಸಿರು ಬಣ್ಣದ ಹೊಸ ನಮೂನೆಯ ಚಪ್ಪಲನ್ನೇ ತಂದುತೋರಿಸಿದನು. ಚಪ್ಪಲಿನ ಮೇಲಿನ ದೂಳನ್ನು ಜಾಡಿಸುತ್ತ ಬಾಯಿಯವರೇ, ಈ ಹಸಿರು ಬಣ್ಣದ ಚಪ್ಪಲು ನಿಮ್ಮ ಪೈಕಟ್ಟಿಗೂ ನಿಮ್ಮ ಸೈಬಣ್ಣಕ್ಕೂ ಬಹಳ ಒಪ್ಪುತ್ತದೆ. ಇದರ ಕಾಳಿಕೆಯು ಒಂದು ವರುಷದವರೆಗೆ ಬರುತ್ತದೆ. ನಮ್ಮಲ್ಲಿ ಬೇರೆ ಬೇರೆ ನಮೂನೆಯ ಚಪ್ಪಲುಗಳು ಉಂಟು ಆದರೂ ನಿಮಗೆ ಇದನ್ನೇ ತೋರಿಸಿದ್ದೇನೆ. ಇದು ನಿಮಗೆ ಒಪ್ಪಿಗೆಯಾಗದಿದ್ದರೆ ಬೇರೆ ಎಲ್ಲ ನಮೂನೆಯ ಚಪ್ಪಲುಗಳನ್ನು ತೋರಿಸುತ್ತೇನೆ "ಎಂದು ಹೇಳಿ ಆ ಚಪ್ಪಲನ್ನು ತೋರಿಸಿದನು.

ಆ ನವತರುಣಿಯು ಅವನು ತೋರಿಸಿದ ಚಪ್ಪಲನ್ನು ತಿರುಗಿ ತಿರುಗಿ ಬೇರೆ ಚಪ್ಪಲುಗಳನ್ನು ತರಲು ಹೇಳಿದಳು ಅಂಗಡಿ ಮಾಲಕನು ಅವಳು ಹೇಳಿದಂತೆ ಹದಿನೈದು ಇಪ್ಪತ್ತು ಜೋಡಿ ಅದಕ್ಕಿಂತಲೂ ಹೆಚ್ಚಿನ ಕಿಮ್ಮತ್ತಿನ ಚಪ್ಪಲುಗಳನ್ನು ತಂದು ತೋರಿಸಿದನು.

ಅವಳು ಎಲ್ಲವನ್ನು ಅರ್ಧತಾಸಿನ ವರೆಗೆ ಪರೀಕ್ಷಿಸಿ ಕೊನೆಗೆ ಅಂಗಡಿಮಾಲಕನೇ ತೋರಿಸಿದ ಆ ಹಸಿರು ಚಪ್ಪಲನ್ನೇ ಆರಿಸಿ ಕೊಂಡು ಕೊಂಡಳು.

ಅಲ್ಲಿಂದ ಹೊರಗೆ ಹೊಗುವಾಗ ಆ ನವತರುಣಿಯು ನೀವು ಬಹಳ ಅನುಭವಸ್ಥರಿದ್ದೀರಿ ನನಗೆ ಬೇಕಾದಂಥ ಚಪ್ಪಲನ್ನೇ ಆರಿಸಿಕೊಟ್ಟಿದ್ದೀರಿ ಈ ಚಪ್ಪಲು ನನ್ನ ಮನಸ್ಸಿಗೆ ಬಹಳ ಒಪ್ಪಿಗೆಯಾಯಿತು." ಎಂದು ಹೇಳುತ್ತ ಹೋದಳು.

ನಾನು ಯಾವ ವ್ಯಾಪಾರವನ್ನೇ ಮಾಡುತ್ತಿರುವಾಗಲೂ ನಮ್ಮಲ್ಲಿ ಆಶಾವಾದಿಯು ತುಂಬಿರಬೇಕಲ್ಲದೇ ಜನರು ತನನ್ನು ಇಚ್ಛಿಸುತ್ತಾರೆ ಎಂಬುದನ್ನು ಮೊದಲು ಕಂಡು ಹಿಡಿದು ಕೊಳ್ಳುವವರಾಗಬೇಕು.

ದೇವರ ವಾಕ್ಯದಲ್ಲಿ ಹೀಗೆ ಹೇಳಿದೆ

ಅವರವರಿಗೆ ಸಲ್ಲತಕ್ಕದ್ದನ್ನು ಸಲ್ಲಿಸಿರಿ ಯಾರಿಗೆ ಕಂದಾಯವೋ ಅವರಿಗೆ ಕಂದಾಯವನ್ನು ಯಾರಿಗೆ ಸುಂಕವೋ ಅವರಿಗೆ ಸುಂಕವನ್ನು ಯಾರಿಗೆ ಭಯವೋ ಅವರಿಗೆ ಭಯವನ್ನು ಯಾರಿಗೆ ಮರ್ಯಾದೆಯೋ ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ.

ನುಡಿ ಮುತ್ತು

ಬುದ್ಧಿ, ವಿವೇಕ, ದಯೆ, ನ್ಯಾಯ ಇವುಗಳನ್ನು ಬಳಿಸು ಬೇಸು

ತಾರುಣ್ಯದಲ್ಲಿ ಅವಿವೇಕ ಪ್ರಾಯದಲ್ಲಿ ಪಾಪ ಮುಪ್ಪಿನಲ್ಲಿ ಹುಚ್ಚು

ದಯಾ, ಶಾಂತಿ ಕ್ಷಮೆಗಳೇ ದೇವರನ್ನು ಮೆಚ್ಚಿಸುವಮಾರ್ಗ

ರೊಕ್ಕವಿಲ್ಲದಬಾಳು, ಮಕ್ಕಳಿಲ್ಲದ ಮನೆಯು ಅಕ್ಕರಿಲ್ಲದ ತವರೂರ ಇವು ಮೂರು ದಕ್ಕೆಕಾರ್ಯ ಸರ್ವಜ್ಞ

ನಾಲಿಗೆಯನ್ನು, ಹಣದ ಚೀಲವನ್ನು ಯಾರಿಗೂ ತೋರಿಸಬಾರದು.

ಕ್ರೋಧವು ಮೂರ್ಖತೆಯಲ್ಲಿ ಹುಟ್ಟಿ ಪಶ್ಚಾತಾಪದಲ್ಲಿ ಸಾಯುತ್ತದೆ.

ದುಡಿದುಣ್ಣುವ ವಿಳಿಗೆ ನಿದೆ ಅಮೃತದಷ್ಟು ಸವಿ

ಮುಖಸ್ತುತಿಕೊಳ್ಳುವನನ್ನು ಕೊಡುವವನನ್ನು ವಂಚಿಸುವದು.

ಬಾಲ್ಯ ಹಾಗೂ ರಹಸ್ಯ ಇವು ಬಹುದಿನ ಉಳಿಯಲಾರವು

ರೋಗವು ಮನಷ್ಯನನ್ನು ಕೊಲ್ಲಬಹುದು ಆದರೆ ಅದಕ್ಕೂ ಮೊದಲು ಹೆದರಿಕೆ ಕೊಲ್ಲುವದು.

ಗೌಡ್ಯ, ಗುಣ ಇಲ್ಲದ ಹೆಣ್ಣಿಗೆ ರೂಪವಿದ್ದೇನು ಫಲ

ತಾಂಡವ ತನದಿಂದ ತಂದೆಯ ಮನಸೋಲಿಸುವತುಂಟಮಗನಿದ್ದೇನುಫಲ

ಸತ್ಯ ಸದಾಚಾರ ಇಲ್ಲದವ ಹತ್ತು ಸಾವಿರ ಮಾಡಿದರೇನು ಫಲ

ಬಾರೇ ಮಳೆಯೇ

ನೆಲವೆಲ್ಲ ಒಣಗಿಹುದು ।
ಜಲವೆಲ್ಲ ಬತ್ತಿಹುದು ।
ಒಲಿದು ಒಯಲ ಬಾನ ತುಂಬಿ ।
ಬಾರೇ ಮಳೆಯೆ ॥

ಸಿಡಿಲು ಮಿಂಚುಗಳಿಂದ ।
ಜಡಿದು ಮೋಡವೆ ಆಗಿ ।
ಒಡನೆ ಭೂಮಿಗೆ ಇಳಿದು ।
ಬಾರೇ ಮಳೆಯೇ ॥

ಹೊಳೆ ಹಳ್ಳ ಕೆರೆ ಭಾವಿ ।
ಬೆಳೆ ಒಣಗಿ ಹೋಗಿವೆ ।
ಮೊಳಕೆ ಬೀಜ ಒಡೆಯಲಿ ।
ಬಾರೇ ಮಳೆಯೆ ॥

ಮೀನು ಮೊಸಳೆಗಳೆಲ್ಲ ।
ಜನ ದನ ಕರುಗಳೆಲ್ಲ ।
ನಿನೀರದೇ ಸಾಯುವವು ।
ಬಾರೇ ಮಳೆಯೆ ॥

ಗುರು ಬೋಧದ ಮಳೆ ।
ಧರೆ ಜನರ ಹೃದಯ ಮಳೆ
ಸುರಿಯೇ ಜ್ಞಾನ ಫಲಕೆ ।
ಬಾರೇ ಮಳೆಯೆ ॥

ನಂಬಿಕೆ

ಲೇಖಕರು :— ಮ. ಮಲ್ಲಪ್ಪ ಜ್ಞಾನಮಂದಿರ ಹಲಗೂರು

ನಂಬಿಕೆಯಿಲ್ಲದೆ ಯಾವ ಕೆಲಸವೂ ಸಾಗದು. ನಂಬಿಕೆಯೊಂದಿದ್ದರೆ ಕಷ್ಟಸಾಧ್ಯವಾದ ಕಾರ್ಯವನ್ನೂ ಕೂಡ ಪ್ರಯತ್ನಶೀಲತೆಯಿಂದ ಸುಲಭ ಸಾಧ್ಯಮಾಡಿಕೊಳ್ಳಬಹುದು. ಸೃಷ್ಟಿಯ ಮೂಲ ಶಕ್ತಿಯೇ ಅದರಲ್ಲಿ ನಂಬಿಕೆಯನ್ನು ನಾಟಿಸುತ್ತದೆ. ಮನುಷ್ಯನು ಪಾಪ ಪುಣ್ಯಗಳಿಗೆ ಬೆಲೆ ಕೊಡುವದಕೆ ಮಾಡುವುದು ನಂಬಿಕೆ "ಮಾನವನಿಗೆ ಮುಕ್ತಿ ದೊರೆಯುವುದು ಆತನ ದೃಢನಂಬಿಕೆಯಿಂದಲೇ ಆಗಿದೆ" ಎಂದು ರಾಮಕೃಷ್ಣ ಪರಮಹಂಸರು ಹೇಳಿದ್ದಾರೆ "ನಂಬಿನೆಚ್ಚಿ ಕರೆದಡೆ ಓ ಎಂಬನು" ಶಿವನು ಎಂದು ಶ್ರೀ ಬಸವೇಶ್ವರರು ಹೇಳುತ್ತಾರೆ. ಗುರುವಿನಲ್ಲಿ ಪರಮ ಭಕ್ತಿ ನಿಶ್ಚಲ ನಂಬಿಕೆಯಿರುವ ಶಿಷ್ಯನೊಬ್ಬ ತನ್ನ ಗುರುವಿನ ಮಹಿಮೆಯಲ್ಲಿ ಈತನಿಗೆ ಅಪಾರ ನಂಬಿಕೆ, ತನ್ನ ಮನೆಯಿಂದ ಗುರುವಿನ ಆಶ್ರಯಕ್ಕೆ ಬರಬೇಕಾದರೆ ಮಧ್ಯೆ ನದಿಯೊಂದನ್ನು ದಾಟಬೇಕಾಗುತ್ತದೆ. ಗುರುವಿನ ನಾಮಸ್ಮರಣೆಮಾಡಿ ನಿರಾತಂಕವಾಗಿ ನದಿಯನ್ನು ಶಿಷ್ಯನು ದಾಟುವುದನ್ನು ಕಂಡು ಕೇಳಿದ, ಗುರುವಿಗೆ ಅಹಂಕಾರವು ಆವರಿಸುತ್ತದೆ. ನಾನು ನಾನು ಎಂದು ಗರ್ವದಿಂದ ತನ್ನ ಹೆಸರನ್ನು ತಾನೇ ಹೇಳಿಕೊಂಡು, ಅದೇ ನಾಮ ಪಠಿಸುತ್ತ ಈ ಗುರುವು ನದಿಯನ್ನು ದಾಟಲು ಯತ್ನಿಸಲು ತನ್ನಲ್ಲಿಯೇ ನಂಬಿಕೆಯಿಲ್ಲದ ಈತನು ನೀರಿನಲ್ಲಿ ಹೋಗುತ್ತಾನೆ.

ರಾಮಭಕ್ತ ವಿಭೀಷಣನು ರಾಮನಲ್ಲಿಗೆ ದೂತನೊಬ್ಬನನ್ನು ಕಳುಹಿಸುತ್ತಾನೆ. ಆತನ ಅಂಗವಸ್ತ್ರಕ್ಕೆ ತುಳಿಪತ್ರದಲ್ಲಿ ರಾಮನಾಮ ಬರೆದು ಗಂಟುಹಾಕುತ್ತಾನೆ. ನೀನೀಗ ಸರಾಗವಾಗಿ ನದಿಯನ್ನು ದಾಟಬಲ್ಲೇ, ಆದರೆ ನಂಬಿಕೆಯನ್ನು ಕಳೆದುಕೊಂಡರೆ ನಿನ್ನನ್ನು ನೀನೇ ಕಳೆದುಕೊಳ್ಳುತ್ತೀಯೇ ಎಂದು ಹೇಳಿ ಕಳುಹಿಸುತ್ತಾನೆ. ಅಂತೆಯೇ ಸರಾಗವಾಗಿ ಸಾಗಿದ ದೂತನು. ಮಧ್ಯದಾರಿಯಲ್ಲಿ ಕುತೂಹಲವನ್ನು ತಡೆಯಲಾರದೆ ಗಂಟುಬಿಚ್ಚುತ್ತಾನೆ. ಅದರಲ್ಲಿ ರಾಮನಾಮವಿರುವ ತುಳಸಿಪತ್ರವಿರುತ್ತದೆ. ಆಗ ಅದನ್ನು ಅಲಕ್ಷಿಸಿ ಸಾಗಿದ ದೂತನು ಒಂದೇಬಾರಿಗೆ ಆ ನೀರಿನಲ್ಲಿ ಮುಳುಗಿ ಹೋಗುತ್ತಾನೆ.

ಏಕಲವ್ಯನು ಆದರ್ಶ ಶಿಷ್ಯೋತ್ತಮ ಪ್ರತ್ಯಕ್ಷ ಪಾಠ ಸಿಗದಿದ್ದರೂ ಗುರುವಿನ ಪ್ರತಿಮೆಯ ಎದುರಿಗೆ ಅದೇ ಆತನೆಂದು ನಂಬಿನೆಚ್ಚಿ ಆರಾಧಿಸಿ ಶಸ್ತ್ರಾಭ್ಯಾಸವನ್ನು ಸಾಗಿಸಿ ಪ್ರತ್ಯಕ್ಷ ಗುರುಮುಖದಿಂದ ಅರ್ಜುನನು ಕಲಿಯಲಾಗದಂತಹ ಶಬ್ದವೇದಿ ವಿದ್ಯೆಯನ್ನು ಕರತಲಾಮಲಕಮಾಡಿಕೊಂಡ ಏಕಲವ್ಯನ ನಂಬಿಕೆಯೇ ಈ ಚಾತುರ್ಯವಿದ್ಯಾಲಭ್ಯತೆಗೆ ಕಾರಣವಾಗುತ್ತದೆ.

ಕನ್ನಡದ ಜನಪದದ ಕಥೆಯೊಂದು ನಂಬಿಕೆಯನ್ನು ನಿದರ್ಶಿಸುತ್ತದೆ. ತಂದೆಯಿಲ್ಲದ ಮಗುವೊಂದು ದಿನವೂ ಪಕ್ಕದ ಹಳ್ಳಿಯ ಶಾಲೆಗೆ ಹೋಗಬೇಕಾಗುತ್ತದೆ. ಈ ಮಧ್ಯೆ ಕಾಡೊಂದು ಇರುತ್ತದೆ. ಹೆದರಿದ ಮಗುವು ಜೊತೆಬೇಕೆಂದು ತಾಯಿಯನ್ನು ಕೇಳುತ್ತಾನೆ. ಕಾಡಿನಲ್ಲಿರುವ ನಿನ್ನ ಅಣ್ಣ ಕೃಷ್ಣನನ್ನು ಕರೆದರೆ ಸಹಾಯಕ್ಕೆ ಆತನು ಬರುತ್ತಾನೆ ಎಂದು ತಾಯಿ ಹೇಳುತ್ತಾಳೆ. ಆ ಮಗುವು ಅದರಂತೆಯೇ ಆಚರಿಸಿ ಶಾಲೆಗೆ ಹೋಗಲು ಯತ್ನಿಸುತ್ತಾನೆ. ಆಗ ಭಗವಂತನು ಪ್ರತ್ಯಕ್ಷವಾಗಿ ದಿನವೂ ಆ ಮಗುವನ್ನು ಶಾಲೆಗೆ ಕರೆದುಕೊಂಡು ಹೋಗಿ ಬರುತ್ತಾನೆ. ಆ ವಿಷಯ ತಾಯಿಗೂ ಗುರುವಿಗೂ ಗೊತ್ತಾಗುತ್ತದೆ. ನಂಬಿಕೆಯಿಲ್ಲದ ಗುರುವಿಗೆ ದೇವರ ದರ್ಶನವಿಲ್ಲದೆ ಪರದಾಟವಾಗುತ್ತದೆ.

ವೇಶ್ಯೆಯೊಬ್ಬಳು ಗಂಗಾನದಿಯಲ್ಲಿ ಸ್ನಾನಮಾಡಿದರೆ ಸಕಲ ಪಾಪ ಪರಿಹಾರವಾಗುವಾಗುತ್ತದೆ ಎಂಬ ನಂಬಿಕೆಯಿಂದ ಹೊಳೆಯಲ್ಲಿ ಮುಳುಗಿ ಮಜ್ಜನ ಮಾಡುತ್ತಾಳೆ. ತೊಂದರೆಗೆ ಸಿಕ್ಕಿದ್ದಾತನೊಬ್ಬನಿಗೆ ಗಂಗಾತೀರ್ಥ ಸೇವನೆಯಾಗಿ ಆ ಆಪತ್ತು ಪರಿಹಾರವಾಗುತ್ತದೆ. ವೀರಹನುಮಂತನು ತನ್ನ ಸ್ವಾಮಿಯಲ್ಲಿಟ್ಟಿದ್ದ ದೃಢಭಕ್ತಿಯಿಂದ ಅಗಾಧ ಕಾರ್ಯವನ್ನು ಸಾಧಿಸಿದ್ದಾನೆ

ನಂಬಿಕೆಯೇ ಕಾರ್ಯ ಸಾಧನೆಯ ಸೆಲೆ ನೆಲೆಯಾಗಿರುತ್ತದೆ. ಕಾಲ ಯಾವುದೇ ಇರಲಿ ತತ್ವಮಾತ್ರ ಬದಲಿಸದೇ ಇರುತ್ತದೆ. ಆದಕಾರಣ ನಂಬಿಕೆ ನಿಷ್ಠೆಯಿಂದ ನಮ್ಮ ನಮ್ಮ ದಿನಚರಿಯ ಜೀವನವನ್ನು ಸಾಗಿಸಿದರೆ ಜೀವನವು ಜೇನಾಗುತ್ತದೆ. ಈ ನವೀನ ಕಾಲದಲ್ಲಿಯೂ ವಿಶ್ವಾಸದ ವಿಚಿತ್ರ ಘಟನೆಗಳನ್ನು ಲಕ್ಷ್ಯವಿಟ್ಟು ಅವಲೋಕಿಸಿದರೆ ಸಹಾಯವು ಸಿಕ್ಕುತ್ತದೆ. ಸಂಶಯವೇ ಕಾರ್ಯ ನಾಶದ ಮೂಲವಾಗುತ್ತದೆ. ಆದಕಾರಣ ನಂಬಿಕೆಯನ್ನು ನಾವು ಬಾಲ್ಯದಿಂದಲೂ ಬೆಳೆಯಿಸಿಕೊಂಡು ಬಂದರೆ ಮುಂದೆ ಅದೇ ದೊಡ್ಡದಾಗಿ ನಮ್ಮನ್ನು ಹಲವಾರು ಆಪತ್ತು ವಿಪತ್ತುಗಳಿಂದ ಬಿಡುಗಡೆ ಮಾಡುವುದಲ್ಲದೆ ನಮಗೆ ಪರಮಾನಂದವನ್ನುಂಟು ಮಾಡುತ್ತದೆ ನಂಬು ನಂಬಿಲೆ ಮನವೆ ನಂಬಿಕೆಯೇ ಮುಕ್ತಿಗೆ ಮೂಲ ಎಂದು ನಿಜಗುಣ ಶಿವಯೋಗಿಗಳು ಭರವಸೆಯನ್ನಿತ್ತಿದ್ದಾರೆ.

○ ಪ್ರೀತಿ ಎಂಬುದು ಜೀವನದ ನಿಯಮವಾಗಿದ್ದರೆ ಸಾವಿನ ನಡುವೆ ಬದುಕುವದು ಸಾಧ್ಯವಾಗುತ್ತಿರಲಿಲ್ಲ ನಿರಂತರವಾಗಿ ಮೃತ್ಯುವನ್ನು ಗೆಲ್ಲುತ್ತಿರುವದೇ ಜೀವನ.

—ಮ. ಗಾಂಧಿಜಿ

ಬ್ರಹ್ಮವಿದ್ಯೆ ಬ್ರಹ್ಮಚರ್ಯ

ಲೇಖಕರು :— ಶ್ರೀ. ವೇ. ಕೃಷ್ಣಾಚಾರಮಾಧವಾಚಾರ ಕೆರೂರ ಮುಕ್ಕಾಂ ಹುಬ್ಬಳ್ಳಿ

ಮಹನೀಯರ ಕೃಪಾವ-ಲೋಕನದಿಂದ ಈ ಕೆಳಗೆ ವಿವರಿಸುವ ವಿಷಯಗಳು ಬ್ರಹ್ಮವಿದ್ಯೆ- ಅದಕ್ಕನುಗುಣವಾಗಿ (ಬ್ರಹ್ಮಚರ್ಯ) ಬ್ರಹ್ಮವಿದ್ಯೆಯಲ್ಲಿ ಸ್ಥಿತಿ ನಿಶ್ಚಯವಾಗಲು ಬ್ರಹ್ಮಚರ್ಯವೇ ಹೆದ್ದಾರಿಯಾಗಿದೆ. ಬ್ರಹ್ಮಾನುಸಂಧಾನಕ್ಕೆ ಮಹಿಮಾಸ್ಥಾನವೇ ಬ್ರಹ್ಮಚರ್ಯವು ಬ್ರಹ್ಮದಾಧ್ಯಾತ್ಮಕ್ಕೆ ಬ್ರಹ್ಮಚರ್ಯವೇ ಅನುಗುಣವಾಗಿದೆ. ಬ್ರಹ್ಮಚರ್ಯ ಹೃದಯ ಅರಳಿದ ಪುಷ್ಪದ ಹಾಗೆ ಸದಾವಿಕಾಸರೂಪವಾಗಿರುವದು ಮುಖ ಮಂಡಲವು ಚಂದ್ರನಂತೆ ಶಾಂತತೆ ಹಾಗೂ ಪ್ರಕಾಶದಿಂದ ಭರಿತವಾಗುವದು ಮತ್ತು ಸೂರ್ಯನು ಅಂಧಃಕಾರ ನಿವೃತ್ತಿಗೊಳಿಸಿದಂತೆ ಬ್ರಹ್ಮಚರ್ಯ ತೇಜವು ಅಜ್ಞಾನಂಧಃಕಾರವುಂಪರಿಹರಿಸುವದು. ಆಕಾಶ ಮೋಡಗಳಂ ದೃಶ್ಯಂ ರೂಪ ಮಾರುತನಿಂದ ಇದಲ್ಲೆ ಲಯವಾಗದಂತೆ ಬ್ರಹ್ಮಚರ್ಯಕ್ಕೆ ಅಡ್ಡಾಗುವದಲ್ಲಿ ಭಾವನತ್ರಯಂಗಳು ಅಭಾನ ಪ್ರಸತ್ತಾಪಾದಕ ಆವರಣಗಳೂ ಸಂಚಿತಾದಿ ದೋಷಗಳೂ ಇವುಗಳನ್ನು ಗುರುಕುಲವಾಸಿಯಾದ ಬ್ರಹ್ಮಚಾರಿಯು ಬ್ರಹ್ಮವಿದ್ಯೆಗಾಧಾರಧಿಷ್ಟನವಾದ ಶ್ರೀ ಬ್ರ. ಸದ್ಗುರುಗಳಿಂದ ವೇದವೇದಾಂತ ಶೃತಿಸ್ಮೃತಿ ಉಪನಿಷದ್ ಪ್ರಮಾಣದಿಂದ ಆ ಎಲ್ಲ ದೋಷಗಳ ನಿವೃತುಪಾಯವಾದ "ಶ್ರೋತವ್ಯಮಂತ್ರವ್ಯಂ ನಿಧಿದ್ಯಾಸಯೋಃ" ಎಂಬ ಉಪನಿಷತ್ತಿನ ಉಲ್ಲೇಖನದಂತೆ ಶ್ರವಣಾದಿಯಂ ಹೊಂದಿ ಗುರುವನುಗ್ರಹದಿಂದ ಪ್ರಾಪ್ತವಾದ ಬ್ರಹ್ಮವಿದ್ಯ ವಿಶೇಷಣ ಮುಕ್ತಸಾಗರದಲ್ಲಿ ಸಾಕಾರವಾದ ತೆರೆ ನೊರೆ ಬುದ್ಬುದಾದಿ ಹಾಗು ರತ್ನಗಳಂತೆ ಕೆಲವೇ ಆದ್ಯಾತ್ಮ ವಿಷಯ ಅಡಕವಾದ ವಿವರ ಕೆಳಗಿದೆ.

ಬ್ರಹ್ಮಚರ್ಯದಿಂದಾಗುವ ಲಾಭ

ಆಯುಃ ತೇಜೋಬಲ ವೀರ್ಯಂ|
ಪ್ರಜ್ಞಾಶಿಶ್ಚ ಮಹಾಯುಶಃ|
ಪುಣ್ಯಂಚ ಪ್ರತ್ರಿಯತ್ವಂಚ
ಲಭ್ಯತೆ ಬ್ರಹ್ಮಚರ್ಯಯಾಃ

ಆಯುಂ| ತೇಜ| ಬಲ| ಶಕ್ತಿ| ಬುದ್ಧಿ| ಶೋಭಾ| ಸೌಂದರ್ಯ| ಧನ| ಮಹಾಯಶಸ್ಸು| ಪುಣ್ಯಪ್ರೀತಿ| ಈ (೧೧) ನಿಧಿಗಳು ಬ್ರಹ್ಮಚರ್ಯದಿಂದ ಪ್ರಾಪ್ತವಾಗುವವು| ಗೌತುಮಸ್ಮೃತಿ ಇದೆ

(ಚರಕ ಸಂಹಿತೆ ಬೋಧವು)

ಬ್ರಹ್ಮಚರ್ಯ ಮಾಯುಷ್ಯಕಾರಣಾಂ

ಅರ್ಥ :— ಇದು ಆಯುರ್ವೃದಿ ಕಾರಕವಾಗಿದೆ

(ಯೋಗ ಶಾಸ್ತ್ರದಲ್ಲಿ)

ಬ್ರಹ್ಮಚರ್ಯ ಪ್ರತಿಷ್ಠಾಯಾಮ್ ವೀರ್ಯ

ಲಾಭಃ "ಅರ್ಥ" ಮಹಾಶಕ್ತಿಗೆ ಕಾರಣ ವಾದುದೇ ಬ್ರಹ್ಮಚರ್ಯ"

"ಬ್ರಹ್ಮಚರ್ಯ ಪರೋಧರ್ಮಃ। ಸಚಾಪಿ ನಿಯತ ಸ್ವಪಿಯಿ:।"

ಭಾ.ತ ಆದಿ ಪರ್ವವಲ್ಲಿ ವಿಷಯು

"ಯಸ್ಮಾತ್ ಸ್ಮಾದ ಹಂಸಾರ್ಥಾರಣೆ ಆಸ್ಮಿನ್ ವಿಜಿತಸ್ತ್ವಯಾ॥"

ಅರ್ಜುನನಿಂದ ಪರಾಜಯಹೊಂದಿದ ಗಂಧರ್ವನು ಎಲೈ ಅರ್ಜುನನೆನಿನ್ನ ಪ್ರಖ್ಯಾತಿಯು ಆ ಬ್ರಹ್ಮಚಾರಿತ್ರ್ಯದಿಂದಲೇ ನಿನ್ನ ಕೀರ್ತಿ ಹಬ್ಬಿದೆ ಆ ಬ್ರಹ್ಮಚರ್ಯ ಶಕ್ತಿಯಿಂದ ನನ್ನ ನೀನು ಸೋಲಿಸಿದೆಯೆಂದು ಧನ್ಯವಾದನ ಮಾಡಿದನು. ಹೀಗೆ ಬ್ರಹ್ಮಚರ್ಯದಲ್ಲಿ ಒಂದು ವಿಶಿಷ್ಟತೆಯು ನೆಲೆಗೊಂಡಿದೆ- ಹಾಗೂ ಈ ನಾಮದ ಆಂದವಾದ ಪ್ರಾಸಂಗಿಕವು ಎಷ್ಟು ಮನೋಹರವಾಗಿದೆ (ಬ್ರಹ್ಮದ ಆಚಾರ್ಯ=ಬ್ರಹ್ಮಚರ್ಯ) ಇಂಥಾ ಬ್ರಹ್ಮಚರ್ಯನು ಬ್ರಹ್ಮವಿದ್ಯೆಯನ್ನರಿತು ಅದರ ವಿಶಿಷ್ಟತೆಯು ತನ್ನನುಭವದಿಂದ ಪೇಳಿದ ವಿವರಣೆಗಳು ಅನೇಕರಲ್ಲಿ ಒಂದೆರಡುಗಳನ್ನು ಇಲ್ಲಿ ವಿವರಿಸುವ — ಮನೆ ಸಣ್ಣದು ವಂದಿ ಬಹಳೆಂದರೆ— ತೊಂದರೆಯಾಗುವದು—. ಸಣ್ಣದಾದ ಸಂಪುಟದಲ್ಲಿ ವಿಶೇಷ ವಿಷಯಗಳನ್ನು ತುಂಬುವದು ಕಠಿಕಷ್ಟ, ಆದರೂ ನಮ್ಮ ನಿಮ್ಮ ನಿಕಟ ಸಂಬಂಧನಿದ್ದ ಕಾರಣ- ಈಗ ಕೊರತೆಯಾಗುವ ವಿಷಯು ಮುಂದಿನ ಸಲ ಅದ ನಿಮ್ಮ ಮನಸ್ಸಂಬಿಸುವ ಹೊಣೆಯು ನನಗಿದೆ ವಾಚಕರ ವಿಕಾಸ ವೃತ್ತಿಯಲ್ಲಿ ನಲಿದಾಡುವ ವಿಷಯುಗಳೇ ಶ್ಲಾಘ್ಯನಿಯುವು ಇಲಿ–ಇನ್ನು ಆ ಬ್ರಹ್ಮವಿದ್ಯೆಯು ವಿಶಿಷ್ಟತೆ ಯಾವದು ಅದು ಎಂತಹದೆಂಬುವದು ಒಂದೇಒಂದು ಶ್ಲೋಕದಲ್ಲಿ ಪೇಳ್ವೆ.

"ಮಾತೇವ ರಕ್ಷತಿ ಪಿತೇವ ಹಿತೇನಿ ಯುಕ್ತೇ।

ಕಾಂತೇವಚಾಭಿ ರಮಯತ್ಯಪನೀಯ ಖೇದಮ್।

ಕೀರ್ತಿಂಚದಿಕ್ಷು ವಿಮಲಾಂ। ವಿತನೋತಿ ಲಕ್ಷ್ಮಿಂ।

ಕಿಂಕಿಂ ನಸಾಧಯತಿ। ಕಲ್ಪಲತೇವ ವಿದ್ಯಾ॥

ಬ್ರಹ್ಮವಿದ್ಯೆಯು ಸರ್ವದಾ ತಾಯಿಯಂತೆ ರಕ್ಷಿಸುತ್ತದೆ। ತಂದೆಯಂತೆ ಕಾರ್ಯಗಳಲ್ಲಿ ನಿಯೋಜಿಸುತ್ತದೆ.। ಪತಿವೃತಾ ಸ್ತ್ರೀಯಂತೆ ಸರ್ವ ಪ್ರಕಾರದ ಆನಂದವನ್ನಿತ್ತು ದು:ಖಗಳಿಂದ ಕಾಪಾಡುತ್ತದೆ। ಜಗತ್ತಿನಲ್ಲಿ ಕೀರ್ತಿಯಂ ಹಬ್ಬಿಸುವದು ಹಾಗು ಯಥೇಷ್ಟ ಧನವನ್ನು ಕೊಡುವದು ಮತ್ತು ಈ ಬ್ರಹ್ಮವಿದ್ಯೆಯು ಕಲ್ಪವೃಕ್ಷದಂತೆ ಬಯಕೆ ಪೂರ್ಣಿಸುವ ಸತ್ವತ್ವ ಮಾತ್ರವು ಇದರಲ್ಲಿ ಹಾಸುಹೊಕ್ಕಾಗಿದೆ ಅಂತೆ ಈ ವಿದ್ಯೆ ಸಂಪಾದಕರು ಮಾನವರಲ್ಲಿ ಮುಖ್ಯರು ಈ ವಿದ್ಯದಿಂದ ಜನನ ಮರಣಾದ್ಯರಿಷ್ಟಗಳು ಸಂಪೂರ್ಣ ಹಾನಿಗೊಂಬುವಲ್ಲಿ ಆವ ಸಂಶಯವಿಲ್ಲ.

ಮಹಿಳಾಲೋಕ

ವಿವಾಹ—ವಿಚ್ಛೇದನ

ಲೇಖಕರು :— ಭೀಮರಾವ. ದೇ ಪತ್ತಾರ. ಜಾವೂರ.

ಕುಟುಂಬಕ್ಕೂ ವಿವಾಹಕ್ಕೂ ನಿಕಟ ಸಂಬಂಧವಿರುತ್ತದೆ. ವಿವಾಹವು ಎರಡು ಲಿಂಗಗಳೊಡನೆ ಇರುವ ಸಂಬಂಧ ಈ ಸಂಬಂಧವು ಪ್ರಜಾ ಸಂಖ್ಯೆಯನ್ನು ನಿರ್ಧರಿಸುವುದಲ್ಲದೆ. ಅದರ ಗುಣ ನೀತಿಗಳನ್ನು ಸಹ ನಿರ್ಧರಿಸುತ್ತದೆ. ಸ್ವೇಚ್ಛಾ ಸಂಪರ್ಕದ ವಿವಾಹ ಪದ್ಧತಿ ಇರುವ ಸಮಾಜವು ಉತ್ತಮ ನಾಗರಿಕರನ್ನು ಹುಟ್ಟಿಸದು. ನಾಗರಿಕರ ಗುಣ ಮತ್ತು ಅವರ ನೀತಿಯ ಮಟ್ಟವನ್ನು ಸಮಾಜ ಮತ್ತು ರಾಷ್ಟ್ರಗಳು ಕಣ್ಣಲ್ಲಿಟ್ಟುಕೊಂಡು ನೋಡಬೇಕಾಗುತ್ತದೆ. ಇದಕ್ಕಾಗಿ ಸಮಾಜವು ವಿವಾಹ ಪದ್ಧತಿಯನ್ನು ನಿಯಂತ್ರಿಸುತ್ತದೆ. ಸಮಾಜವು ಒಳ್ಳೆಯದಾಗಿ ಶಾಂತಿಯಿಂದ ಬಾಳಬೇಕಾದರೆ ಅದರಲ್ಲಿ ಹುಟ್ಟುವ ನಾಗರಿಕರು, ದೃಢಕಾಯರಾಗಿರಬೇಕು. ಗುಣವಂತರಾಗಿರಬೇಕು. ಒಳ್ಳೆಯ ವಿವಾಹ ಪದ್ಧತಿಯಿಂದ ಇದನ್ನು ಸಾಧಿಸಲು ಸಾಧ್ಯವಿದೆ.

ವಿವಾಹವು ಪುರುಷ ಮತ್ತು ಮಹಿಳೆಯ ಲೈಂಗಿಕ ಸಂಬಂಧವೆಂದು ಹೇಳಿದರೂ ಅದು ಎರಡು ಹೃದಯಗಳ ಸಮ್ಮಿಲನವೆನ್ನಬಹುದು. ವಿವಾಹವು ಮನುಷ್ಯನ ಎರಡು ಮುಖ್ಯ ಬಯಕೆಗಳನ್ನು ತೃಪ್ತಿಗೊಳಿಸುತ್ತದೆ. ೧ ಲೈಂಗಿಕ ಬಯಕೆ, ೨ ಸಂತಾನೋತ್ಪತ್ತಿ ಬಯಕೆ, ವಿವಾಹದ ಮೂರನೆ ಉದ್ದೇಶವು ಆರ್ಥಿಕವೂ ಹೌದು. ಪತಿ—ಪತ್ನಿಯರು ಒಬ್ಬರಿಗೊಬ್ಬರು ಕೆಲಸದಲ್ಲಿ ಅನುಕೂಲರಾಗಿದ್ದು, ತಮ್ಮ ಜೀವನವನ್ನು ಸ್ನೇಹ ಮತ್ತು ಪ್ರೇಮಮಯ ವಾತಾವರಣದಲ್ಲಿ ಸಾಗಿಸುವರು. ಇದಕ್ಕೂ ಹೆಚ್ಚಿನದೆಂದರೆ ವಿವಾಹವು ಕೇವಲ ಕಾಮವಲ್ಲ, ಅದು ಎರಡು ಆತ್ಮಗಳ ಪ್ರೇಮ ಸಮ್ಮಿಲನವೆನ್ನಬಹುದು. ಆದರೆ ವಿವಾಹ ಪದ್ಧತಿಗಳಲ್ಲಿ ಬಹುಪತ್ನಿತ್ವ, ಬಹುಪತಿತ್ವ, ಏಕಪತ್ನಿತ್ವ, ಎಂದು ನಡೆದುಬಂದಿದೆ.

ಆದರೆ ಈ ಯಾವತ್ತೂ ಪದ್ಧತಿಗಳಲ್ಲಿ ಏಕಪತ್ನಿತ್ವವೇ ಪ್ರಪಂಚದ ನಾನಾ ಭಾಗಗಳಲ್ಲಿ ಮಾನ್ಯತೆ ಪಡೆದಿದೆ ಮತ್ತು ಪ್ರಚಾರದಲ್ಲಿದೆ. ಅಲ್ಲದೆ ಕೆಲವು ದೇಶಗಳಲ್ಲಿ ಸರಕಾ

ರವೂ ಕೂಡಾ ಕಾಯಿದೆಗಳನ್ನು ಪಾಸು ಮಾಡಿ ಏಕ ಪತ್ನಿತ್ವವನ್ನು ರೂಢಿಗೆ ತಂದಿವೆ. ಏಕಪತ್ನಿತ್ವವು ಅತ್ಯಂತ ಉತ್ತಮ ವಾದ ವಿವಾಹವಲ್ಲದೆ ಇಬ್ಬರ ಹೃದಯಗಳ ನಿಜವಾದ ಸಮ್ಮಿಲನವಾಗಬೇಕಾದರೆ ಅದು ಏಕ ಪತ್ನಿತ್ವದಲ್ಲಿಯೇ ವಿನಾಃ ಇತರ ವಿವಾಹ ಪದ್ಧತಿಗಳಲ್ಲಿ ಸಾಧ್ಯವಿಲ್ಲವೆನ್ನ ಬಹುದು ಏಕ ಪತ್ನಿತ್ವದಿಂದ ಸಂಸಾರದ ಸುಖ, ಶಾಂತಿ, ಮತ್ತು ಸಾಮರಸ್ಯಗಳು ಬೆಳೆಯುತ್ತವೆ ಇಬ್ಬರು ಹೆಂಡಿರನ್ನು ವಿವಾಹವಾದವರ ಪಾಡನ್ನು ನಾವು ಅನೇಕ ಸಲ ಪ್ರಪಂಚದಲ್ಲಿ ಕಾಣುತ್ತೇವೆ. "ಯಾವ ಮನುಷ್ಯನು ಒಬ್ಬ ಮಹಿಳೆಗಿಂತ ಹೆಚ್ಚು ಮಹಿಳೆಯರನ್ನು ವಿವಾಹವಾಗುತ್ತಾನೋ ಅವನು ಕಷ್ಟ ಮತ್ತು ಅಶಾಂತಿಗಳನ್ನು ಅಪ್ಪಿದಂತೆ"....ಏಕ ಪತ್ನಿತ್ವದಲ್ಲಿ ಪ್ರೇಮವು ಶುದ್ಧಿ ಹೊಂದುತ್ತದೆ ಒಮ್ಮೆ ಶುದ್ಧಿ ಹೊಂದಿದ ಪ್ರೇಮವು ಬಹುಕಾಲ ಬಾಳ ಬಲ್ಲದು. ಮತ್ತು ಏಕ ಪತ್ನಿತ್ವವೇ ಅತ್ಯಂತ ಸ್ವಾಭಾವಿಕವಾದ ವಿವಾಹ ವ್ಯವಸ್ಥೆ. ಈ ಕಾರಣಗಳಿಂದ ನಾಗರಿಕ ಪ್ರಪಂಚದಲ್ಲೆಲ್ಲ ಏಕ ಪತ್ನಿತ್ವವೇ ಈಗ ಹೆಚ್ಚಾಗಿ ರೂಢಿಯಲ್ಲಿದೆ ಆದರೆ ಒಮ್ಮೆ ವಿವಾಹವಾಯಿತೆಂದರೆ, ವಿವಾಹದ ಬಂಧನವು ಎಷ್ಟು ಕಾಲ ಇರಬೇಕ? ಗಂಡಹೆಂಡಿರಲ್ಲಿ ಯಾರು ಇಚ್ಛಿಸಿದರೂ ಈ ವಿವಾಹದ ಬಂಧನವನ್ನು ಕಡಿದುಕೊಳ್ಳಬಹುದೆ? ಎಂಬ ಪ್ರಶ್ನೆಯು ಬರುತ್ತದೆ, ಆದರೆ ಹಿಂದೂ ಧರ್ಮಾಧಿಕಾರಿಗಳು ವಿವಾಹದ ವಿಷಯದಲ್ಲಿ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ....'ವಿವಾಹವು ಧರ್ಮದ ವಿಷಯ ವಿವಾಹದ ಬಂಧನವು ಒಮ್ಮೆ ಕಟ್ಟಿತೆಂದರೆ ಅದನ್ನು ಬಿಚ್ಚಲಿಕ್ಕೆ ಬಾರದು. ವಿವಾಹದ ಸಂಕಲ್ಪವು ದೇವರಿಂದ ಆದದ್ದು ಆದ್ದರಿಂದ ಈ ವಿವಾಹ ಬಂಧನವು ಯಾರಿಂದಲೂ ಬೇರ್ಪಡಿಸಲಾಗದು. ಆದ್ದರಿಂದ ವಿವಾಹ ವಿಚ್ಛೇದನವು ವಿವಾಹದ ಪವಿತ್ರತೆಯನ್ನು ಹಾಳು ಮಾಡುತ್ತದೆ. ಸಮಾಜದ ಏಳಿಗೆಗೆ ಕೊಡಲಿ ಪೆಟ್ಟನ್ನು ಕೊಡುತ್ತದೆ. ಆದ್ದರಿಂದ ವಿವಾಹ ವಿಚ್ಛೇದನವು ಹಿಂದೂಧರ್ಮ ಶಾಸ್ತ್ರಪ್ರಕಾರ ನಿಷೇಧಿಸಲ್ಪಟ್ಟಿದೆ ಹಿಂದೂ ವಿವಾಹ ಸಂಸ್ಕಾರದಲ್ಲಿ ಜನ್ಮ ಜನ್ಮಾಂತರಗಳಲ್ಲಿ ಒಮ್ಮೆ ವಿವಾಹವಾದ ಪತಿ—ಪತ್ನಿಯರ ಸಂಬಂಧವು ಎಂದೂ ಮುರಿಯಬಾರದು. ಒಂದು ವೇಳೆ ಅಕಸ್ಮಾತ ಪತಿ–ಪತ್ನಿಯರಲ್ಲಿ ಮತಭೇದ ಉಂಟಾಗಿ ಸಿಟ್ಟಿನ ಭರದಲ್ಲಿ ಜಗಳಗಳಾಗುವ ಸಂಭವವೂ ಇರುತ್ತವೆ. ಆದರೆ ಜೀವನದಲ್ಲಿ ದುಃಖವು ಬಹಳ ಕಾಲದವರೆಗೆ ಎಂದೂ ಇರುವದಿಲ್ಲ. ಕಲಹವೂ ಒಂದೇ ಸಮ ಬಹುದಿನಗಳವರೆಗೆ ಉಳಿಯದೆ ಇಬ್ಬರಲ್ಲಿಯೂ ಪರಸ್ಪರ ಪ್ರೇಮ ವಿಶ್ವಾಸ ಉಂಟಾಗುವದು ಸ್ವಾಭಾವಿಕವಾಗಿರುತ್ತದೆ ಆದ್ದರಿಂದ ಸಿಟ್ಟಿನಭರದಲ್ಲಿ ಯಾವದೇ ಕಾರಣದಿಂದ ವಿವಾಹ—ವಿಚ್ಛೇದನಕ್ಕೆ ಸುಗ್ಗುವದು ಭಾರತೀಯ ಹಿಂದೂ ವಿವಾಹ ಸಂಸ್ಕಾರದ ಪ್ರಕಾರ ಮಹಾ ದೋಷವೆಂದು ಪರಿಗಣಿಸಲಾಗಿದೆ. ಆದರೆ ಇಂದಿನ ಸುಧಾ

ರಿಸಿದ ರಾಷ್ಟ್ರಗಳಾದ ಅಮೇರಿಕಾದಂಥ ದೇಶಗಳಲ್ಲಿ ಪ್ರತಿ ವರ್ಷ ಸುಮಾರು ೮-೧೦ ಲಕ್ಷ ವಿವಾಹ—ವಿಚ್ಛೇದನಗಳಾಗುತ್ತವೆ. ಮತ್ತು ಉತ್ತರೋತ್ತರ ಇವುಗಳ ಸಂಖ್ಯೆಯು ಬೆಳೆಯುವದರಲ್ಲಿಯೇ ಇದೆ ರೂಸ ದೇಶದಲ್ಲಿಯಂತೂ ಇಂದ ವಿವಾಹವಾದರೆ ನಾಳೆಯೇ ವಿವಾಹ ವಿಚ್ಛೇದನ ಇದೂ ಕೂಡಾ ಆಶ್ಚರ್ಯದ ಸಂಗತಿ. ಆದರೆ ನಮ್ಮ ಭಾರತೀಯ ಹಿಂದೂ ಸಮಾಜದಲ್ಲಿ ವಿವಾಹ-ಬಂಧನದ ಕಾರಣವಾಗಿ ಸ್ತ್ರೀ—ಪುರುಷರು ಅಷ್ಟೊಂದು ಸಹಜವಾದ ವಿಚ್ಛೇದನಕ್ಕೆ ಗುರಿಯಾಗುವದಿಲ್ಲ, ಇದೊಂದು ಉಳಿದ ದೇಶಗಳಿಂದ ಮಹತ್ವದ ವಿಷಯ. ಆದರೆ ಪಾಶ್ಚಿಮಾತ್ಯಗಳಂತಹ ದೇಶಗಳಲ್ಲಿ ಈ ವಿವಾಹ-ವಿಚ್ಛೇದನದ ಸಂಖ್ಯೆಯು ಬೆಳೆಯುತ್ತ ಅಲ್ಲಿಯ ಸಮಾಜದಲ್ಲಿ ಅಶಾಂತಿ ಮತ್ತು ಅಸಹಕಾರ ಬೆಳೆದು ಅನಾಚಾರದ ವೃದ್ಧಿಯೇ ಆಗಲಿಕ್ಕೆ ಹತ್ತಿದೆ. ಅಲ್ಲಿ ಪತಿ-ಪತ್ನಿಯರ ವಿವಾಹ ವಿಚ್ಛೇದನವಾದ ಕೂಡಲೆ, ಮತ್ತೆ ಮತ್ತೊಬ್ಬ ಸ್ತ್ರೀಯೊಡನೆ ಪುರುಷನ—ವಿವಾಹ, ಮತ್ತೊಬ್ಬ ಪುರುಷನೊಡನೆ ಸ್ತ್ರೀಯ ಪುನಃ ವಿವಾಹ, ಈ ಪರಿಣಾಮವಾಗಿ ಮೊದಲಿನ ದಂಪತಿಗಳಿಂದ ಹುಟ್ಟಿದ ಮಕ್ಕಳು ಅನಾಥರಾಗುವರು. ಮಹಿಳೆಯರಲ್ಲಿ ಮಾತೃತ್ವದ ವೃತ್ತಿ ಮತ್ತು ತಂದೆಗಳಲ್ಲಿ ಪಿತೃತ್ವದ ಪವಿತ್ರ ಭಾವನೆಯು ನಷ್ಟವಾಗಿ ಹೋಗುವದು. ಇದರಿಂದ ಮಕ್ಕಳ ಲಾಲನೆ ಪಾಲನೆಯ ದುರ್ದೆಶೆ ಉಂಟಾಗುವದು. ಮಾತೃತ್ವ ಮತ್ತು ಪಿತೃತ್ವದ ಭಾವನೆಯು ನಷ್ಟವಾದ ಮೇಲೆ ಸಮಾಜದ ಮೇಲೆ ಬಹಳೇ ಭಯಂಕರ ಸ್ಥಿತಿ ಉಂಟಾಗುತ್ತದೆ. ಆದರೆ ಈ ವಿವಾಹ-ವಿಚ್ಛೇದದ ದುಷ್ಪರಿಣಾಮವು ಸ್ತ್ರೀ ಜಾತಿಗೇನೆ ಬಹಳ ಹಾನಿಕಾರಕವಾಗಿ ಪರಿಣಮಿಸುತ್ತದೆ. ಇದರಿಂದ ಎಲ್ಲ ದೃಷ್ಟಿಯಿಂದಲೂ ಹಾನಿಯೇ ಕಂಡು ಬರುತ್ತದೆ ಆದ್ದರಿಂದ ಈ ಕಾನೂನಿಗೆ ಪ್ರತಿಯೊಬ್ಬ ಸ್ತ್ರೀ—ಪುರುಷರೂ ವಿರೊಧ ಮಾಡುವದೇ ಮುಖ್ಯ ಕರ್ತವ್ಯ. ಹಿಂದು ಶಾಸ್ತ್ರಗಳ ಅನುಸಾರ ಸತೀತ್ವವು ಬಹಳೇ ಮಹತ್ವದ್ದಿರುತ್ತದೆ. ಭಾರತೀಯ ಮಹಿಳೆಯು ಪರಪುರುಷರ ಚಿಂತನಮಾಡುವದನ್ನೂ ಪಾಪವೆಂದು ತಿಳಿಯಲಾಗಿದೆ ಎಷ್ಟೋ ನಮ್ಮ ಹಿಂದೂ ಸ್ತ್ರೀಯರು ತಮ್ಮ ಪತಿಯೇ ದೇವರೆಂದು ಪತಿಯ ಶವವನ್ನು ತಮ್ಮ ಉಡಿಯಲ್ಲಿ ಹಾಕಿಕೊಂಡು ತಮ್ಮ ಪ್ರಾಣ ತ್ಯಾಗವನ್ನು ಮಾಡಿದವರು ಇದ್ದಾರೆ, ಇಂಥ ಪವಿತ್ರ ಮತ್ತು ಪುಣ್ಯ ಮಹಿಳೆಯರು ನಮ್ಮ ಹಿಂದೂ ಸಮಾಜದಲ್ಲಿ ಇದ್ದಾರೆ. ತಮ್ಮ ಭಾರತ ಮಹಿಳಾ ಲೋಕಕ್ಕೆ ಅವರ ಸತಿತ್ವ ಮತ್ತು ಮಾತೃತ್ವಕ್ಕೆ ಬಹಳೇ ದೊಡ್ಡ ಗೌರವವಿದೆ. ಈ ಮಹಿಳಾ ಜಾತಿಯ ಗೌರವವೇ ಭಾರತದ ಗೌರವ ಈ ಅಮೌಲ್ಯ ಗೌರವನ್ನು ಕಾಪಾಡಿಕೊಂಡು ಹೋಗುವದೇ ನಮ್ಮ ಭಾರತೀಯ ಮಹಿಳೆಯರ ಪರಮ ಕರ್ತವ್ಯವಾಗಿದೆ.

ಬಿಟ್ಟಿ ಹೆಣ್ಣು ಸಿಕ್ಕೋಹಾಗಿದ್ದರೆ ನನಗೊಂದು ನಮ್ಮಪ್ಪಗೊಂದು ತರಕೊಳ್ಳು ತರೊಹಾಗಿದ್ದರೆ ನಮ್ಮಪ್ಪ ಮುದುಕ ನಾನಿನ್ನೂ ಹುಡುಗ.


ಜೀವನ

ಈ ಪ್ರಪಂಚವನ್ನು ತುಂಬಿಕೊಂಡಿರುವ ಪರಮಾಣುಗಳಲ್ಲಿ ಕೂಡಿಸುವ ಶಕ್ತಿ ಇಲ್ಲದೆ ಹೋಗಿದ್ದರೆ ಅದು ಪುಡಿಯಾಗುತ್ತಿತ್ತೆಂದೂ ನಾವು ಉಳಿಯುತ್ತಿರಲಿಲ್ಲವೆಂದೂ ವಿಜ್ಞಾನಿಗಳು ಹೇಳುತ್ತಾರೆ ಮತ್ತು ಈ ಕೂಡಿಸುವ ಶಕ್ತಿ ಅಂಥ ವಿವೇಚನಾರಹಿತ ವಸ್ತುಗಳಲ್ಲಿಯೂ ಇರುವಂತೆ ಸಮಸ್ತ ಜೀವಂತ ವಸ್ತುಗಳಲ್ಲಿಯೂ ಇರಲೇಬೇಕು. ಅದರ ಹೆಸರು ಪ್ರೇಮ. ಆ ಶಕ್ತಿಯನ್ನು ನಾವು ತಂದೆ-ಮಕ್ಕಳ ನಡುವೆ ಸೋದರ-ಸೋದರಿಯರ ನಡುವೆ ಸ್ನೇಹಿತ ಸ್ನೇಹಿತರ ನಡುವೆ ಕಾಣುತ್ತೇವೆ. ಸಮಸ್ತ ಜೀವರಾಶಿಗಳಲ್ಲಿರುವ ಆ ಶಕ್ತಿಯನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ನಾವು ಕಲಿಯಬೇಕಾಗಿದೆ. ಮತ್ತು ನಮಗೆ ಭಗವದ್ ವಿಷಯದಲ್ಲಿರುವ ಜ್ಞಾನವೆಲ್ಲ ನಾವು ಅದನ್ನು ಬಳಸುವುದರಲ್ಲಿಯೇ ಅಡಕವಾಗಿದೆ. ಪ್ರೇಮವಿದ್ದಲ್ಲಿ ಜೀವನ ದ್ವೇಷ ನಾಶಕ್ಕೆ ದಾರಿ.

ದೇವರು

ಸತ್ಯ ಪ್ರೀತಿಗಳೇ ನನಗೆ ದೇವರು. ಧರ್ಮ ಮತ್ತು ನೀತಿ ದೇವರು ನಿರ್ಭೀತಿ. ದೇವರು ಜ್ಯೋತಿಯ ಮತ್ತು ಜೀವನದ ಮೂಲ. ಆದರೂ ಅವನು ಇವುಗಳೆಲ್ಲದರ ಮೇಲಿದ್ದಾನೆ. ಇವುಗಳೆಲ್ಲದರಾಚೆಗಿದ್ದಾನೆ. ದೇವರು ಆತ್ಮಸಾಕ್ಷಿ. ನಾಸ್ತಿಕನ ನಾಸ್ತಿಕ್ಯವೂ ಅವನೇ ಏಕೆಂದರೆ ಅವನು ಅಸೀಮ ಪ್ರೀತಿಯಿಂದಲೇ ನಾಸ್ತಿಕನೂ ಬದುಕಲು ಎಡೆಯಿದೆ.

ದೇವರು ಈ ನಮ್ಮ ಮಣ್ಣಿನ ಪೆಟ್ಟಿಗೆಯ ಹೊರಗಡೆಯಲ್ಲಿಲ್ಲ ಆದಕಾರಣ ಹೊರಗಣ ರುಜುವಾತಿನಿಂದ ಯಾವ ಪ್ರಯೋಜನವೂ ಇಲ್ಲ. ಅವನು ಇಂದ್ರಿಯಾತೀತನಾದ್ದರಿಂದ ಅವನನ್ನು ನಾವು ಇಂದ್ರಿಯಗಳ ಮೂಲಕ ಎಂದಿಗೂ ಕಾಣಲಾರೆವು. ನಾವು ಇಂದ್ರಿಯಗಳ ಆಕರ್ಷಣೆಯಿಂದ ಮುಕ್ತರಾಗುವುದು ಸಾಧ್ಯವಾದರೆ ಅವನನ್ನು ಮುಟ್ಟುವುದು ಸಾಧ್ಯ. ನಮ್ಮ ಹೃದಯಗಳಲ್ಲಿ ದಿವ್ಯ ಗಾನಲಹರಿ ಹರಿಯುತ್ತಿದೆ ನಮ್ಮ ಇಂದ್ರಿಯಗಳ ಮೂಲಕ ನಾವು ಕೇಳುವ ನಮ್ಮ ಅನುಭವಕ್ಕೆ ಬರುವ ಎಲ್ಲರಂತಿರುವ ಮತ್ತು ಉತ್ತಮೋತ್ತಮವಾಗಿರುವ ಆ ಸೂಕ್ಷ್ಮ ಸಂಗೀತವನ್ನು ನಮ್ಮ ಇಂದ್ರಿಯಗಳ ಗಲಭೆ ಮುಳುಗಿಸಿ ಬಿಡುತ್ತದೆ.



ಆತ್ಮ ವಿಚಾರಧಾರೆ

ಲೇ ಮಡಿವಾಳರ ಶಂಭುಲಿಂಗಯ್ಯ ಬೆಂಗೇರಿ

ಶ್ರದ್ಧಾ ಶಾಸ್ತ್ರ ಮತ್ತು ಗುರು ಉಪದೇಶಿಸುವ ವೇದಾಂತ ವಾಕ್ಯವು ಸತ್ಯವೆಂದು ಮನಸ್ಸಿನಲ್ಲಿ ನಿರ್ಧರಿಸುದು ಶ್ರದ್ಧೆಯೆಂದು ಹೇಳಲ್ಪಡುವದು ಇಂಥ ದೃಡ ವಿಶ್ವಾಸವಿಲ್ಲದೆ ಆಚಾರ್ಯರ ಉಪದೇಶವನ್ನು ಅನುಷ್ಠಿಸಲು ಸಾಧ್ಯವಿಲ್ಲ ಈ ಮಾರ್ಗದಲ್ಲಿ ಶ್ರದ್ಧೆ ಇಲ್ಲದ ಪುರುಷನು ನನನ್ನು ಹೊಂದದೆ ಜನನ ಮರಣರೂಪ ಸಂಸಾರದಲ್ಲಿ ತಿರುಗುತ್ತಾನೆಂದು. ಭಗವಂತನೂ ಗೀತೆಯಲ್ಲಿ ಹೇಳಿರುವನು

ಅಶ್ರದ್ಧಾದಾನಾಃ ಪುರುಷಾ ಧರ್ಮ ಸೌಸ್ಯ ಪರಂತಪ

ಅಪ್ರಾಪ್ಯ ಮಾಂನಿವರ್ತಂತೇ ಮೃತ್ಯು ಸಂಸಾರ ವರ್ತ್ಮನಿ ||

ಶ್ರದ್ಧೆಯು ಸಾದನ ಸಂಪತ್ತಿನಕರೂಪ ವರ್ಷಕ್ಕೆ ಬರುವ ಫಲಸದೃಶವಾಗಿದೆ. ವೃಕ್ಷಕ್ಕೆ ಫಲವಿಲ್ಲದಿದ್ದರೆ ಅದು ಹೇಗೆ ನಿಷ್ಪ್ರಯೋಜಕವಾಗುತದೆಯೋ ಹಾಗೆ ಸಮಾಧಿ ಶಟ್ ಸಂಪತ್ತಿನಲ್ಲಿ ಫಲರೂಪವಾದ ಶ್ರದ್ಧೆ ಇಲ್ಲದಿದ್ದರೆ ಉಳಿದೆಲ್ಲವುಗಳು ನಿಷ್ಪ್ರಯೋಜಕವಾಗುತ್ತವೆ.

ಸಮಾಧಾನ :— ಮನಸ್ಸನ್ನು ವಿಶೇಷದಿಂದ ರಹಿತಪಡಿಸುವದು ಚಂಚಲವು ಅಸ್ಥಿರವೂ ಆದ ಮನಸ್ಸು ಯಾವ ಯಾವ ವಿಷಯದಿಂದ ಹೊರಕ್ಕೆ ಹೋಗುವದೊ ಆಯಾ ವಿಷಯದಿಂದ ಮನಸ್ಸನ್ನು ನಿಗ್ರಹಿಸಿ ಆತ್ಮನಲ್ಲಿಯೇ ಸ್ಥಿರಪಡಿಸುವದು ಸಮಾದಾನವೆಂದು ಹೇಳುತ್ತಾರೆ. ಆದರೆ ಮನಸ್ಸು ಬಯಸಿದ ವಿಷಯುಗಳನ್ನು ಕೊಟ್ಟಲ್ಲಿ ಆಗುವ ಸಮಾಧಾನವು ಸಮಾಧಾನವಲ್ಲ ಮನಸ್ಸು ತಾನು ಬಯಸಿದ ವಸ್ತುಗಳ ಪ್ರಾಪ್ತಿಯಿಂದ ಕ್ಷಣ ಸಮಾಧಾನ ಹೊಂದಿದರೂ ಅದು ಆತ್ಮ ವಿಚಾರದಲ್ಲಿ ಸಹಕಾರಿಯಾಗದು. ಯಾಕೆಂದರೆ ವಿಷಗಳ ಪ್ರಾಪ್ತಿಯಿಂದಾದ ಸಮಾದಾನವು ಅಧಿಕ ಕೋಪಕ್ಕೆ ಕಾರಣವಾಗುತ್ತದೆ.

ಉಪರಾಮಃ— ತ್ಯಾಗ ಮಾಡಿದ ವಸ್ತುಗಳನ್ನು ಪುನಃ ಇಚ್ಛಿಸದಿರುವದೇ ಉಪರಾಮ ಇದಕ್ಕೆ ಉಪರತಿ ಎಂದೂ ಹೇಳುವದುಂಟು ಇದು ಪುರುಷನನ್ನು ಭೋಗದಲ್ಲಿ ಆದೀನತ್ವರೂಪ ವೈರಾಗ್ಯಕ್ಕೆ ಫಲವಾಗಿರುತ್ತದೆ

ತಿತಿಕ್ಷಾಃ- ದ್ವಂದ್ವ ಧರ್ಮಗಳನ್ನು ಸಹಿಸುವದು ತಿತಿಕ್ಷೆ ಎನಿಸುವದು. ಹಸಿವೆ ತೃಷೆ ನೆಳಲು ಬಿಸಿಲು ಸುಖ ದುಃಖ ಇವೇ

ಮೊದಲಾದವುಗಳು ದ್ವಂದ್ವವೆಂದು ಹೇಳಿ ಕೊಳ್ಳಲ್ಪಡುತ್ತೀವೆ. ಇವುಗಳ ವೈಶಿಷ್ಟ್ಯವೇ ನಂದರೆ ಒಂದು ಇದ್ದರೆ ಇನ್ನೊಂದು ಅಪೇಕ್ಷೆ ಇಲ್ಲದಿದ್ದರೂ ಅದು ತಾನಾಗಿಯೇ ಬರುತ್ತದೆ. ನಗುವದು ಮತ್ತು ಅಳುವದು ಬೇಡವೆಂದರೆ ಆಗದು. ಯಾಕೆಂದರೆ ದ್ವಂದ್ವವು ತನ್ನ ನಿಯಮಕ್ಕನುಸಾರವಾಗಿ ನಗುವದರ ಹಿಂದೆ ಅಳುವದು ಇದ್ದೇ ಇರುತ್ತದೆ ಅದು ಬೇಡವೆಂದರೆ ಬಿಡುವದಿಲ್ಲ ಅದ ಅಳುವದು. ಬೇಡವೆಂಬುವರು ನಗುವದು ತ್ಯಜಿಸಬೇಕಾಗುತ್ತದೆ. ಅರ್ಥಾತ್ ಎರಡ ರಲ್ಲಿಯೂ ಉದಾಸೀನದಿಂದಿರುವದೇ ಅವುಗಳ ತ್ಯಾಗವಾಗಿದೆ. ಹೀಗೆ ದ್ವಂದ್ವ ಧರ್ಮಗಳನ್ನು ಉದಾಸೀನವಾಗಿ ಯಾವಾಗಲೂ ಆತ್ಮ ಚಿಂತನದಲ್ಲಿ ಆತ್ಮ ವಿಚಾರದಲ್ಲಿ ತೊಡಗುವದು ತೀತಿಕ್ಷೆ ಎಂದು ಹೇಳಿಸಿಕೊಳ್ಳಲ್ಪಡುತ್ತದೆ. ತೀತಿಕ್ಷೆ ಇಲ್ಲದ ಪುರುಷನು ದ್ವಂದ್ವ ಧರ್ಮರೂಪ ಬಿರುಗಾಳಿಗೆ ಸಿಲುಕಿ ಆತ್ಮ ವಿಚಾರ ರೂಪ ಮಾರ್ಗದಿಂದ ದೂರಾಗುತ್ತಾನೆ ಕಾರಣ ಆತ್ಮಜ್ಞಾನವನ್ನು ಇಚ್ಛಿಸುವರು ತಿತಿಕ್ಷೆಯನ್ನು ಅವಶ್ಯ ಸಾಧ್ಯಮಾಡಿಕೊಳಬೇಕೆಂಬುವದೇ ಶಾಸ್ತ್ರದ ಅಭಿಪ್ರಾಯ. ಈ ರೀತಿ ಅಧಿಕಾರ ಸಮ್ಬಂಧ ವಿಷಯ ಪ್ರಯೋಜನೆಗಳನ್ನು ತಿಳಿದು ವಿವೇಕ ವೈರಾಗ್ಯ ಸಮಾದಿ ಷಟ್ ಸಂಪತ್ತಿಯಿಂದ ಕೂಡಿ ಕೊಂಡು ಕೊನೆಯದಾಗಿ ಮೋಕ್ಷಾಪೇಕ್ಷೆಯಿಂದ ಕೂಡಿದವನೇ ಅಧಿಕಾರಿಯೆಂದ ಹೇಳಲ್ಪಡುವನು ಇಂಥ ಅಧಿಕಾರಿಯಾದ ಪುರುಷನು ಮಾತ್ರ ಗುರುಗಳಿಗೆ ಶರಣಾಗತನಾಗಿ ಅವನಿಂದ ತತ್ವ ನಿಜದ ಉಪದೇಶವನ್ನು ಪಡೆದು ಜನನ ಮರಣ ರಹಿತವಾದ ಸ್ಥಿತಿಯನ್ನು ಪಡೆಯಬಲ್ಲವನೇ ವಿನಃ ಅನ್ಯರಿಗೆ ಸಾಧ್ಯವಿಲ್ಲ ಎಂಬುದನ್ನು ಸಾಂಪ್ರದಾಯಕರಾದ ಎಲ್ಲ ಮಹಾತ್ಮರ ಮತವಾಗಿರುತ್ತದೆ. ಧನ ಯುವ್ವನ, ರೂಪ, ಮೊದಲಾದವುಗಳು ಜ್ಞಾನಕ್ಕೆ ಅಪೇಕ್ಷಿತವಿಲ್ಲ ಆದರೆ ಅಧಿಕಾರ ಮಾತ್ರದ ಅಪೇಕ್ಷೆ ಇದೆ ಇಂಥ ಅಧಿಕಾರಿಯನ್ನು ಪಡೆದು ಬ್ರಹ್ಮ ಜಿಜ್ಞಾಸೆಗೆ ಯೋಗ್ಯವಾದ ಮುಮುಕ್ಷುಗಳು ಅತವಿರಳವಾಗಿರುವದರಿಂದಲೇ ಜ್ಞಾನಿಗಳು ವಿರಳವಾಗಿರುತ್ತಾರೆ ಇದನ್ನುದ್ದೇಶಿಸಿಯೇ ಗೀತೆಯಲ್ಲಿ ಶ್ರೀದೇವನು ಈ ರಿತಿಯಾಗಿ ಹೇಳಿದ್ದಾನೆ.

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ। ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ವತಃ॥

ಶಾಸ್ತ್ರಜ್ಞಾನ ಶಾಸ್ತ್ರೋಕ್ತ ಕರ್ಮಾನುಷ್ಠಾನ ಇವುಗಳುಳ್ಳ ಸಹಸ್ರ ಜನರಲ್ಲಿ ಯಾವನೋ ಒಬ್ಬನು ಅನೇಕ ಜನ್ಮಗಳ ಪುಣ್ಯ ಪರಿಪಾಕದಿಂದ ಜ್ಞಾನವನ್ನು ಪಡೆಯುವದಕ್ಕಾಗಿ ಪ್ರಯತ್ನ ಮಾಡುತ್ತಾನೆ. ಹಾಗೆ ಹೆಣಗಾಡುವದರಲ್ಲಿ ಯಾವನೋ ಒಬ್ಬನು ಮಾತ್ರ ನನ್ನನ್ನು ಇದ್ದಕ್ಕಿದ್ದ ಹಾಗೆ ತಿಳಿಯುತ್ತಾನೆ.

ತಾತ್ಪರ್ಯ — ಎಷ್ಟೋ ಅಧಿಕಾರಿ ಪುರುಷನೊಬ್ಬನು ಮಾತ್ರ ನನನ್ನು ಹೊಂದುತ್ತಾನೆಂದು ಹೇಳುತ್ತಾನೆ ಇಂಥ ಅಧಿಕಾರಿಯು ಗುರುಗಳಿಗೆ ಯಾವ ರೀತಿ ಎಂಬೆಲ್ಲ ವಿಚಾರ ನಂತರ ವಿಚಾರಿಸುವಾ.

[ಮುಂದೆ ವರೆಯುವದು.

ಬಾಳಿನ ಬೆಳಕು

ಶ್ರೀ ಗುರುವಿನ ಉಪದೇಶ

ಶ್ರೀಮನ್ನಿಜಗುಣ ಶಿವಯೋಗಿಗಳಿಂದ ಪ್ರಣೀತವಾದದ್ದು.

ಪದ॥ ಶ್ರೀ ಗುರು ವಚನೋಪದೇಶವನಾಲಿಸಿ। ದಾಗಳೆ ನರರಿಗೆ ಮುಕ್ತಿ ॥ಪ॥

ಅರ್ಥ:— ಶ್ರೀಗುರು ವಚನೋಪದೇಶವನು— ಷಡ್ಗುಣೈಶ್ವರ್ಯ ಸಂಪನ್ನನಾದ ಆಚಾರ್ಯನು ಅಪ್ಪಣೆ ಮಾಡತಕ್ಕ ಬೋಧೆಯನ್ನು. ಆಲಿಸಿದಾಗಳೆ — ಕೇಳಿದಾಗಲೇ ನರರಿಗೆ—ಮಾನವರಿಗೆ, ಮುಕ್ತಿ—ಮೋಕ್ಷವು ಆಹುದು—ಆಗುತ್ತದೆ. ।ಪಲ್ಲ॥

ಪದ॥ ದುರಿತ ಕರ್ಮವನೊಲ್ಲದಿರು ಪುಣ್ಯವನೆ ಮಾಡು। ಹರನಡಿವಿಡಿ ಶಾಂತರೊಡನಾಡು। ಕರುಣವಿರಲಿ ಜೀವರೊಳು ನೀತಿವಿದನಾಗು। ಪೊರೆ ಪೊರ್ದಿದರನೆಂದು ಬೆಸಸುವ ॥೧॥

ಅರ್ಥ:— ದುರಿತ ಕರ್ಮವನು— ಪಾಪದ ಕೆಲಸಗಳನ್ನೂ, ಒಲ್ಲದಿರ —ಮಾಡಬೇಡ, ಪುಣ್ಯವನೆಮಾಡು—ಪುಣ್ಯ (ಒಳ್ಳೆ) ಕಾರ್ಯಗಳನ್ನೇ ಮಾಡು, ಹರನ—ಶಿವನ, ಅಡಿವಿಡಿ—ಪಾದವನ್ನೂ ಹಿಡಿ, ಶಾಂತರೊಡನಾಡು—ರಾಗದ್ವೇಷ ರಹಿತರಾದ ಜ್ಞಾನಿಗಳ ಸಹವಾಸದಲ್ಲಿರು ಕರುಣವಿರಲಿ ಜೀವರೊಳು—ಕಷ್ಟಪಡತಕ್ಕ ಪ್ರಾಣಿಗಳಲ್ಲಿ ದಯಾಗುಣವಿರಲಿ, ನೀತಿವಿದನಾಗು—ಒಳ್ಳೆಯ ನಡತೆಯುಳ್ಳವನಾಗು, ಪೊರೆಪೊರ್ದಿದರನು—ನಿನ್ನನ್ನು ನಂಬಿದವರನ್ನು ಕಾಪಾಡು, ಎಂದು — ಎಂಬುದಾಗಿ. ಬೆಸಸುವ—ಅಪ್ಪಣೆ ಮಾಡುವ ॥೧॥

ಪದ॥ ನಿಂದಿಸಿ ನುಡಿಯದಿರಾರನು ಮನಸಿಗೆ। ಬಂದಂತೆ ನಡೆಯದಿರಿಹದಲ್ಲಿ। ಕುಂದುವಡೆಯದಿರು ಕಾಮಾದಿಗಳನು ಜಯಿಸೆಂದು ಕೈವಿಡಿದನುಗ್ರಹಿಸುವ ॥೨॥

ಅರ್ಥ:— ನಿಂದಿಸಿ ನುಡಿಯದಿರಾರನು—ಯಾರನ್ನೂ ದೂಷಿಸಿ ಮಾತನಾಡಬೇಡ' ಮನಸ್ಸಿಗೆ ಬಂದಂತೆ ನಡೆಯದಿರಿಹದಲ್ಲಿ—ನಿನ್ನ ಮನಸ್ಸಿಗೆ ಬಂದಂತೆ ಈ ಲೋಕದಲ್ಲಿ ಆಚರಿಸಬೇಡ, ಕುಂದುವಡೆಯದಿರು—ಮಾಡಬಾರದ ಕಾರ್ಯಗಳನ್ನು ಮಾಡಿ ಅಪಮಾನವನ್ನು ಹೊಂದಬೇಡ, ಕಾಮಾದಿ

ಗಳನು ಜಯಿಸೆಂದು—ಕಾಮ, ಕ್ರೋಧ ಮೊದಲಾದ ಅರಿಷಡ್ವರ್ಗವನ್ನು ವಿಚಾರ ವಿವೇಕಗಳಿಂದ ಗೆಲ್ಲು ಎಂಬುದಾಗಿ, ಕೈವಿಡಿದನು ಗ್ರಹಿಸುವ—ಕೃಪೆಯಿಂದ ಹಸ್ತವನ್ನು ಪಿಡಿದು ಆಶೀರ್ವದಿಸುವ ॥೨॥

ಪದ॥ ಭವಮಾಲೆಗಲಸು ಫುಸಿಯು ದಿರೆಡರು ಬಂದು। ಕವಿಯಲಂಜದಿರು ಸಂಪದದೊಳು। ತವೆಮುದವಳಿದಿರು ತತ್ವ ಸಂತತಿಯನು। ವಿವರಿಸಿ ನೋಡೆಂದು ತಿಳುಪುವ॥

ಅರ್ಥ:— ಭವಮಾತಿಗಲಸು-ಹುಟ್ಟು ಸಾವುಗಳಿಗೆ ಬೇಸರಗೊಳ್ಳು, ಫುಸಿಯು ದಿರು—ಸುಳ್ಳನ್ನಾಡಬೇಡ, ಎಡರು ಬಂದು ಕವಿಯಲಂಜದಿರು—ಕಷ್ಟವು ಬಂದರೆ ಅವಕ್ಕೆ ನೀನು ಹೆದರಬೇಡ, ಸಂಪದದೊಳು ತವೆಮುದವಳಿದಿರು—ಐಶ್ವರ್ಯ ಒಂದ ಕಾಲದಲ್ಲಿ ಚನ್ನಾಗಿ ಗರ್ವವಿಲ್ಲದವನಾಗು, ತತ್ವ ಸಂತತಿಯನು—ತತ್ವಗಳ ಸಮೂಹ ವನ್ನು, ವಿವರಿಸಿ—ವಿಚಾರಮಾಡಿ, ನೋಡೆಂದು—ತಿಳಿಯೆಂದು, ತಿಳಿಪುವ— ತಿಳಿಸುವ ॥೩॥

॥ ಪದ ॥ ಬಳಸದಿರ ದ್ವೈತವನು ಬಾಹ್ಯದಲಿ ನೀ। ನ್ನೊಳಗೇಕೋ ಭಾವನೆಯೊಡಗೂಡು। ತಿಳಿದು ಸಮ ಯು ನಿಷ್ಠೆಗಲಿ ವೇದ ವಿಧಿಭಕ್ತಿ। ಗಳ ನಗಲದಿರೆಂದು ಸುರುವ॥

ಅರ್ಥ:— ಬಳಸದಿರು ದ್ವೈತವನು ಬಾಹ್ಯದಲಿ—ಎಲ್ಲರೂ ಒಂದೇ ಎಂಬು ದಾಗಿ ಹೊರಗಡೆಯಲ್ಲಿ (ಪ್ರಪಂಚದಲ್ಲಿ) ವ್ಯವಹಾರವನ್ನೂ ಮಾಡಬೇಡ, ನಿನ್ನೊಳ ಗೇಕೋ ಭಾವನೆಯಿಂದೊಡಗೂಡು— ನೀನಾವಿಯಾಗಿ ಪರಬ್ರಹ್ಮವೆಂಬ ತಿಳವಳಿ ಕೆಯು ನಿನ್ನೊಳಗಿರಲಿ, ತಿಳಿದು ಸಮಯು ನಿಷ್ಠೆಗಲಿ—ವಿಚಾರಮಾಡಿ ಯೋಗ್ಯ ಕಾರ್ಯಗಳಲ್ಲಿ ಸಮಯಾನುಸಾರ ನಿಷ್ಠೆ ಯುಳ್ಳವನಾಗು, ವೇದ ವಿಧಿ ಭಕ್ತಿಗಳನ ಗಲದಿರು-ವೇದದಲ್ಲಿ ಹೇಳಿರುವ ನಿಯಮ ಗಳನ್ನೂ ಮತ್ತು ಶಿವಭಕ್ತಿಯನ್ನೂ ಬಿಡ ಬೇಡ, ಎಂದು-ಎಂಬುದಾಗಿ, ಉಸುರುವ- ಹೇಳುವ ॥೪॥

ಪದ॥ ಆರು ನಾನೆಂದು ವಿಚಾರಿಸು ವಿಷಮ ಸಂ। ಸಾರವಿದನು ಕನಸೆಂದರಿ। ಮಾರಮರ್ದನ ಶಂಭುಲಿಂಗವನೊಲಿಸಿ ಗಂ। ಭೀರಸುಖದೊಳಿರೆಂದರು ಪುವ॥

ಅರ್ಥ:— ಆರು ನಾನೆಂದು ವಿಚಾರಿ ಸು-ನಾನು ಯಾರು ಎಂಬುದನ್ನು ವಿಚಾರ ಮಾಡು, ವಿಷಮ ಸಂಸಾರವಿದನು, ಕನ ಸೆಂದರಿ—ದುಃಖ ಸ್ವರೂಪವಾದ ಜನನ ಮರಣಾತ್ಮಕ ರೂಪ ಸಂಸಾರವನ್ನೂ ಸ್ವಪ್ನದಂತೆ ಸುಳ್ಳು ಎಂಬುದಾಗಿ ತಿಳಿ, ಮಾರಮರ್ಧನ ಶಂಭುಲಿಂಗವನೊಲಿಸಿ- ಮನ್ಮಥನನ್ನೂ ಸಂಹಾರಮಾಡಿದ ಶಿವ ನನ್ನೂ ಒಲಿಸಿ, ಗಂಭೀರ ಸುಖದೊಳಿ ರೆಂದರು ಪುವ-ಪೂರ್ಣವಾದ ಆನಂದದ ಲ್ಲಿರು ಎಂಬುದಾಗಿ ಬೋಧಿಸುವ ॥೫॥

ಜೈನ ಧರ್ಮ

(ಹೋದ ತಿಂಗಳು ಹುಬ್ಬಳ್ಳಿಯಲ್ಲಿ ಸೇರಿದ ಅಖಿಲ ಕರ್ನಾಟಕ ದ್ವಿತೀಯ) ಜೈನ ಸಮ್ಮೇಲನದಲ್ಲಿ ಶ್ರೀ ಎಮ್. ಸಿ. ಅನಂತರಾಜಯ್ಯನವರ ಅಧ್ಯಕ್ಷೀಯ ಭಾಷಣದ ಸಾರಸಂಗ್ರಹ.

ಭಾರತೀಯ ಸಂಸ್ಕೃತಿಯಲ್ಲಿ ಜೈನ ಧರ್ಮಕ್ಕೂ ಸಂಸ್ಕೃತಿಗೂ ಬಹು ಶ್ರೇಷ್ಠವಾದ ಸ್ಥಾನಮಾನಗಳವೆ. ತೀರ ಪ್ರಾಚೀನ ಕಾಲದಿಂದಲೂ ಜೈನ ಜನಾಂಗವು ಭಾರತವನ್ನ ಎಲ್ಲ ದೃಷ್ಟಿಯಿಂದಲೂ ಉನ್ನತಗೊಳಿಸಲು ಹೆಣಗಿದ ಜನಾಂಗವಾಗಿದೆ. ತನ್ನ ಅಹಿಂಸಾವೃತ್ತಿ, ಸಹಜೀವನ, ಅಸಂಗ್ರಹವೃತ್ತಿ, ಅನೇಕಾನೇಕ ದೃಷ್ಟಿಗಳಿಂದ ಭಾವೈಕ್ಯವನ್ನು ಬೆಳೆಯಿಸಿ ರಾಷ್ಟ್ರೀಯ ಜೀವನವನ್ನು ರೂಪಿಸಲು ತನ್ನ ಪಾಲಿನ ಸೇವೆಯನ್ನು ಸಲ್ಲಿಸಿದೆ; ಸಲ್ಲಿಸುತ್ತಲೂ ಇದೆ. ಪ್ರಾಚೀನ ಕಾಲದಿಂದಲೂ ಜೈನ ಪರಂಪರೆಯ ಋಷಿ ಮುನಿಗಳೂ, ಆಚಾರ್ಯರೂ ಧಾರ್ಮಿಕ ದೃಷ್ಟಿಯನ್ನ ಭಾರತದ ಜನತೆಯಲ್ಲಿ ನೆಲೆಗೊಳಿಸಿ, ರಾಷ್ಟ್ರದ ಅಧ್ಯಾತ್ಮಿಕ ಉನ್ನತಿ, ಸಾಮಾಜಿಕ ಏಳಿಗೆ, ರಾಷ್ಟ್ರೀಯ ಐಕ್ಯಕ್ಕೆ ಅಪೂರ್ವವಾದ ಸೇವೆಯನ್ನು ಸಲ್ಲಿಸಿದ್ದಾರೆಂಬುದನ್ನು ನೆನೆದಲ್ಲಿ ಯಾವ ಹೃದಯವು ಅಭಿಮಾನದಿಂದ ಅರಳಲಿಕ್ಕಿಲ್ಲ?

ಕ್ರಿಸ್ತಪೂರ್ವದಲ್ಲಿಯೇ ಸಮ್ರಾಟ ಬಿಂಬಸಾರ, ಖಾರವೆಲ, ಚಂದ್ರಗುಪ್ತರಂಥ ಮಹಾತ್ಮರೂ ವೀರ ನರಪುಂಗವರೂ ಆದ ಜೈನ ಚಕ್ರವರ್ತಿಗಳು ಭಾರತದಲ್ಲಿ ಆಳಿ, ಭಾರತದ ಕೀರ್ತಿಧ್ವಜವನ್ನು ಜಗತ್ತಿನಲ್ಲೆಲ್ಲ ಮೆರೆಯಿಸಿದ್ದಾರೆ. ಈ ಇತಿಹಾಸ ಕಾಲವನ್ನು ದಾಟಿ ಹಿಂದಕ್ಕೆ ಹೋದರೆ ಆದಿ ತೀರ್ಥಂಕರರಾದ ಶ್ರೀ ವೃಷಭದೇವನ ಹಿರಿಯ ಕುಮಾರನಾದ ಭರತ ಚಕ್ರವರ್ತಿಯ ಆಳಿಕೆಯಿಂದಲೇ ಈ ನಮ್ಮ ಪವಿತ್ರ ಮಾತೃಭೂಮಿಗೆ "ಭರತಖಂಡ" ಎಂಬ ಹೆಸರು ಆಯಿತೆಂದು ಹೇಳಿದರೆ ಹೊಸ ಮಾತನ್ನೇನೂ ನಾವು ಹೇಳಿದಂತೆ ಆಗುವದಿಲ್ಲ.

ಜೈನ ಪರಂಪರೆಯ ತೀರ್ಥಂಕರರೆಲ್ಲರೂ ಉತ್ತರ ಭಾರತದಲ್ಲಿಯೇ ಜನಿಸಿದ್ದಾರೆ. ಆದರೆ ಜೈನ ಶ್ರುತಜ್ಞಾನವನ್ನು ರಕ್ಷಿಸಿ, ಬೆಳೆಯಿಸಿದ ಶ್ರೇಯಸ್ಸು ದಕ್ಷಿಣ ಭಾರತಕ್ಕೆ ಸಲ್ಲುತ್ತದೆ. ಅದರಲ್ಲೂ ಕರ್ನಾಟಕವು ಪ್ರಾಚೀನ ಕಾಲದಿಂದಲೂ ಜೈನ ಧರ್ಮಕ್ಕೆ ತವರುಮನೆಯೆನಿಸಿದೆ. ಅನೇಕ ತೀರ್ಥಂಕರರ ವಿಹಾರ ಭೂಮಿಯೆನಿಸಿ ಈ ನಾಡು ಪವಿತ್ರವಾಗಿದೆ: ಸ್ವಾಮಿ ಸಮಂತಭದ್ರ ಸಿದ್ಧಾಂತ ಚಕ್ರವರ್ತಿ ನೇಮಿಚಂದ್ರಾ

ಚಾರ್ಯರ, ಭಗವಾನ್ ಕುಂದಕುಂದಾಚಾರ್ಯರಂಥ ಆಚಾರ್ಯ ಪುಂಗವರು ಈ ನಾಡಿನಲ್ಲಿ ಜನಿಸಿ, ಪುನೀತಗೊಳಿಸಿದ್ದಾರೆ. ಲೋಕವಿಖ್ಯಾತರೂ, ತ್ಯಾಗ—ತಪೋಮೂರ್ತಿಗಳೂ ಆದ ಭರತ ಬಾಹುಬಲಿಯ ಭವ್ಯವೂ ದಿವ್ಯವೂ ಆದ ವಿಗ್ರಹಗಳು ಕರ್ನಾಟಕದಲ್ಲಿಯೇ ನೆಲೆಸಿವೆ ಆದರಿಂದ ಉತ್ತರದ ಭಾರತೀಯರಿಗೆಲ್ಲ ಕರ್ನಾಟಕವು ಯಾತ್ರಾ ಭೂಮಿಯಾಗಿದೆ. ಕನ್ನಡ ನಾಡಿನ ಹೊಯ್ಸಳ, ರಾಷ್ಟ್ರಕೂಟ, ಗಂಗ, ಕಲಚೂರ್ಯ ಮುನ್ನೆತನಗಳ ಹಲವು ಜನ ಅರಸರು ಜೈನರಾಗಿದ್ದು ಉಳಿದ ಧರ್ಮಗಳನ್ನು ಸಹ ಬಹು ಆದರದಿಂದ ಕಂಡು ವಿಶಾಲ ಹೃದಯಿಗಳಾಗಿದ್ದರು. ಹೀಗೆ ಜೈನ ಧರ್ಮವು ಪ್ರಾಚೀನ ಕಾಲದಿಂದಲೂ ಕನ್ನಡ ಸಾಹಿತ್ಯ, ಕಲೆ, ಧರ್ಮ, ಸಂಸ್ಕೃತಿಗಳನ್ನು ಪೋಷಿಸಿ, ಪ್ರವರ್ಧಮಾನಗೊಳಿಸಿ, ನಾಡಿನ ಜನತೆಯ ಹೃದಯುವನ್ನು ಸೂರೆಗೊಳಿಸಿದೆ.

ಕನ್ನಡ ಸಾಹಿತ್ಯದ ಇತಿಹಾಸದ ಕಡೆಗೆ ದೃಷ್ಟಿಯನ್ನು ಬೀರಿದರೆ ಯಾವ ಜೈನ ಧರ್ಮಾನುಯಾಯಿಯ ಹೃದಯವು ಹೆಮ್ಮೆಯಿಂದ ಉಬ್ಬುಲಿಕ್ಕಿಲ್ಲ? ಕನ್ನಡ ಸಾಹಿತ್ಯದ ಉಗಮವು ಜೈನ ಕವಿಗಳಿಂದಲೇ ಆಯಿತೆಂದರೆ ಯಾವ ಅತಿಶಯೋಕ್ತಿಯೂ ಅಲ್ಲ. ಕನ್ನಡ ಕವಿಚಕ್ರವರ್ತಿಗಳಾದ ಪಂಪ, ರನ್ನ, ಪೊನ್ನರಂಥ ಉದ್ದಾಮ ಕವಿಗಳ ಕೀರ್ತಿಯು ಇಂದಿಗೂ ನಮ್ಮ ಕನ್ನಡ ನಾಡು, ನುಡಿಗಳನ್ನು ಬೆಳಗುತ್ತಲಿದೆ.

"ಕನ್ನಡಕ್ಕೊಡೆಯನೋರ್ವನೆ ಪಂಪನಾವಗಂ" ಎಂದು ಗುರು ಹಂಪದೇವನನ್ನು ಕುರಿತು ಹಿಂದಿನ ಕವಿಗಳು ಆಡಿದ ಮಾತನ್ನು ನಾವಿಲ್ಲಿ ನೆನೆಯದೆ ಮುಂದುವರಿಯುವಂತಿಲ್ಲ. ವಿಜಯಪುರದ ನಾಗಚಂದ್ರ, ಮೂಡಬಿದರೆಯ ರತ್ನಾಕರನಂಗಳನ್ನಂತೂ ಕನ್ನಡ ಸಾಹಿತ್ಯ ರಸಿಕರು ಪ್ರಾತಃಕಾಲದಲ್ಲಿ ಸ್ಮರಿಸದೆ ಇರವದಿಲ್ಲ. ರತ್ನಾಕರವರ್ಣಿಯ ಕೀರ್ತಿಯಂತೂ ಉತ್ತರ ಭಾರತೀಯರನ್ನು ಸಹ ಬೆಳಗ್ಗಗೊಳಿಸಿದೆ. ಅವನ ರಸಋಷಿತ್ವವು "ಭರತೇಶವೈಭವ"ದಲ್ಲಿ ಭಾರತೀಯ ಆಧ್ಯಾತ್ಮದ ಸಾರವನ್ನೇ ಕಂಡರಿಸಿದೆ.

ಭಾರತದ ಹಿಂದಿನ ಇತಿಹಾಸ, ಸಂಸ್ಕೃತಿ ಸಾಹಿತ್ಯಗಳನ್ನು ಅವಲೋಕಿಸಿದರೆ ನಮ್ಮ ಹಿರಿಯರು ಅದಕ್ಕೆ ಸಲ್ಲಿಸದ ಕಾಣಿಕೆಯೇ ಇಲ್ಲವೆಂದು ಹೇಳಬಹುದು. ಇಂಥ ಹಿರಿಯ ತ್ಯಾಗಮಯ—ತ್ಯಾಗಮಯ—ಜೈನ ಪರಂಪರೆಯಲ್ಲಿ ನಾವು ಜನಿಸಿದ್ದೇವೆ. ನಮ್ಮ ಧರ್ಮದಲ್ಲಿ ಜನಿಸಿದ ತೀರ್ಥಂಕರರು, ಆಚಾರ್ಯರು, ರಾಜರು, ಶಿಲ್ಪಿಗಳು ಕವಿಗಳು, ರಾಜಕಾರಣ ಧುರೀಣರು, ಮಂತ್ರಿಗಳು, ಸೇನಾಪತಿಗಳು ವಿವಿಧ ರಂಗಗಳಲ್ಲಿ ಸೇವೆಯನ್ನು ಸಲ್ಲಿಸಿ, ನಮ್ಮ ಜೈನ ಜನಾಂಗಕ್ಕೆ ಕೀರ್ತಿಯನ್ನು ಸಂಪಾದಿಸಿ ಕೊಟ್ಟಿದ್ದಾರೆ.



ಮಹಾಪುರುಷರ ಅನುಗ್ರಹ

★ ★ ★

ದೇವರು ಪ್ರೇಮಸ್ವರೂಪನು ಶಾಂತಿಸ್ವರೂಪನು ಸರ್ವಾಂತರ್ಯಾಮಿಯು ಸರ್ವಶಕ್ತನು ಜ್ಞಾನಮಯನು ಹಾಗು ಆನಂದಮಯನು ಆಗಿರುವನು ತನ್ನ ದರ್ಶನವನ್ನು ಪಡೆದು ಮುಕ್ತನಾಗುವದು ಮಾನವನ ಆದ್ಯಕರ್ತವ್ಯವಾಗಿದೆ. ಆದರೆ ಅಂತಹ ಭಗವತ್ ಪ್ರೇಮವು ದೊರೆಯಬೇಕಾದರೆ, ಮಹಾಪುರುಷರ ಅನುಗ್ರಹದಿಂದಲೇ ಸಾಧ್ಯವೆಂಬುದು ಶತಃಸಿದ್ಧ ಸಜ್ಜನರಸಂಗತಿ ಮಾಡಿ ಜನ್ಮದ ಸಾರ್ಥಕ ಮಾಡಿಕೊಳ್ಳು ಎಂದು ಕಬೀರದಾಸರು ಕೂಡಾ ಹೇಳಿದ್ದಾರೆ. ಮಹಾನ್ ಪುರುಷರ ಸಂಗ-ಸಹವಾಸವು ಪುಣ್ಯ ವಿಶೇಷ ಫಲದಿಂದ ದೊರೆಯುವದಾಗಿದೆ ಜೀವನದಲ್ಲಿ ಒಮ್ಮೆ ನಿಜವಾದ ಮಹಾಪುರುಷನ ಸಹವಾಸ ಲಭಿಸಿದ್ದೇ ಆದರೆ ಅದರ ಪರಿಣಾಮವು ಎಂದಿಗೂ ನಿಷ್ಫಲವಾಗುವದಿಲ್ಲ. ಈ ವಿಚಾರ ಕುರಿತು ಹಿಂದೆ ಜರುಗಿದ ಒಂದು ಘಟನೆಯನ್ನು ಇಲ್ಲಿ ವಿವರಿಸಲಾಗಿದೆ.

— ಸಂ.

ಮುದ್ದು ಚಿಣ್ಣರೇ

ನಿಮ್ಮ ಹಾಗೆ ರೋಣ ಗ್ರಾಮದಲ್ಲಿ ವೀರನಗೌಡನೆಂಬ ಒಬ್ಬ ವಿದ್ಯಾರ್ಥಿಯು ಇದ್ದನು. ಆತನು ಚಿಕ್ಕಂದಿನಲ್ಲಿಯೇ ಸಾಧು—ಸಜ್ಜನರ ಸಹವಾಸದಲ್ಲಿರಲು ಇಷ್ಟಪಡುತ್ತಿದ್ದನು. ದೀನ—ದಲಿತರ ಕಲ್ಯಾಣ ಸದಾ ಬಯಸುತ್ತಿದ್ದನು. ತನ್ನಲ್ಲಿದ್ದ ಪಾಟಿ—ಪುಸ್ತಕ ಹಾಗು ಇನ್ನಿತರ ತನ್ನಲ್ಲಿದ್ದ ಯಾವದೇ ವಸ್ತು—ಒಡವೆಗಳನ್ನು ಕೇಳಿದವರಿಗೆ ಧಾರಾಳವಾಗಿ ಕೊಟ್ಟುಬಿಡುತ್ತಿದ್ದನು. ಎಂದೂ ಇಲ್ಲವೆನ್ನುವ ಸೊಲ್ಲು ಅವನದಾಗಿರಲಿಲ್ಲ ಹೀಗೆ ವೀರನಗೌಡನು ಅನೇಕ ಸದ್ಗುಣ, ಸದಾಚಾರಗಳಿಂದ ಓರಿಗೆಯವರಿಗೂ ಹಾಗೂ ಊರ ಜನತೆಗೂ ಅತ್ಯಂತ ಪ್ರೇಮಮೂರ್ತಿಯಾಗಿದ್ದನು.

ಒಂದು ಸಲ ಆ ರೋಣ ಗ್ರಾಮಕ್ಕೆ ಶ್ರೀ ನಾಗಲಿಂಗ ಶಿವಯೋಗಿ ನವಲಗುಂದ ಅವರು ಆಗಮಿಸಿದ್ದರು. ಅವರು ಆಗಮಿಸಿದ್ದರು. ಅವತಾರಿ ಪುರುಷರಾದ ಈ ಶಿವ

ಯೋಗಿಗಳು ಅಂಗಡಿಗಳಲ್ಲಿಯ ಮಿಠಾಯಿ ಹಣ್ಣು—ಹಂಪಲಗಳನ್ನು ತೆಗೆದುಕೊಂಡು ಸೂರೆಮಾಡುತ್ತಿದ್ದರು. ಹುಡಗರು ತೆಗೆದುಕೊಳ್ಳಲು ಹೋದವರೆ ಕಲ್ಲು ಎಸೆಯುತ್ತಿದ್ದರು. ಮತ್ತೊಮ್ಮೆ ತಾವೇ ಕರೆದುಕೊಡುತ್ತಿದ್ದರು. ಹೀಗಾಗಿ ಅವರ ಹಿಂದು—ಮುಂದು ಹುಡುಗರ ತಂಡವೇ ಇರುತ್ತಿತ್ತು. ಶಿವಯೋಗಿಗಳು ಒಮ್ಮೆ ಯಾರೂ ನನ್ನ ಸಂಗಡ ಬರಬೇಡಿರೆಂದು ಬೆದರಿಸಿದರು. ಆದರೂ ಕೇಳದೆ ಎಷ್ಟೋ ಹುಡುಗರು ಬೆನ್ನುಹತ್ತಿದವು.

ಆಗ ನಾಗಲಿಂಗ ಶಿವಯೋಗಿಗಳು ಬಡಿಗರ ಮನೆಯ ಹತ್ತಿರ ಹೋಗಿ ಅಲ್ಲಿ ಇಟ್ಟಿದ್ದ ಬಾಚಿಯೊಂದನ್ನು ತೆಗೆದುಕೊಂಡು ಹೊಡೆಯಲು ಬೆನ್ನಟ್ಟಿದರು ಎಲ್ಲ ಹುಡುಗರು ಅಲ್ಲಿಂದ ಪಲಾಯನ ಮಾಡಿದರು. ಆದರೆ ವೀರನಗೌಡನು ಅಲ್ಲಿಯೇ ತಲೆಬಾಗಿಸಿ ನಿಂತನು. ಶಿವಯೋಗಿಗಳು ನಿನ್ನನ್ನು ತುಂಡರಿಸುವೆನು ನೋಡು ಎಂದು ಕೈಯಲ್ಲಿದ್ದ ಬಾಚಿಯನ್ನು ಮೇಲೆ ಎತ್ತಿ ಹೊಡೆಯಲು ಹೋದರು. ಆಗ ಆ ಬಾಲಕನಾದ ವೀರನಗೌಡನು ನನ್ನನ್ನು ನೀವೇನು ತುಂಡರಿಸುವಿರಿ! ನನ್ನ ನಶ್ವರವಾದ ಶರೀರವನ್ನು ಮಾತ್ರ ತುಂಡರಿಸಬಹುದೆಂದು ಅಚಲ ಗಿರಿಯಂತೆ ದಿಟ್ಟತದದಿಂದ ನಿಂತರು. ಶಿವಯೋಗಿಗಳು "ಜೊಳ್ಳು" ಎಲ್ಲ ಹಾರಿ ಹೋದವು ಗಟ್ಟಿ ಬೀಜ ಮಾತ್ರ ಉಳಿಯಿತು. ಬಾ! ವೀರಾ? ನಿಜವಾಗಿ ನೀ ಧೀರ! ನೀನು ಜಗತ್ತಿನ ಜೀವಿಗಳ ಕಲ್ಯಾಣ ಮಾಡಿ, ಕೀರ್ತಿಶಾಲಿಯಾಗೆಂದು ಎತ್ತಿಕೊಂಡು ಮೈದಡವಿ ಮುದ್ದಾಡಿ ಹಣ್ಣು ಕೊಟ್ಟು ಬೋಳೈಸಿ ಆಶೀರ್ವದಿಸಿದರು.

ಅಂತಹ ಮಹಾಪುರುಷರ ಅನುಗ್ರಹ ಹಾಗು ದೈವೀಕೃಪೆಯಿಂದ ಬಾಲಕ ವೀರನಗೌಡನೇ ಮುಂದೆ ಗದುಗಿನ ಶ್ರೀ ಜ. ಶಿವಾನಂದ ಮಹಾಶಿವಯೋಗಿಗಳೆಂದು ಪ್ರಖ್ಯಾತಿಯನ್ನು ಪಡೆದರು. ಮತ್ತು ಅನೇಕ ಜೀವಿಗಳನ್ನು ಉದ್ಧಾರ ಮಾಡಿದರು.

ಮಾನವ ಜೀವನದಲ್ಲಿ ಇಂತಹ ಸಂದರ್ಭಗಳು ದೊರೆಯುವದು ವಿರಳ, ಮಹಾಪುರುಷರ ಸಹವಾಸ ಭಾಗ್ಯವು ನಮಗೆ ಲಭಿಸಬೇಕಾದರೆ ಭಗವಂತನ ಸಾನಿಧ್ಯದಿಂದಲೇ ಎಂದು ಹೇಳಬಹುದು. ಒಂದು ಕ್ಷಣವಾದರೂ ಸಾಧು—ಸಂತರ ಸಂದರ್ಶನವಾದರೆ ಅವರ ಕರುಣಾಮಯವಾದ ಆಕರ್ಷಕನೋಟ, ತಪಸ್ಸಿನ ದಿವ್ಯತೇಜ ಅಮೃತರೂಪವಾದ ಅನುಭವ ವಾಣಿಗಳಿಂದ ನರರ ಪಾಪ ಪರಿಹಾರವಾಗಿ ಮತ್ತು ಅವರಿಂದ ಹೊರಹೊಮ್ಮಿದ ಆಧ್ಯಾತ್ಮಿಕ ತರಂಗಗಳು ಮಾನವರ ಮನ—ಬುದ್ಧಾದಿಗಳನ್ನು ಪರಿವರ್ತನೆ ಗೊಳಿಸುತ್ತವೆ. ವಾಲ್ಮಿಕಿ, ದ್ರುವ, ಪ್ರಲ್ಹಾದ ಮೊದಲಾದವರು ಧೈರ್ಯವನ್ನೂ ಅವಲಂಬಿಸಿ, ದೈವ ಸಾಕ್ಷಾತ್ಕಾರ ಮಾಡಿಕೊಂಡರು. ಆ ರೀತಿ

ಕುಮಾರ ವ್ಯಾಸ

ಕನ್ನಡ ಕುಲಕ್ಕೆ ಸಾಹಿತ್ಯದ ಅಪಾರ ಉಪಕಾರ

ಲೇಖಕರು:— ವೇದಮೂರ್ತಿ ಹರಿಶರ್ಮಾ ಧರ್ಮಾಧಿಕಾರಿ ಹುಬ್ಬಳ್ಳಿ.

ಅರಸುಗಳಿಗದುವೀರ ದ್ವಿಜರಿಗೆ ।
ಪರಮ ವೇದದ ಸಾರ ಯೋಗೀ ॥
ಶ್ವರರಿಗೆ ತತ್ವ ವಿಚಾರ ಮಂತ್ರಿ ಜನಕೆ
ಬುದ್ಧಿ ಗುಣ ।
ವಿರಹಿಗಳ ಶೃಂಗಾರ ವಿದ್ಯಾ ।
ಪರಿಣತರಲಂಕಾರ ಕಾವ್ಯಕ್ಕೆ ॥
ಗುರುವೆನಲು ರಚಿಸಿದ ಕುಮಾರ—
ವ್ಯಾಸ ಭಾರತವ ॥

(ಅರಸುಗಳಿಗದುವೀರ)

ಹೀಗೆ ಹೇಳಿದಂತೆ ಕುಮಾರ ವ್ಯಾಸನು ರಚಿಸಿದ ಬಿಷ್ಮವರ್ಗಳಲ್ಲಿಯೂ ನಾವು ಅಡಿಗಡಿಗೆ ನೋಡಿ ಆನಂದಿಸ ಬಹುದಾಗಿದೆ. ಮೊದಲನೆ, ಪರ್ವದಲ್ಲಿ ಪಾಂಡವಾದಿಗಳ ಹುಟ್ಟು, ಕುಮಾರಕಾಲದ ಬಗ್ಗೆ ಹೇಳಿ ಕೌರವ ಪಾಂಡವಾದಿಗಳು ಭೀಷ್ಮಾಚಾರ್ಯರ ಪಾಲನೆಯಲ್ಲಿ ದೊಡ್ಡವರಾಗುತ್ತಾರೆ.

ಮುಂದೆ ದ್ರೋಣಾಚಾರ್ಯರ ಗುರುತ್ವದಲ್ಲಿ ಧನುರ್ವೇದ ಮೊದಲ್ಗೊಂಡು ಸಕಲವಿದ್ಯಾ ಪಾರಂಗತರಾಗುತ್ತಾರೆ ಈ ವೇಳೆಯಲ್ಲಿಯೇ ದಾಯಾದಿತ್ವವು ಪ್ರಾರಂಭವಾಗಿ ಕೌರವ ಪಾಂಡವರಲ್ಲಿ ದ್ವೇಷವನ್ನು ಎಂತು ಮಾಡುತಿದ್ದರು ಅದರಲ್ಲಿಯೂ ಭೀಮ ದುರ್ಯೋಧನರಲ್ಲಿ ಕೋಪಾತಿರೇಕಗಳನ್ನು ರಸವತ್ತಾಗಿ ವರ್ಣಿಸಿದ್ದಾನೆ. ಇವುಗಳನ್ನು ಓದುತ್ತಾ ಹೋದರೆ ಎಂಥ ಸಾತ್ವಿಕನಿಗೂ ಸಿಟ್ಟು ಬರದಿರದು ಇದಕ್ಕೆ ಕವಿತಾ ಪ್ರೌಢಿಮೆಯೇ ಸರಿ ಅಂತೆಯೇ ಅರಸುಗಳಿಗದುವೀರ ಇದನ್ನು ನಾವು ಹೆಜ್ಜೆ ಹೆಜ್ಜೆಗೂ ಗ್ರಂಥದ ತುದಿ ಮೊದಲಾಗಿ ಕಾಣುತ್ತೇವೆ. ಪ್ರಾಮುಖ್ಯವಾಗಿ ಬಾಲ್ಯದಲ್ಲಿ ಭೀಮ ದುರ್ಯೋಧನರ ಸೆಣಸಾಟ ಬಕಾಸುರ ವಧೆ ಕಿರಾತಾರ್ಜುನ ಯುದ್ಧ ಕರ್ಣಪರ್ವ ಗದಾಪರ್ವ ಇವೇ ಮೊದಲಾದವುಗಳನ್ನು ನೋಡಿದರೆ ಕ್ಷಾತ್ರ ತೇಜವು ಉಕ್ಕುತ್ತದೆ

(ದ್ವಿಜರಿಗೆ ಪರಮ ವೇದದ ಸಾರ)

ಮಂತ್ರ ಶಾಸ್ತ್ರ ತಂತ್ರ ಶಾಸ್ತ್ರಗಳಲ್ಲಿ ಪ್ರಾಮುಖ್ಯತೆ ಎಷ್ಟಿತ್ತೆಂಬುದನ್ನು ನೀವು ಕುಮಾರ ವ್ಯಾಸನು ವರ್ಣನೆ ಮಾಡಿದ ಯಜ್ಞ ಯಾಗಾದಿಗಳ ವರ್ಣನೆ ಇಷ್ಟೇ ಅಲ್ಲ ಅರಣ್ಯ ಪರ್ವದಲ್ಲಿಯು ಯಕ್ಷ ಪ್ರಶ್ನೆ ಸನತ್ಸುಜಾತ ನೀತಿ ಭೀಷ್ಮ ಪರ್ವದಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಬೋಧ ಮಾಡಿದ ಅದ್ವಿತೀಯವಾದ ಶ್ರೀ ಮದ್ಭಗವ

ನೀವೂ ಕೂಡಾ ದಿಟ್ಟತನದಿಂದ ಸತ್ಯ ಅಹಿಂಸೆ ಬ್ರಹ್ಮಚರ್ಯಾದಿ ಸದ್ಗುಣಗಳನ್ನು ಸಾಧಿಸಿ ಈ ಸಂಸಾರ [ಜನನ ಮರಣ] ಸಾಗರದಿಂದ ಪಾರಾಗಿ, ಮುಕ್ತರಾಗಲು ಭಗವಂತನು ನಿಮ್ಮನ್ನು ಅನುಗ್ರಹಿಸಲಿ ಎಂದು ಹಾರೈಸುವ, — ನಿಮ್ಮ ಅಣ್ಣ— ಮುಕ್ಕಣ್ಣ

ದ್ಗೀತೆ ಮುಂತಾದವುಗಳನ್ನು ಕಂಡರೆ ಎಂಥ ಪಂಡಿತನಾದರೂ ತಲೆದೂಗಲೇ ಬೇಕು ಅಂತೆಯೇ ದ್ವಿಜರಿಗೆ ಪರಮ ವೇದಸಾಕ ಎಂದು ಹೇಳಿ ಕೊಂಡದ್ದು ಅಕ್ಷರಶಃ ನಿಜಪಡೆ

(ಯೋಗೀಶ್ವರರ ತತ್ವ ವಿಚಾರ)

ಅನೇಕ ವಿದ್ಯೆಗಳು ಪ್ರಯತ್ನ ಮಾಡಿದಲ್ಲಿ ಬರಬಹುದು. ಆದರೆ ಯೋಗ ವಿದ್ಯೆ ಮಾತ್ರ ಹಾಗಲ್ಲ ಇದಕ್ಕೆ ಗುರು ಅನುಗ್ರಹ ಪೂರ್ಣ ಬೇಕು. ಇದನ್ನಂತೂ ಕವಿಯು ಕರತಲಾಮಲಕವಾಗಿ ಮಾಡಿ ಕೊಂಡಿದ್ದಾನೆ ಪ್ರಾಣಾಯಾಮ ಪ್ರತ್ಯಾ-ಹಾರ ಧ್ಯಾನಧಾರಣ ಸಮಾಧಿ ಮೊದಲಾದವುಗಳನ್ನು ಪೂರಕ ಕುಂಭಕ ರೇಚಕ ಪ್ರಾಣಾಯಾಮದ ಭೇಧಗಳನ್ನು ಸವಿಸ್ತಾರವಾಗಿ ಸನತ್ಸುಜಾತ ಮುನಿಗಳಿಂದ ಧೃತರಾಷ್ಟ್ರನಿಗೂ ಶ್ರೀ ಕೃಷ್ಣನಿಂದ ಅರ್ಜುನನಿಗೂ ಬೋಧ ಮಾಡಿದವುಗಳನ್ನು ಸ್ವತಃ ಅನುಭವ ಪಡೆದು ಮಾಡಿದಂತೆಯೇ ಯೋಗೀಶ್ವರರಿಗೆ ತತ್ವವಿಚಾರವಾಗಿದೆ ಇದಕ್ಕಾಗಿಯೇ ಇವನಿಗೆ ಯೋಗೀಂದ್ರನೆಂಬುವದನ್ನು ಪ್ರತಿಪರ್ವಗಳ ಕೊನೆಯಲ್ಲಿಯೂ ಕಾಣುತ್ತೇವೆ.

(ಮಂತ್ರಿ ಜನಕ್ಕೆ ಬುದ್ಧಿಗುಣ)

ರಾಜಕಾರಣವೆಂದರೇನು? ಎಂತು ಸಾಧಿಸಬೇಕು ರಾಜನಾದವನು ಪ್ರಜೆಗಳ ಅನುರಾಗವನ್ನು ಎಂತು ತಿಳಿಯಬೇಕು. ಶತ್ರುಗಳಿಂದ ಹೇಗೆ ಪಾರಾಗಬೇಕು ದೂತ ಕಾರ್ಯವೆಂದರೇನು ? ಮಂತ್ರಿಯ ಗುಣಗಳೇನು ಸೇನಾಧಿಕಾರಿ ಅಶ್ವಪಾಲಕ ಛತ್ರ ಚಾಮರಧಾರಿಗಳೇ ಮೊದಲಾಗಿ ಇವರಲ್ಲಿ ಯಾವ ಯಾವ ಗುಣಗಳಿರಬೇಕು. ಇವುಗಳನ್ನು ರಸವತ್ತಾಗಿ ವರ್ಣಿಸಿದ್ದಾನೆ. ಕಪಟದ್ಯೂತ ಶಕುನಿಯ ರಾಜನೀತಿ ವಿದುರ ನೀತಿ ಇವುಗಳು ಮಹಾ ಭಾರತದಲ್ಲಿ ಸುಪ್ರಸಿದ್ಧವಿವೆ. ಇವುಗಳಲ್ಲಿ ಮನುಷ್ಯನಿಗೆ ಅವಶ್ಯವಿದ್ದದ್ದು ಪ್ರಾತಃಕಾಲದಿಂದ ಮಲಗುವ ವರೆಗೆ ಎಲ್ಲ ನೀತಿಗಳನ್ನೂ ಸಾಧಕ ಭಾಧಕಗಳನ್ನೂ ಚನ್ನಾಗಿ ತನ್ನ ಶಬ್ದ ಪ್ರೌಢಿಮೆಯಿಂದ ಹೆಣೆದಿದ್ದಾನೆ ಅಂತೆಯೇ ಮಂತ್ರಿ ಕಾರ್ಯ ಮಾಡತಕ್ಕವರಷ್ಟೆ ಅಲ್ಲಿ ಬುದ್ಧಿವಾನವರಿಗೂ ಸಹ ಉಪಯುಕ್ತವಾಗಿವೆ.

(ವಿರಹಿಗಳ ಶೃಂಗಾರ)

ಆದಿ ಪರ್ವದಲ್ಲಿ ಅರ್ಜುನನು ಸುಭದ್ರೆಗಾಗಿ ಪರಿತಪಿಸಿದ್ದು ಅರ್ಜುನನಿಂದ ವಿಮುಖಳಾದ ಊರ್ವಶಿಯು ವಿರಹತಾಪದಿಂದ ಅನುತಾಪಹೊಂದಿದವಳಾಗಿ ಅವನಿಗೆ ಒಂದು ವರ್ಷ ಷಂಡನಾಗು ಎಂದು ಶಾಪವನ್ನು ಕೊಡುವದು ಅದನ್ನು ಹೃದಯಂಗಮವಾಗಿ ಅರಣ್ಯ ಪರ್ವದಲ್ಲಿ ನೀವು ನೋಡಬಹುದು ಮುಂದೆ ದ್ರೋಣ ಪರ್ವದಲ್ಲಿ ಆಯಾಸಗೊಂಡ

ಸೈನಿಕರು ಯುದ್ಧಭೂಮಿಯಲ್ಲಿಯೇ ಆನೆಗಳ ಕುಂಭ ಸ್ಥಳಗಳ ಮೇಲೆಯೇ ನಿದ್ರೆಗೈಯುತ್ತಿರುವದನ್ನು ವರ್ಣನೆ ಮಾಡಿದ್ದನ್ನು ಕಂಡರೆ ಕವಿಯು ಶೃಂಗಾರಕ ಮನೋಭಾವನೆ ಅಭಿಜ್ಞತೆಯನ್ನು ಸವೆದು ಎಂಥ ಸಂಯಮಿಯಾದರೂ ಶೃಂಗಾರ ಚೇಷ್ಟೆಯನ್ನು ನೆನಸದಿರನು ಅಂತೆಯೇ ವಿಂಹಗಳ ಶೃಂಗಾರ ಇದಕ್ಕೆ ಇದನ್ನು ಪುಷ್ಟಿಕರಿಸಬೇಕೆಂದರೆ ವಿರಾಟ ಪರ್ವದಲ್ಲಿ ದ್ರೌಪತಿ ಕೀಚಕರ ಮೆರಗು ಕೊಟ್ಟಂತಿದೆ.

(ವಿದ್ಯಾ ಪರಿಣಿತರ್ರ ಅಲಂಕಾರ)

ಇದರ ಬಗ್ಗೆ ;ಹೇಳುವದಾದರೆ ಅಸಾಮಾನ್ಯನಾದ ಈ ಕವಿಯು ತನ್ನದೇ ಆದ ಆಧ್ಯತೆಯನ್ನು ಕೊನೆಯವರೆಗೂ ಕಾಯ್ದುಕೊಂಡು ಬಂದಿದ್ದಾನೆ ಪ್ರತಿಪದ್ಯಗಳು ಯಾವದೇ ರೀತಿಯಿಂದ ವ್ಯಾಕರಣ ಛಂದಸ್ಸು ಅಲಂಕಾರ ಪ್ರೌಢಿಮೆ ಬಹು ಅರ್ಥ ಸೂತ್ರಾತ್ಮಕ ಶಬ್ದ ಪ್ರಾಸುಗಳು ಸುಚನಾತ್ಮಕವಾಗಿಯೂ ಒಡಪುಗಳಂತೆ ಇದ್ದ ಪದ್ಯಗಳೇ ಮೊದಲಾದ ಗುಣಗಳಿಂದಲೂ ಕೂಡಿದ್ದಾಗಿ ವಿದ್ಯಾಪರಿಣಿತರಿಗೆ ಅಲಂಕಾರ ಪ್ರಾಯವಾಗಿ ಅಲ್ಲದೆ ಈ ಕವಿಯು ಯಾವದೇ ಪದ್ಯವನ್ನು ತಪ್ಪು ತೆಗೆಯಬೇಕೆಂದು ಹೋದರೆ ಸೂರ್ಯಸಿಗೆ ಮಣ್ಣು ತೂರಿದಂತೆಯೇ ಯಾಕಂದರೆ ವರ ಕವಿಗಳನ್ನು ನರಕವಿಗಳೆಂತು ತಿಳಿದಾರು? ಕಡು ಲೋಭಿಯಾದ ಚಿನ್ನದ ವ್ಯಾಪಾರಿಯು ಆಶೆಯ ಮೂಲಕ ತನ್ನ ತೂಕವನ್ನು ಕಳೆದುಕೊಂಡಾನು ಆದರೆ ಈ ಕವಿಯ ಕೃತಿಯಲ್ಲಿ ಇದಕ್ಕೆ ತಿಲಮಾತ್ರವು ಎಡೆಯಿಲ್ಲ. ವೀರನಾರಾಯಣನ ಅನುಗ್ರಹದ ಬಗ್ಗೆ ಅವನಿಗೆ ಎಷ್ಟೊಂದು ವಿಶ್ವಾಸವಿತ್ತೆಂದರೆ ಒಂದು ಪದ್ಯದಲ್ಲಿ (ಹಲಿಗೆ ಬಾಳಪವಹಿಡಿಯುದೊಂದಗಳಿಕೆ) ಎಂದು ಹೇಳಿಕೊಳ್ಳುತ್ತಾನೆ. ಆದರೂ ತನ್ನ ವಿನಯವನ್ನು ತೋರಿಸುತ್ತಾ ವೀರನಾರಾಯಣನೇ ಲಿಪಿಕಾರ ಅನ್ನುತ್ತಾ ಇದರಿಂದ (ವಿದ್ಯಾ ವಿನಯೇನ ಶೋಭತೆ) ಇದೂ ಅಲ್ಲದೆ ಪ್ರತಿ ಪರ್ವಗಳೂ ನವರಸಭರಿತವಾಗಿಯೂ ಲಾಲಿತ್ಯಪೂರ್ಣವಾಗಿಯೂ ಕಟ್ಟಸಿಟ್ಟಾಗಿಯೂ ಭಕ್ತಿ ಜ್ಞಾನ ವೈರಾಗ್ಯ ರಾಜನೀತಿ ಮಾನವನ ಇರುವಿಕೆಗಾಗಿ ಆಚಾರ ವಿಚಾರಗಳ ರೀತಿ ಇವೆಲ್ಲವುಗಳೂ ಮೊದಲಿನಂತೆ ತುದಿವರೆಗೂ ಓದುಗರಿಗೆ ಬೇಸರಬಾರದಂತೆ ಆಯಾ ರಸಗಳಲ್ಲಿಯೇ ತಲ್ಲೀನನಾಗಿ ಸಾರೋಪ್ಯ ಸುಖವನ್ನು ಅನುಭವಿಸುತ್ತಾನೆ. ಅಂತೆಯೇ ನಮ್ಮ ರಾಷ್ಟ್ರಕವಿಗಳಾದ ಕೆ. ವಿ. ಪುಟ್ಟಪ್ಪನವರು ಮಾನವಾರೆ ಕೊಂಡಾಡಿದ್ದಾರೆ. ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗದ್ವಾಪರವಾಗುವದು!! ಭಾರತ ಕಣ್ಣಲ್ಲಿ ಕುಣಿಯುವದು! ಮಿಂಚಿನ ಹೊಳೆ ತುಳು ಕಾಡುವದು.

ಇವನ ಕಾವ್ಯವನ್ನು ಒಮ್ಮೆ ರಸಾಸ್ವಾದಿಸಲು ಪ್ರಾರಂಭಿಸಿದರೆ ಹಸಿವೆ ನೀರಡಿಕೆಗಳ ಪರಿವೆಯೇ ಇಲ್ಲದಂತಾಗುತ್ತದೆ ಇದರಲ್ಲಿ ಕುಮಾರವ್ಯಾಸನು ತನ್ನ ಕವಿತೆಯ ಬಾಗ

ಅಹಂಕಾರವನ್ನು ಹೇಳವೆ ಇದು ಕೇವಲಬರಿಯ ತುಳಸಿಯ ಕೃಷ್ಣಾ ಕಥೆ ಎಂದು ಹೇಳಿದ್ದನ್ನು ನೋಡಿದರೇ ಬರೀ ಇತಿಹಾಸಕ್ಕೆ ಪ್ರಧಾನ್ಯ ಕೊಡದೆ ಪರಮಾತ್ಮನನ್ನು ಹೇರಳವಾಗಿ ಸೇರಬಹುದಾದ ಹಿರಿಯ ಭಕ್ತಿ ಪದವನ್ನು ವರ್ಣಿಸಿದ್ದಾನೆ ಅಂತೆಯೇ ಸಕಲ ವಿದ್ವಾಂಸರಿಗೂ ಪರಿಣಿತರಲಂಕಾರ ಪ್ರಾಯವಾಗಿದೆ.

(ಕಾವ್ಯಕ್ಕೆ ಗುರುವೆನಲು)

ಕುಮಾರವ್ಯಾಸನು ರಚಿಸಿದ ಮಹಾಭಾರತವು ಮೂಲವಾಗಿ ವೇದವ್ಯಾಸ ರಚಿತವಾದ ಮಹಾಭಾರತವನ್ನೇ ಅಯ್ದುಕೊಂಡಿದ್ದಾನೆ ಇದಕ್ಕೆ ಕಾರಣವೂ ಉಂಟು ಭಾರತೀಯರಿಂದ ನವಗೆ ಮಹಾಭಾರತ ಹಾಗೂ ರಾಮಾಯಣ ಇವುಗಳಲ್ಲಿ ಎಲ್ಲ ವಿಷಯಗಳೂ ಇವೆ ವೇದವಾಸರು ಅಷ್ಟಾದಶರು ಪುರಾಣಗಳನ್ನೇ ನಿರೂಪಿಸಿದರು ಇದರಲ್ಲಿ ಮಹಾಭಾರತ ರಾಮಾಯಣಗಳು ಸಮಾವೇಶವಿಲ್ಲ ಅಂತೆಯೇ ಇತಿಹಾಸಗಳಾಗಿ ಪರಿಣಿಸಿವೆ. ಮತ್ತು ಇವುಗಳ ಸಂದಗಳನ್ನು ಬೇರೆ ಬೇರೆಯಾಗಿ ಅನೇಕ ಕವಿವರ್ಯರು ತಮ್ಮ ತಮ್ಮ ಪ್ರಾಂತೀಯ ಭಾಷೆಗಳಲ್ಲಿ ರಚಿಸಿ ಪ್ರಸಿದ್ಧಿಯನು ಹೊಂದಿರುವರು ಕನ್ನಡ ಕವಿಗಳಲ್ಲಿಯೇ ಲಕ್ಷ್ಮೀಶ ಹರಿಹರ ಅಂಡಯ್ಯ ರುದ್ರಭಟ ನೃಪತುಂಗ ಕುಮಾರವ್ಯಾಸನ ಸರಿಸಮಕಾಲನಾದ ಚಾಮರಸ ಇವರೆಲ್ಲರೂ ತಮ್ಮ ತಮ್ಮ ಹೆಗ್ಗಳಿಕೆಯಿಂದ ಕವಿತೆಗಳಂತ ಶ್ರೇಷ್ಠ ಕವಿಗಳಾಗಿ ಹೋಗಿರುವರು ಇವರೆಲ್ಲರೂ ತಮ್ಮ ತಮ್ಮ ಕಾವ್ಯಗಳಿಗೆ ಶ್ರೇಷ್ಠವೆಂದೇ ಹೇಳಿಕೊಂಡಂತೆ ಇವನಾದರೂ ಹೇಳಿಕೊಂಡದ್ದೇನೂ ಆಶ್ಚರ್ಯವಲ್ಲ ಚಾಮರಸನು ಪ್ರಭುಲಿಂಗಲೀಲೇ ರಚಿಸುತ್ತ ಸತ್ತವರ ಕಥೆ ಬರೆಯುವದರಲ್ಲಿ ಏನಿದೆ? ಅಂದರೆ ಲಕ್ಷ್ಮೀಶನು ಕರ್ನಾಟಕ ಚೂತವನ ನೆಂಬಭಿ ದಾನವನ್ನು ತೋರಿಸುತ್ತಾ ಇನ್ನು ಹಿಗೇಯೇ ಎಷ್ಟೋ ಕವಿಗಳು ಹೇಳಿದನ್ನು ಕುಮಾರವ್ಯಾಸನು ರಚಿಸಿದ ಕಾವ್ಯಕ್ಕೆ ಗುರುವಾಗಿದೆ. ಮತ್ತು ಅನೇಕ ಕಾವ್ಯಗಳಿಗೆ ಗುರುಸ್ವರೂಪವಾಗಿದೆ ಎಂದು ಹೇಳಿಕೊಂಡದ್ದು ಯಥಾರ್ಥವಾಗಿದೆ ಯಾಕೆಂದರೆ ವೇದವ್ಯಾಸರೇ ಹೇಳುವದೇನಂದರೆ ನೀನು ರಚಿಸಿದ ಈ ಗ್ರಂಥವು ಅತಿ ಭಾರವುಳ್ಳದ್ದಾಗಿದೆ. ಅಂತೆಯೇ ಭಾರತ (ಭಾರತ್ವಾಚ್) ಇದು ! ಮೂಲವಾಗಿ ೪೦ ಪರ್ವಗಳೂ ಒಂದು ಲಕ್ಷ ಶ್ಲೋಕವುಳ್ಳದ್ದಾಗಿಯೂ ಇದೆ. ಇದಕ್ಕಾಗಿಯೇ ಪೂರ್ಣ ರಚಿಸಲು ಹೋದನು ಕುಮಾರವ್ಯಾಸನು ಕಾವ್ಯಕ್ಕೆ ಗುರುವೆನಲು ಅಂದು ಕೊಂಡಿರಲು ಸಾಕು ಮಾಡುವದೇನು? ವೀರನಾರಾಯಣನು ಅಪ್ಪಣೆಯೇ ಇಟ್ಟಿದ್ದ ಮೇಲೆ ಗಧಾಪರ್ವದ ವರೆಗೆ ಮಾತ್ರ ರಚಿಸಿ ಕನ್ನಡ ಕುಲಕ್ಕೆ ಅಪಾರ ಉಪಕಾರವನ್ನು ಮಾಡಿದ್ದಾನೆ ಇದನ್ನು ಪ್ರತಿಯೊಬ್ಬ ಕನ್ನಡಿಗನು ಪ್ರತಿನಿತ್ಯ ಓದಿ ರಸಾನುಭೂತಿಯನು ಹೊಂದಿ ತ್ರಿವಿಧ ತಾಪವನ್ನು ಹೋಗಲಾಸಿಡಿ ಕೊಂಡು ಸಾರೋಪ್ಯ ಮುಕ್ತಿಯನ್ ಹೊಂದಲು ಅತಿ ಸುಲಭವಾದ ಮಾರ್ಗವಾಗಿದೆ. ಕುಮಾರವ್ಯಾಸನ ಮಹಾಬಾರತ ಬಗ್ಗೆ ವಿಮರ್ಶೆಯನ್ನು ಎಷ್ಟು ಮಾಡಿಕೂದ ಕಡಿಮೆಯೇಯಿದೆ ಚಿನ್ಮಾತ್ರ ಲೋಕ ಬಂಧು ವಾಚಕರಿಗಾಗಿ ಕೊಡಲಾಗಿದೆ ಇತಿ ಶಿವಂ||

ಮಾನವನಿಗೆ ಅಧ್ಯಾತ್ಮ ವಿದ್ಯೆಯಿಂದೇನು ಪ್ರಯೋಜನ

ಲೇಖಕರುಃ— ಶ್ರೀ ಶಿವಪುತ್ರ ಮಹಾಸ್ವಾಮಿಗಳು ಹುಬ್ಬಳ್ಳಿ

ಶ್ರೀ ಸದ್ಗುರು ಸಿದ್ಧಾರೂಢ ಮಹಾಸ್ವಾಮಿಗಳು ಹುಬ್ಬಳ್ಳಿ. ಇವರ ಅಗ್ರಗಣ್ಯ ಶಿಷ್ಯ ಮಾಲಿಕೆಯಲ್ಲಿ ರತ್ನಪ್ರಾಯ ಪ್ರತಿಭಾನ್ವಿತ ಸಾಹಿತಿಗಳೂ, ಪ್ರವಚನ ಪಟುಗಳು ಹಾಗೂ ಅಧ್ಯಾತ್ಮವಿದ್ಯೆಯಲ್ಲಿ ಪಳಗಿದ ಮಹಾನುಭಾವಿಗಳು ಆದ ಶ್ರೀ ಶಿವಪುತ್ರಮಹಾಸ್ವಾಮಿಗಳವರು 'ಲೋಕಬಂಧು'ವಿನಲ್ಲಿ ಪ್ರತಿ ತಿಂಗಳ ತಮ್ಮ ಅನುಭವ ಪೂರ್ಣ ಲೇಖನಗಳನ್ನು ಕೊಟ್ಟು, ಪ್ರಬುದ್ಧ ಕನ್ನಡಿಗರಿಗೆ ಮಹೋಪಕಾರ ಮಾಡುವರೆಂದು ನಂಬಿದ್ದೇನೆ. ನಮ್ಮ ಓದುಗರು ಕೂಡಾ ಈ ನಾಡು ಅಧ್ಯಾತ್ಮದ ಬೀಡಾಗಲು ಕನ್ನಡ ಸಾಹಿತ್ಯವು ಸರ್ವಾಂಗ ಸುಂದರ ನಂದನವನವೆನ್ನಿಸಲು ಸಹಕರಿಸಿ ಸ್ವಾಗತಿಸುವರೆಂಬ ಹಾರೈಕೆ ಸಂ.



'ನರಜನ್ಮದಿಂದಿಹದೊಳು ಮಿಗಿಲುಂಟೆ' ಎಂಬತ್ತುನಾಲ್ಕು ಲಕ್ಷಯೋನಿಗಳಲ್ಲಿ ಮನುಷ್ಯಜನ್ಮವೇ ಮಿಗಿಲಾಗಿರುತ್ತದೆ ಯಾಕೆಂದರೆ ಈ ದೇಹದಲ್ಲಿ ಜ್ಞಾನವು ಅಧಿಕವಾಗಿರುತ್ತದೆ ಮಿಕ್ಕ ದೇಹಗಳಲ್ಲಿ ವಿಚಾರ ಮಾಡುವ ಜ್ಞಾನವಿಲ್ಲಕಿಂತು ಕರ್ಮಫಲಗಳನ್ನು ಭೋಗಿಸುವದಕ್ಕಾಗಿ ಇರುತ್ತವೆ. ಈ ಮನುಷ್ಯ ದೇಹವು ಕರ್ಮ ಫಲಭೋಗಿಸುವದರಿಲ್ಲದೆ ಕರ್ತೃತ್ವವುಳ್ಳದ್ದು ಆಗಿದೆ. ಪಾಪ ಮಾಡಿ ನರಕಕ್ಕೂ ಪುಣ್ಯ ಮಾಡಿ ಸ್ವರ್ಗಕ್ಕೂ ಯೋಗದಿಂದ ಬ್ರಹ್ಮ ಲೋಕಕ್ಕೂ ಜ್ಞಾನದಿಂದ ಮೋಕ್ಷಕ್ಕು ಹೊಂದುವ ಸಾಮರ್ಥ್ಯವುಳ್ಳದಾಗಿದೆ. ಆದ್ದರಿಂದ ಜಂತುನಾಂ ನರಜನ್ಮ ದುರ್ಲಭ್ಯ ಅನೇಕ ಜನ್ಮಗಳಲ್ಲಿ ಜ್ಞಾನಯುಕ್ತ ನರಜನ್ಮವೇ ಬರುವದು. ದುರ್ಲಭವೆಂದ ಶ್ರೀ ಶಂಕರಾಚಾರ್ಯರು ಹೇಳುತ್ತಾರೆ.

ಆದ್ದರಿಂದ ನಾನು ಯಾರು? ಎಲ್ಲಿಂದ ಇಲ್ಲಿಗೆ ಬಂದಿರುವೆ? ಇಲ್ಲಿಂದ ಇನ್ನು ಮುಂದೆ ಹೋಗುವದೆಲ್ಲಿಗೆ ಈಗ ಮಾಡ

ತಕ್ಕ ಕರ್ತವ್ಯವೇನು ಹೀಗೆ ವಿಚಾರವನ್ನು ಮಾಡತಕ್ಕದ್ದು. ವಿಚಾರವನ್ನು ಮಾಡದೆ ಪಶುವಿನಂತೆ ಭೋಗದಲ್ಲಿಯೇ ಕಾಲಕಳೆಯುವದು ಅನರ್ಥವಾಗಿರುತ್ತದೆ. ಮುಕ್ತಿಯನ್ನು ಹೊಂದಲಿಕ್ಕೆ ಯೋಗ್ಯವಾದ ನರಜನ್ಮಪಡೆದರೂ ಹೊಂದದಿರುವದು ಮಹಾ ಅಪರಾಧವಾಗಿರುತ್ತದೆ. ಆದ್ದರಿಂದ ಶ್ರುತಿ ಗುರುಗಳಿಗೆ ಶರಣಾಗತರಾಗಿ ನಾನು ಯಾರು ? ಎಂದು ವಿಚಾರಮಾಡಿ ತನ್ನನ್ನರಿತು ಮುಕ್ತಿಯನ್ನು ಪಡೆಯುವದೇ ನರಜನ್ಮದ ಸಾರ್ಥಕವಾಗಿರುತ್ತದೆ.

ಈ ಕಾರಣದಿಂದ ಮಾನವನಿಗೆ ಅಧ್ಯಾತ್ಮವಿದ್ಯೆಯೇಬೇಕು. ಅಧ್ಯಾತ್ಮವಿದ್ಯೆಯು ಅಂದರೆ, ತನ್ನ ನಿಜವನ್ನು ತಾನು ಅರಿಯುವದಾಗಿದೆ ಮರತರೆ ಬಂಧ, ಅರಿತರೆ ಮುಕ್ತಿಯೆಂದು ಸಕಲ ಶಾಸ್ತ್ರಗಳು ಹೇಳುತ್ತವೆ. ಮತ್ತು **'ವಿದ್ಯಾನಾಂ ಅಧ್ಯಾತ್ಮ ವಿದ್ಯೋಹಂ"** ಎಲ್ಲ ವಿದ್ಯೆಗಳಲ್ಲಿ ಅಧ್ಯಾತ್ಮ ವಿದ್ಯೆಯೇ ನಾನಾಗಿರುವೆನೆಂದು ಭಗವದ್ಗೀತೆಯಲ್ಲಿ ಭಗವಂತನು ಹೇಳಿದ್ದಾನೆ. ಮತ್ತು **'ರಾಜವಿದ್ಯಾ ರಾಜಗುಹ್ಯಂ" 'ಜ್ಞಾನೇನ ಸದೃಶಂ ಪವಿತ್ರಮಿಹ ನವಿದ್ಯತೆ'** ಎಲ್ಲ ವಿದ್ಯೆಗಳಲ್ಲಿ ಅಧ್ಯಾತ್ಮ ವಿದ್ಯೆಯೇ ಶ್ರೇಷ್ಠವೆಂದೂ ಇದಕ್ಕೆ ಸರಿಯಾಗಿ ಪವಿತ್ರವಾದದ್ದು ಯಾವದೂ ಇಲ್ಲೆಂದೂ ಗೀತೆಯಲ್ಲಿ ಹೇಳಿದೆ. ಆದ್ದರಿಂದ ಮಾನವನು ಪ್ರಯತ್ನಪೂರ್ವಕ ಅಧ್ಯಾತ್ಮವಿದ್ಯೆಯನ್ನು ಸಂಪಾದನೆ ಮಾಡತಕ್ಕದ್ದಾಗಿದೆ. **ಜನನ ಮರಣ ರೂಪ ಸಂಸಾರ ದುಃಖದ** ಆತ್ಯಂತ ನಿವೃತ್ತಿ, ಪರಮಾನಂದ ಪ್ರಾಪ್ತಿ ರೂಪ ಮೋಕ್ಷವಾಗಬೇಕಾದರೆ ತನ್ನ ಜ್ಞಾನವು ಅವಶ್ಯಬೇಕು. **'ಜ್ಞಾನದೇವತು ಕೈವಲ್ಯಂ ನಾನ್ಯಂಪಂಥ: ವಿದ್ಯತೆ ಅಯನಾಯ"** ತನ್ನನ್ನು ತಾನರಿಯದೇ ಬೇರೆ ಉಪಾಯಗಳಿಂದ ಮೋಕ್ಷವಾಗುವದಿಲ್ಲೆಂದು ಶ್ರುತಿಯು ಹೇಳುತ್ತದೆ. **'ಮನುಜಕುಲ ಜನನದ ಲಾಭವಾವುದು ? ಅನು ಆರೆಂದು ತಿಳಿವುದು,** ಎಂದು ಶ್ರೀ ನಿಜಗುಣರೂ ಹೇಳಿದ್ದಾರೆ. ಮತ್ತು **'ಬೇರೆ ಬೇರೆ ಭಾವಿಸಿ ಬ್ರಹ್ಮಜ್ಞಾನವೊಂದಿಲ್ಲದವಗೆ ತೋರದಯ್ಯಾ ಸುಖ,** ಬ್ರಹ್ಮಜ್ಞಾನದಿಂದಲೇ ಸುಖಪ್ರಾಪ್ತಿಯಾಗುತ್ತದೆಂದೂ, **'ಆತ್ಮವಿತ್ ಶೋಕಂ ತರತಿ"** ತನ್ನನ್ನು ಅರಿತವನೇ ಶೋಕ ಸಾಗರವನ್ನು ದಾಟುತ್ತಾನೆ. ಅಂದರೆ, ಬ್ರಹ್ಮಜ್ಞಾನದಿಂದಲೇ ದುಃಖದ ನಿವೃತ್ತಿಯಾಗುತ್ತದೆಂದೂ. ಹೇಳಿದೆ. ಆದ್ದರಿಂದ ಆತ್ಮಜ್ಞಾನವುಬೇಕು.

ದಶಮನಿಗೆ ನಾದಶಮನೆಂದು ಅರಿಯಬೇಕಾದರೆ, ಆಪ್ತಪುರುಷನ ಸಹಾಯವು ಬೇಕಾದಹಾಗೆ. ತನ್ನ ಜ್ಞಾನವು ತನಗಾಗಬೇಕಾದರೆ ಶ್ರುತಿ ಗುರುಗಳ ಸಹಾಯವು ಬೇಕಾಗುತ್ತದೆ ಆದ್ದರಿಂದ ಶ್ರೋತ್ರಿಯ ಬ್ರಹ್ಮನಿಷ್ಠ ಸದ್ಗುರುವಿನನ್ನು ಕುರಿತು ಶರಣಾಗತನಾಗಬೇಕು. **'ಗುರುವರನ ಒಲವಿಲ್ಲದವನು ಏನನೋದಲು ದೊರಕೊಳ್ಳಲರಿಯದು ವರಸಹಜ ಜ್ಞಾನ್ನ,** ಶ್ರೀ ಗುರು ಮುಖದಿಂದ ಶ್ರವಣವಿಲ್ಲದೆ ತಾನೇ ಅನೇಕ ಗ್ರಂಥಗಳನ್ನು ಓದಿದರೂ ನಿಜವಾದ ಜ್ಞಾನವಾಗದಿಲ್ಲೆಂದು

ಹೇಳಿದ್ದಾರೆ. ಸಮುದ್ರದಲ್ಲಿ ನೀರು ವಿಪುಲವಾಗಿವೆಯೆಂದು ಕುಡಿದರೆ ಉಪ್ಪಾಗುವದು ಅದೇ ನೀರು ಮೇಘದಿಂದ ಬಂದರೆ ಸೀಯಾಗುವದು. ಇದರಂತೆ ತಾನೇ ಗ್ರಂಥವನ್ನು ನೋಡಿದರೆ ಸರಿಯಾದ ಜ್ಞಾನವಾಗದು; ಗುರುಮುಖದಿಂದ ಸಮ್ಯಕ್ ಜ್ಞಾನವಾಗುವದು.

'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ, ಆಚಾರ್ಯವಾನ್ ಪುರುಷೋವೇದ" ಶ್ರೀ ಗುರುಗಳಿಗೆ ಶರಣು ಹೋಗಿ ಸೇವೆಯಿಂದ ಪ್ರಶ್ನೆಗಳಿಂದ ತನ್ನನ್ನು ಅರಿಯಬೇಕು. ಎಂದು ಶ್ರುತಿಸ್ಮೃತಿಗಳು ಹೇಳುತ್ತವೆ ಯಾಕಂದರೆ, ಹಗ್ಗದ ಅಜ್ಞಾನದಿಂದ ಬಂದ ಹಾವಿನ ಭೀತಿಯು ಹಗ್ಗದ ಜ್ಞಾನದಿಂದಲೇ ನಾಶವಾಗುವಂತೆ ಅವಿಚಾರದಿಂದ ಬಂದ ಬಂಧವು, ವಿಚಾರದಿಂದಲೇ ನಿವೃತ್ತಿಯಾಗುತ್ತದೆ. ಆದ್ದರಿಂದ ತನ್ನ ನಿಜವನ್ನು ತಾನು ಅರಿಯಬೇಕು.

ತಾನು ಯಾರು ಅಂದರೆ ? ಅರಿಯುವವನೇ ತಾನು ತನ್ನಿಂದ ಅರಿಸಿಕೊಳ್ಳುವದು ತಾನಾಗುವದಿಲ್ಲ ತನ್ನಿಂದ ಅರಿಸಿಕೊಳ್ಳುವ ಘಟವು ಹೇಗೆ ತಾನಾಗುವದಿಲ್ಲವೋ, ಹಾಗೆಯೇ ತನ್ನಿಂದ ತಿಳಿಸಿಕೊಳ್ಳುವ ದೇಹಾದಿಗಳೂ ತಾನು ಆಗುವದಿಲ್ಲ. ಹೇಗಂದರೆ, ದೇಹವು ಜನನ ಮರಣಾದಿಗಳಿಂದ, ಇಂದ್ರಿಯುಗಳು ಅಂಧ್ಯ-ಮಾಂದ್ಯ-ಪಟುತ್ವಾದಿಗಳಿಂದ, ಪ್ರಾಣವು ಹಸಿವೆ ತೃಷೆಗಳಿಂದ ಯುಕ್ತವಾಗಿರುವದಲ್ಲದೆ, ಮನಸ್ಸು ಕಾಮ ಕ್ರೋಧಾದಿಗಳಿಂದಲೂ ಸುಖದುಃಖಾದಿಗಳಿಂದಲೂ, ಬುದ್ಧಿ ಜ್ಞಾನ ಅಜ್ಞಾನ ಸಂಶಯ ವಿಪರ್ಯಯ ಅರಿವು—ಮರೆವೆ ಗಳಿಂದಲೂ ಹಾಗು ಅಹಂಕಾರವು ಕರ್ತೃತ್ವ ಭೋಕ್ತೃತ್ವಗಳಿಂದಲೂ; ಅರಿಸಿಕೊಳ್ಳುತ್ತವೆ. ಆದ್ದರಿಂದ ಆ ದೇಹಾದಿಗಳು ತಾನಾಗುವದಿಲ್ಲ. ಅವುಗಳನ್ನು ಇದಿರಿಟ್ಟು ಅರಿಯುವ ಅರುವೇ ತಾನಾಗಿರುತ್ತಾನೆ

ಈ ಅರುರೂಪನಾದ ತಾನು ಸಚ್ಚಿದಾನಂದ ಸಾಕ್ಷಿ ಪ್ರತ್ಯಗಾತ್ಮನಾಗಿರುವನು. ಈ ಪ್ರತ್ಯಗಾತ್ಮನು ಜಗತ್ಸಾಕ್ಷಿಯಾದ ಪರಬ್ರಹ್ಮ ಸ್ವರೂಪನೇ ಆಗಿರುವನು. ಆದ್ದರಿಂದ "ಅಯಮಾತ್ಮಾಬ್ರಹ್ಮ" "ತತ್ತ್ವಮಸಿ" "ಪ್ರಜ್ಞಾನಂಬ್ರಹ್ಮ" ಅಹಂಬ್ರಹ್ಮಾಸ್ಮಿ, ಎಂಬ ಮಹಾವಾಕ್ಯಗಳು ಪ್ರತ್ಯಗಾತ್ಮನಿಗೂ ಮತ್ತು ಬ್ರಹ್ಮಕ್ಕೂ ಅಭೇದವನ್ನು ಬೋಧಿಸುತ್ತವೆ. ಆದ್ದರಿಂದ ಸಚ್ಚಿದಾನಂದ ಅಖಂಡ ಬ್ರಹ್ಮಾಭಿನ್ನ ಪ್ರತ್ಯಗಾತ್ಮನೇ ನಾನೆಂದು ನಿಶ್ಚಯಮಾಡತಕ್ಕದ್ದು.

ಮತ್ತು ರಜ್ಜುಸರ್ಪ, ಶುಕ್ತಿರಜತ, ಮೃಗಜಲ; ಸಪ್ನಾದಿಗಳಂತೆ ಈ ತೋರುವ ನಾಮರೂಪಾತ್ಮಕ ಜಗತ್ತೆಲ್ಲವು, ಅಖಂಡ ಚಿನ್ಮಾತ್ರರೂಪನಾದ ತನ್ನಲ್ಲಿ ಕಲ್ಪಿತವಾಗಿರುತ್ತದೆ ಅಂದರೆ ಅದು ಮಿಥ್ಯೆಯಾಗಿರುತ್ತದೆ. ದೇಶ, ಕಾಲ, ವಸ್ತುಗಳಿಂದ ಪರಿಚ್ಛೇದ ರಹಿತವಾದ ಅಖಂಡಸಚ್ಚಿದಾನಂದ ಅದ್ವಿತೀಯ ಬ್ರಹ್ಮವೇ ಸತ್ಯವಾಗಿರುತ್ತದೆ. ಆದ್ದರಿಂದ ಶ್ರೀ ಶಂಕರ ಭಗವತ್ಪಾದರವರು

ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥ ಕೋಟಿಭಿಃ ।
ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ॥

ಬ್ರಹ್ಮ ಸತ್ಯ ಜಗತ್ತು ಮಿಥ್ಯೆ ಜೀವನು

ಪರಬ್ರಹ್ಮನೇ ಇರುವನು ಎಂಬದಾಗಿ ಕೋಟಿ ವೇದಾಂತ ಗ್ರಂಥಗಳಿಂದ ಹೇಳಿದ್ದನ್ನು ಅರ್ಧ ಶ್ಲೋಕದಿಂದ ಹೇಳಿದ್ದಾರೆ. ಆದ್ದರಿಂದ ಪ್ರತ್ಯಗಾತ್ಮನೇ ಶಿವನೆಂದು ನೆಂದು ನಿಶ್ಚಯ ಮಾಡತಕ್ಕದ್ದು 'ಅರುವೆ ತಾನೆಂದು ನಂಬಿ ನಿಂದೊಡೆ ಮುಕ್ತಿ ಪೆರತಿಲ್ಲವೆಂಬುದು ನಿಗಮೋಕ್ತಿ" ಎಂದು ಶ್ರೀಮನ್ನಿಜಗುಣರೂ ಹೇಳಿದ್ದಾರೆ. ಇದೇ ಅಭಿಪ್ರಾಯವನ್ನು ಗೀತೆಯಲ್ಲಿ ಶ್ರೀ ಭಗವಂತನು ಹೇಳಿದ್ದಾನೆ.

"ಕ್ಷರಃ ಸರ್ವಾಣಿ ಭೂತಾನಿ ಕೂಟ
ಸ್ಥೋಽಕ್ಷರ ಉಚ್ಯತೇ"

ಈ ಕಾಣುವ ಭೂತಭೌತಿಕ ಪ್ರಪಂಚವೆಲ್ಲವು ಕ್ಷರ ಅಂದರೆ ನಾಶವಾಗುವದು. ಅಕ್ಷರ ಅಂದರೆ ಈ ಪ್ರಪಂಚಕ್ಕೆ ಕಾರಣವಾದ ಮಾಯೆಯು ಇದರಂತೆ ನಾಶವಾಗದ್ದರಿಂದ ಅಕ್ಷರವೆನಿಸುತ್ತದೆ. ಕೂಟ ಅಂದರೆ ಮಾಯೆಯು ಈ ಕಾರಣವಾದ ಮಾಯೆಯು ಕಾ[illegible]ಲ್ಲಿರುವದರಿಂದ ಕೂಟಸ್ಥವೆನಿಸುತ್ತದೆ.

"ಉತ್ತಮ ಪುರುಷಸ್ತ್ವನ್ಯಃ ಪರಮಾತ್ಮೇ
ತ್ಯುದಾಹೃತಃ"

ಕ್ಷರ ಮತ್ತು ಅಕ್ಷರ ಈ ಎರಡಕ್ಕೂ ಅಧಿಷ್ಠಾನವಾದ ಚೈತನ್ಯದೇ ಉತ್ತಮ ಪುರುಷನೆಂದು ಹೇಳಲ್ಪಡುತ್ತಾನೆ. ಈ ಉತ್ತಮ ಪುರುಷ ರೂಪ ಅಖಂಡ ಚೈತನ್ಯವೇ ತಾನಾಗಿರುವನು. ಈ ರೀತಿ ತನ್ನಲ್ಲಿ ಕ್ಷರಾಕ್ಷರ ರೂಪ ಮಾಯಾ ಮತ್ತು ಮಾಯಾ ಕಾರ್ಯರೂಪ ಪ್ರಪಂಚವೆಲ್ಲವು ಕಲ್ಪಿತವಾಗಿದೆ. ಸರ್ವಾಧಿಷ್ಠಾನರೂಪ ಅಖಂಡ ಚೈತನ್ಯರೂಪನೇ ತಾನೆಂದು ತಿಳಿಯಬೇಕು. ಇದೇ ಅಧ್ಯಾತ್ಮವಿದ್ಯೆಯೆನಿಸುತ್ತದೆ ಇದೇ ಮುಕ್ತಿಗೆ ಕಾರಣವಾಗಿರುತ್ತದೆ. ಇಂಥಾ ಜ್ಞಾನವನ್ನು ಸಂಪಾದಿಸುವದೇ ಮನುಷ್ಯ ಜನ್ಮದ ಸಾರ್ಥಕವಾಗಿರುತ್ತದೆ

ಮಾರ್ಗ ಮತ್ತು ಗುರಿ

ಪ್ರಪಂಚದಲ್ಲೆಲ್ಲ ಒಂದೇ ಧರ್ಮವನ್ನು ಒಂದೇ ಬಗೆಯ ಪೂಜೆಯನ್ನು ಒಂದೇ ಬಗೆಯ ನೀತಿಯನ್ನು ಒಪ್ಪಿಕೊಂಡರೆ ಅದೇ ಪ್ರಪಂಚಕ್ಕೆ ಒದಗಬಹುದಾದ ಮಹಾದು ಗತಿ. ಇದು ಎಲ್ಲಾ ಧರ್ಮಗಳ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಕುಠಾರಪ್ರಾಯವಾಗುವದು. ಯಾವುದನ್ನು ಶ್ರೇಷ್ಠ ಧರ್ಮವೆಂದು ನಾವು ಭಾವಿಸುವೆವೊ ಅದನ್ನೇ ಎಲ್ಲರೂ ಒಪ್ಪಿಕೊಳ್ಳುವಂತೆ ನ್ಯಾಯ ಮೂಲಕವಾಗಿಯೋ ಅನ್ಯಾಯ ಮೂಲಕವಾಗಿಯೋ ಮಾಡಿ ಧರ್ಮದ ನಾಶವನ್ನು ಶೀಘ್ರವಾಗಿ ಬರುವಂತೆ ಮಾಡುವುದಕ್ಕಿಂತ ಪ್ರತಿಯೊಬ್ಬರೂ ತಾವು ಯಾವುದನ್ನು ಶ್ರೇಷ್ಠ ಆದರ್ಶ ಎಂದು ಭಾವಿಸುವದೋ ಅದಕ್ಕೆ ಇರುವ ಆತಂಕಗಳನ್ನು ನಿವಾರಿಸಿ ಒಂದೇ ಧರ್ಮ ಪ್ರಪಂಚದಲ್ಲಿ ತಾಂಡವವಾಡುವಂತೆ ಮಾಡಬೇಕು.

ಪರಮ ಸತ್ಯದೆಡೆಗೆ ಒಯ್ಯುವ ಮಾರ್ಗವನ್ನೇ ಯೋಗ ಎನ್ನುವುದು. ಇವುಗಳಲ್ಲಿ ಮುಖ್ಯವಾಗಿರುವುದೇ ಕರ್ಮಯೋಗ, ಭಕ್ತಿಯೋಗ, ರಾಜಯೋಗ ಮತ್ತು ಜ್ಞಾನಯೋಗ.

—ಸ್ವಾಮಿ ವಿವೇಕಾನಂದ

ವಚನ ಸಾಹಿತ್ಯ ಮತ್ತು ಮಹಿಳೆಯರು

ಲೇ : ಮೋಹನ ಚನ್ನಪ್ಪ ಛದ್ರಾಪ್ರೂರ ಹುಬ್ಬಳ್ಳಿ

ವಚನ ಸಾಹಿತ್ಯ ರೂಪುಗೊಂಡಿದ್ದು ೧೨ನೇ ಶತಮಾನದಲ್ಲಿ ಆಗ ಮಹಿಳೆ ಕೇವಲ ಅಡಿಗೆಯ ಮನೆಯ ಆಳಿನಂತೆ ಇರಬೇಕಾಗಿತ್ತು. ಯಾವುದರಲ್ಲೂ ಅವಳಿಗೆ ಸ್ವಾತಂತ್ರ್ಯವಿರಲಿಲ್ಲ. ಈ ಸಮಯದಲ್ಲಿ ಮಹಾತ್ಮಾ ಬಸವಣ್ಣನವರಿಂದ 'ಅನುಭವ ಮಂಟಪ' ಸ್ಥಾಪಿಸಲ್ಪಟ್ಟಿತು. ಆ ಮಂಟಪದಲ್ಲಿ ವಾದ-ವಿವಾದ ನಡೆಯುತ್ತಿತ್ತು. ಮಂಟಪದಲ್ಲಿ ನಡೆಯುವ ಚರ್ಚೆಗಳಲ್ಲಿ ಎಲ್ಲರಿಗೂ ಪ್ರವೇಶವಿತ್ತು. ಆಗ ಚರ್ಚೆಗಳಲ್ಲಿ ಪುರುಷರಷ್ಟೇ ಅಲ್ಲ; ಮಹಿಳೆಯರೂ ಭಾಗವಹಿಸಲಾರಂಭಿಸಿದರು ಆಗಲೇ ಮಹಿಳೆಯರಿಂದಲೂ ವಚನ ಸಾಹಿತ್ಯದ ನಿರ್ಮಾಣ ಉಂಟಾಯಿತು. ಶರಣೆ ಅಕ್ಕಮಹಾದೇವಿಯ ವಚನಗಳನ್ನು ಅವಲೋಕಿಸಿದಲ್ಲಿ ಅವಳೆಷ್ಟು ಜ್ಞಾನಿ ಎಂಬುದು ತಿಳಿಯುತ್ತದೆ ಅಲ್ಲಮಪ್ರಭು ಮತ್ತು ಬಸವಣ್ಣನವರು ಇತರ ಶರಣರು ಅವಳ ಬಗೆಗೆ ತೆಳೆವ ಅಭಿಪ್ರಾಯಗಳನ್ನು ನೋಡಿದಾಗ ಅವಳ ಹಿರಿಮೆ ನಮಗೆ ತಿಳಿಯದೆ ಇರದು.

ಅಕ್ಕಮಹಾದೇವಿಯಂತೆಯೇ ಇತರ ಶಿವಶರಣೆಯರು ಅನುಭವ ಮಂಟಪದ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು. ಅದರಲ್ಲಿಯ ಸಂಸ್ಕೃತಿ, ಜ್ಞಾನ. ಮುಂತಾದವುಗಳನ್ನು ನೋಡಿದಾಗ ವೇದೋಪನಿಷತ್ತುಗಳ ಕಾಲದಲ್ಲಿಯ ಶಾಂಡಿಲಿ, ಮೈತ್ರೇಯಿ ಇನ್ನಿತರ ಮಹಿಳಾಮಣಿಗಳ ನೆನಪು ಬರದೆ ಇರದು. ಶಿವಶರಣೆಯರು ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರಲ್ಲದೆ ಅವಶ್ಯ ಬಿದ್ದಾಗ ಮನೆಯಲ್ಲಿ ತಮ್ಮ ಗಂಡಂದಿರಿಗೆ ಉಪದೇಶವನ್ನೂ ಮಾಡುತ್ತಿದ್ದರು.

ಮಹಾತ್ಮಾ ಬಸವಣ್ಣನವರು ಕಲ್ಯಾಣವನ್ನು ತ್ಯಜಿಸಿ ಸಂಗಮನಾಥನಲ್ಲಿ ಐಕ್ಯವಾಗಲು ಹೊರಟರು ಮಾರ್ಗದಲ್ಲಿ ಅವರಿಗೆ ಮಡದಿ ನೀಲಾಂಬಿಕೆಯ ನೆನಪು ಬಂದಿತು. ಆಗ ನೀಲಾಂಬಿಕೆಗೂ ಐಕ್ಯ ಹೊಂದಲು, ಸಂಗಮಕ್ಷೇತ್ರಕ್ಕೆ ಬರಲು ಹೇಳಿಕಳಿಸಿದರು. ಆಗ ಆಕೆ 'ಅಲ್ಲಿಗೆ ಎನ್ನನು ಬರಹೇಳಿದರಂತೆ ಇಲ್ಲಿ ತಾವಿಲ್ಲವೇ ಸಂಗಯ್ಯನು? ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು ಬಲ್ಲ ಮಹಾತ್ಮರಿಗಿತು ಗುಣವೇ?' ಎಂದು ಆ ಸಂದೇಶ ತಂದ ಹಡಪದ ಅಪ್ಪಣ್ಣನಿಗೆ ಕೇಳಿದಳು. ಸಂಗಮನಾಥ ಇಲ್ಲಿಯೇ ಇದ್ದಾನೆ ನನ್ನ [illegible] ಎಂದು

ಆಕೆ ದುಃಖಪಟ್ಟಳು. ತನ್ನ ಕರಸ್ಥಳದಲ್ಲಿ ಸಂಗಮನಾಥನು ಬಸವಣ್ಣನವರ ರೂಪದಲ್ಲಿದ್ದಾನೆ. ಆದ್ದರಿಂದ ಚಿಂತಿಸ ಬೇಕಾಗಿಲ್ಲ. ಈ ರೀತಿ ವಿವೇಕದಿಂದ ಮಹಾ ಪತಿವೃತೆಯೂ,ಜ್ಞಾನಿಯೂ ಆದ ನೀಲಾಂಬಿಕೆ "ಸಂಗನ ಬಸವಣ್ಣನೆಂದ ನಿರೂಪಕ್ಕೆ ಹಿಂಗದೆ ಕರವೆತ್ತಿ ಮುಗಿವುತಲಿ ಸಂಗಮನಾಥನೆ ಈತನೆಂದೆನ.ತಲಿ ಎನ್ನಂಗೈಯ ಲಿಂಗದೊಳಡಗುವನೆ" ಎಂದು ತನ್ನ ಕರಸ್ಥಲದ ಇಷ್ಟಲಿಂಗದಲ್ಲಿ ಐಕ್ಯವಾದಳು.

ಇದೇ ರೀತಿ ಮೋಳಿಗೆ ಮಾರಯ್ಯನೆಂಬ ಶರಣನು ಲಿಂಗದಲ್ಲಿ ಐಕ್ಯ ಹೊಂದುವುದಾಗಿ ತನ್ನ ಸತಿ ಮಹಾದೇವಿಯಮ್ಮನಿಗೆ ತಿಳಿಸಿದನು. ಆಗ ಆ ಸತಿ ತಾನು ಬೇರೆ ಲಿಂಗ ಬೇರೆ ಎಂಬ ಭಾವದಿಂದ ಇರುವ ಮಾರಯ್ಯನ ಅಜ್ಞಾನಕ್ಕೆ ವ್ಯಸನಪಟ್ಟು "ಇದೇತಕಯ್ಯ ಶಿವನೊಳಗೆ ಕೂಟಸ್ಥವಾದಿಹೆನೆಂಬಬಲು ಬೇಟ ? ಇದು ಭಕ್ತಿ ಸತ್ಯದ ಆಟವಲ್ಲ ಇನ್ನಾರ ಕೇಳಿ ಮತ್ತಿನ್ನಾರಿಗೆ ಹೇಳಿ ನೀ ಮಾಡುವ ಮಾಟ ಮುನ್ನ ನೀನಾರೆಂದಿದ್ದೆ ಹೇಳಾ? ಆ ಭಾವವನರಿದು ನಿನ್ನ ನೀನೆ ತಿಳಿ ಎನ್ನಯ್ಯ ಪ್ರಿಯ ಇಮ್ಮಡಿ ನಿಃ ಕಳಂಕ ಮಲ್ಲಿಕಾರ್ಜುನಾ" ಎಂದು ನುಡಿದಳು. ನಂತರ ಇಬ್ಬರಲ್ಲೂ ವಾದ ನಡೆಯಿತು. ಆಗ ಮಹಾದೇವಿಯಮ್ಮ ವಚನಗಳ ಮೂಲಕ ಗಂಡನಿಗೆ ತಿಳಿಹೇಳಿದಳು. ಆಗಲೇ ಮೋಳಿಗೆ ಮಾರಯ್ಯ 'ನಿನ್ನ ಭಕ್ತಿಯ ಬೆಳೆಯೆ ಎನಗೆ ಸತ್ಯದ ಹಾದಿ" ಎಂದು ಹೇಳಿದುದು ಮಹಾದೇವಿಯಮ್ಮನ ಮಹಾಜ್ಞಾನದ ಅರಿವು ಮಾಡಿಸುತ್ತದೆ.

ಆಯ್ದಕ್ಕಿ ಮಾರಯ್ಯನೆಂಬ ಶಿವಶರಣನೊಬ್ಬನಿದ್ದ. ಅವನು ಅಕ್ಕಿಯನ್ನು ಆಯ್ದು ತಂದು ಅದನ್ನು ಮಾರಿ ಜೀವಿಸುತ್ತಿದ್ದ. ಒಂದು ದಿನ ಆತ ದಿನವೂ ತರುವುದಕ್ಕಿಂತ ಹೆಚ್ಚಿಗೆ ಆಯ್ದುಕೊಂಡು ಬಂದಿದ್ದ ಅವನ ದುರಾಸೆಯನ್ನು ಕಂಡು ಅವನ ಸತಿ ಲಕ್ಕಮ್ಮನಿಗೆ ವ್ಯಥೆಯಾಯಿತು. ಆಗ ಪತಿಗೆ "ಎಂದಿನಂದದಿ ಸಾಕು ಮತ್ತೆ ಕೊಂಡು ಹೋಗಿ ಅಲ್ಲಿಯೇ ಸುರಿ. ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗ ಕೊಟ್ಟ ಕಾಯಕವೇ ಸಾಕು ಮಾರಯ್ಯ" ಎಂದು ನುಡಿದಳಲ್ಲದೆ "ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯ?............ ಈ ಸಕ್ಕಿಯ ಆಸೆ ನಿಮಗೇಕೆ ? ಈಶ್ವರ ನೊಪ್ಪ" ಎಂದು ಎಚ್ಚರಿಸಿದಳು. ಅಲ್ಲದೆ ಹೆಚ್ಚಿಗೆ ತಂದುದನ್ನು ಅದು ಮೊದಲು ಎಲ್ಲಿತ್ತೊ ಅಲ್ಲಿ ಇಡಿಸಿ ಪ್ರಭುದೇವ, ಬಸವಾದಿ ಶರಣರಿಗೆ ದಾಸೋಹಕ್ಕೆ ಕರೆಯಲು ತಿಳಿಸಿದಳು ಇದರಿಂದ ಅಂಜಿದ ಮಾರಯ್ಯ "ನಾವು ಬಡವರು ಅವರು ಮಹಾವ್ರತಶೀಲ-ಸಂಪನ್ನರು. ಅವರು ಬಂದಮೇಲೆ ಕಷ್ಟವಾದೀತು" ಎಂದು ಸಂಶಿಸಿದನು. ಆಗ ಮಹಾಸತಿ ಲಕ್ಕಮ್ಮ "ಮನಶುದ್ಧವಿಲ್ಲದವರಿಗೆ ದ್ರವ್ಯದ ಬಡತನವಲ್ಲದೆ, ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತರಿಂಗೆ ಎತ್ತ ನೋಡಿದತ್ತ ಲಕ್ಷ್ಮೀ ತಾನಾಗಿಪ್ಪಳು ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗದ ಸೇವೆಯುಳ್ಳನ್ನಕ್ಕ" ಎಂದು ಧೈರ್ಯ ನೀಡಿ ಕಳುಹಿದಳು.

ಶಿವಶರಣೆಯರಲ್ಲಿ ದಿಟ್ಟ ಸಾಧಕಳಾದ ಮುಕ್ತಾಯಕ್ಕ ಗುರುವಾಗಿದ್ದ ಸಹೋದರನಾದ ಅಜಗಣ್ಣ ಲಿಂಗೈಕ್ಯನಾಗಿದ್ದಕ್ಕೆ ಕಣ್ಣೀರು ಸುರಿಸುತ್ತ ಕುಳಿತುಕೊಂಡಳು. ಆಗ ಪ್ರಭುದೇವರು ಮರುಗಿ ಆಕೆಗೆ ಭೆಟ್ಟಿಯಾಗಿ ಪಾರಮಾರ್ಥದ ಸತ್ಯವನ್ನು ತಿಳಿಸಿ ಹೇಳಿದರು. ಅಜಗಣ್ಣ ಅಸಾಧ್ಯವೆನಿಸಿದ ಮುಕ್ತಿಯನ್ನು ಪಡೆದಿದ್ದಾನೆ. ಈ ದೇಹ ಅನಿತ್ಯ ಅಂದರೆ ಅಜಗಣ್ಣ ನಿತ್ಯನು.ದುಃಖ ಪಡಬೇಡವೆಂದು ತಿಳಿಸಿದರು. ಆದರೆ ತತ್ವ ವಿಚಾರ ಬಲ್ಲವಳಾದ ಮುಕ್ತಾಯಕ್ಕ ವಾದಕ್ಕೆ ಪ್ರಾರಂಭಿಸಿದಳು. ಈ ವಾದದಲ್ಲಿ ಮುಕ್ತಾಯಕ್ಕ ಪ್ರಭುದೇವರ ಪರೀಕ್ಷೆ ಮಾಡಿದಳು.ಪ್ರಭುದೇವರು ತನ್ನ ಸಂಚಾರದಲ್ಲಿ ತನ್ನ ಶಿಷ್ಯರನ್ನು ಪರೀಕ್ಷೆಗೆಳೆದು ಅವರು ಸನ್ಮಾರ್ಗದಲ್ಲಿ ಸಾಗುವಂತೆ ಮಾಡಿದ್ದನು ಆದರೆ ಇಲ್ಲಿ ಶಿಷ್ಯಳಿಂದ ಗುರುವಿನ ಪರೀಕ್ಷೆ ನಡೆಯಿತು. ಪ್ರಭುದೇವರ ಪ್ರತಿಮಾತಿಗೂ ಮುಕ್ತಾಯಕ್ಕ ವಚನಗಳ ಮೂಲಕ ವಾದಿಸಿ ತನ್ನ ಸಂಶಯವನ್ನು ಪರಿಹರಿಸಿಕೊಂಡಳು. ಆಗ ಆಕೆಗೆ ಜ್ಞಾನೋದಯವಾಯಿತು. ಆಗಲೇ ಪ್ರಭುದೇವರ ಮಹತಿ ಮುಕ್ತಾಯಕ್ಕನಿಗಾಯಿತು.

ಅಕ್ಕಮಹಾದೇವಿಯ ಬಗೆಗಂತೂ ಎಲ್ಲರಿಗೂ ತಿಳಿದಿದೆ. ಅವಳ ಜೀವನ ಸ್ತ್ರೀ ಸ್ವಾತಂತ್ರ್ಯ ಸಾಧನೆಯ ಪರಮಾರ್ಥ ಸಾಧನೆಯ ಮಹಾಪ್ರಕರಣವೆನಿಸಿದೆ. ವಿರಾಗಿಯಾಗಿ ತನ್ನ ತಾನರಿತು ಮಹಾ ಜ್ಞಾನಿಯಾದಳು.

"ತನುವಿನೊಳಗಿದ್ದು ತನುವ ಗೆದ್ದಳು, ಮನದೊಳಗಿದ್ದು ಮನವ ಗೆದ್ದಳು, ವಿಷಯದೊಳಗಿದ್ದು ವಿಷಯಂಗಳ ಗೆದ್ದಳು. ಅಂಗಸಂಗವ ತೊರೆದು ಭವವ ಗೆದ್ದಳು. ಕೂಡಲ ಚೆನ್ನ ಸಂಗಯ್ಯನ ಹೃದಯ ಕಮಲವ ಬಗಿದು ಹೊಕ್ಕು ನಿಜಪದವಿಯನೈದಿದ ಮಹದೇವಿಯಕ್ಕನ ಪಾದಕ್ಕೆ ನಮೋ ನಮೋ" ಎಂದು ಚೆನ್ನಬಸವಣ್ಣನವರು ಅಕ್ಕನ ಬಗೆಗೆ ಹೇಳಿದ್ದಾರೆ

ಈ ರೀತಿ ಇವರಲ್ಲದೆ ಇನ್ನೂ ಕೆಲವು ಶಿವಶರಣೆಯರು ಮಹಾಜ್ಞಾನಿಗಳಾಗಿ ಬೆಳಗಿದರು. ಸ್ತ್ರೀ ಮಾಯೆ, ಗಂಡನದೆ ತೊತ್ತು, ಭೋಗ ಸಾಮಗ್ರಿಯಾಗಿರ ಜ್ಞಾನ ಮಾರ್ಗದಲ್ಲಿ ದಾರಿದೀಪಳಾಗಬಲ್ಲ ಮಹಾಸತಿ ಎಂದು ವಚನ ಸಾಹಿತ್ಯ ತಿಳಿಸುತ್ತದೆ. ಸತಿಪತಿಗಳಿಬ್ಬರ ಭಕ್ತಿ ಶಿವನಿಗೆ ಮೆಚ್ಚು.ಅವರಿಬ್ಬರೂ ಅನ್ಯೋನ್ಯತೆಯಿಂದ ದೇವರನ್ನು ಪೂಜಿಸಿದಾಗಲೇ ಪರಮಾತ್ಮನ ಕೃಪೆ ಎಂದು ವಚನ ಸಾಹಿತ್ಯ ತಿಳಿಸುತ್ತದೆ.

ಹೆಣ್ಣು—ಗಂಡು ಎಂಬ ಭೇದ ದೇಹದಿಂದಲೇ ಹೊರತು. ಆತ್ಮದಿಂದಲ್ಲ ಅದನ್ನೇ ದೇವರ ದಾಸಿಮಯ್ಯನು "ಮೊಲೆ ಮುಡಿ ಬಂದರೆ ಹೆಣ್ಣೆಂಬರು ಗಡ್ಡ ಮೀಸೆ ಬಂದರೆ ಗಂಡೆಂಬರು ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥ" ಎಂದು ನುಡಿದಿದ್ದಾನೆ. ಆದ್ದರಿಂದ ಸ್ವಸ್ವರೂಪ ಜ್ಞಾನದಿಂದ ಸ್ತ್ರೀಗೂ ಮೋಕ್ಷ ದೊರೆಯಬಲ್ಲದು

ವೀರಶೈವ

ಬಸವಾದಿ ಶರಣರ ಮಾರ್ಗ

ಲೇ : ಶ್ರೀ ಶಿವಾನಂದಸ್ವಾಮಿ ಗವಿಮಠ ತೆಗ್ಗಿಹಳ್ಳಿ

(ಹಿಂದಿನ ಸಂಚಿಕೆಯಿಂದ ಬಂದುದು)

ಕಾಯಕವು ಸತ್ಯ ಶುದ್ಧವಾಗಿರಬೇಕು. ಪುರುಷಾರ್ಥವ ಗಿರುವದು ಅಂದರೆ ತನು, ಮನ, ಧನ ಸಂಪಾದಿಸುವದು ಹಾಗು ಅವುಗಳನ್ನು ಗುರು ಲಿಂಗ, ಜಂಗಮಕ್ಕೆ ಅಂದರೆ ಲೋಕಸೇವೆಗೆ ಸಮರ್ಪಿಸುವುದೇ ಧರ್ಮದ ಸಿದ್ಧಾಂತವಾಗಿದೆ

ಸಕಲದರಲ್ಲಿಯೂ ಒಳ್ಳೇದನ್ನೇ ಕಾಣುವದೇ ಶಿವಾನುಭವ (ಆಧ್ಯಾತ್ಮ) ದೃಷ್ಟಿಯ ಲಕ್ಷಣವು ಅದೇ ಪರಿಪೂರ್ಣ ದೃಷ್ಟಿಯು. ಪರಮ ದೃಷ್ಟಿಯು. ಅಂತಹ ದೃಷ್ಟಿಯು ಜನ್ಮಾಂತರಗಳ ಪೂರ್ವ ಪುಣ್ಯ ಪ್ರಭಾವದಿಂದಲೇ ಪ್ರಾಪ್ತವಾಗಬಲ್ಲದು. ಶಿವಾನುಭವ ತತ್ವದರ್ಶಿಗಳು ಯಾವಾಗಲೂ ಆನಂದಭರಿತರಾಗಿರುವ ಉದ್ದೇಶವೇನಂದರೆ? ಅವರಿಗೆ ಎಲ್ಲ ಘಟನೆಗಳು ಲಾಭದಾಯಕಗಳಾಗಿಯೂ ಎಲ್ಲ ದಿನಮಾನಗಳೂ ಸುಖದಿನಗಳಾಗಿಯೂ ಸಕಲವೂ ಶಿವಸ್ವರೂಪವಾಗಿ ತೋರುವದೇ ಕಾರಣವಾಗಿದೆ ಸಾಮಾನ್ಯವಾಗಿ ಮಾನವನಿಗೆ ನಿತ್ಯ ಜೀವನದಲ್ಲಿ ಕೆಲವು ಅನುಕೂಲವಾಗಿಯೂ, ಕೆಲವು ಪ್ರತಿಕೂಲವಾಗಿಯೂ ಕಾಣುವದಕ್ಕೆ ಶಿವಾನುಭವ (ಆಧ್ಯಾತ್ಮ) ದೃಷ್ಟಿಯ ಅಭಾವವೆಂದೇ ಹೇಳಬಹುದಾಗಿದೆ.

ಲೋಕದಲ್ಲಿ ತೋರತಕ್ಕ ಪ್ರತಿಯೊಂದು ಪದಾರ್ಥವನ್ನು ಯಥಾರ್ಥವಾಗಿ ತಿಳಿದುಕೊಂಡು ಲಿಂಗಭೋಗೋಪಭೋಗಿಯಾಗಿ ಬಂದ ಅನುಭವದಿಂದ ತ್ಯಾಗ ಮಾಡಿ ಯೋಗಸ್ಥನಾಗುವದೇ ಅಂಗನು ಲಿಂಗನಾಗುವ ಗುರಿ. ಭೋಗ, ತ್ಯಾಗ, ಯೋಗಗಳ ಸರಿಯಾದ ಸಮನ್ವಯವು ಜೀವನದಲ್ಲಿ ಅಳವಟ್ಟಾಗ ಜೀವನು ಶಿವನಾಗುವನು ಅರ್ಥಾತ್ ಅಂಗ-ಲಿಂಗ ಸಾಮರಸ್ಯ ಇದನ್ನು ತಿಳಿದು ಆಚರಿಸುವದೇ ಶಿವಾನುಭವ ಸಿದ್ಧಾಂತವಾಗಿದೆ.


ವೇದವು ತಾಯಿ ದೇವರೆಂದು ಸಾರಿದರೆ ವಚನ ಸಾಹಿತ್ಯ ಅದಕ್ಕೂ ಒಂದು ಹೆಜ್ಜೆ ಮುಂದಿರಿಸಿ ಹೆಣ್ಣೇ ದೇವರೆಂದು ತಿಳಿಸಿದೆ. ಅದನ್ನೇ ಕರ್ಮಯೋಗಿ ಸಿದ್ಧರಾಮನ "ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು, ತಾ ಮಾಡಿದ ಹೆಣ್ಣು ತೊಡೆಯನೇರಿತ್ತು. ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು. ತಾ ಮಾಡಿದ ಹೆಣ್ಣು ನಾರಾಯಣನ ಎದೆಯ ಏರಿತ್ತು ಅದು ಕಾರಣ ಹೆಣ್ಣು ಹೆಣ್ಣಲ್ಲ. ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ" ಎಂಬ ವಚನದಲ್ಲಿ ಕಾಣಬಹುದು

ಈ ರೀತಿ ವಚನ ಸಾಹಿತ್ಯದಲ್ಲಿ ಮಹಿಳೆಯ ಪಾತ್ರವೂ ಪ್ರಮುಖವಾಗಿತ್ತು. ಶರಣೆಯ ಮಹಾಜ್ಞಾನ, ಅದಕ್ಕೆ ಹೆಚ್ಚಿನ ಕಳೆಯನ್ನು ತಂದಿತು.

ದೇವರ ನಾಮಸ್ಮರಣೆ

ಸಂತ ವಿನೋಬಾ

ಭಗವಂತನ ಹೆಸರಿನಲ್ಲಿ ಒಂದು ಸ್ವಯಂಭೂ ಶಕ್ತಿಯಿದೆ. ಆದರಿಂದಾಗಿ ನಾಮಸ್ಮರಣೆಯಿಂದ ಪವಾಡವೂ ನಡೆಯುತ್ತದೆ. ಬಹಳ ಪ್ರಾಪ್ತಿಯಿಂದ ನಿಷ್ಕಾಮ ಬುದ್ಧಿಯಿಂದ ಈಶ್ವರಾರ್ಪಣ ವೃತಿಯಿಂದ ನಾವು ಬೇಸಾಯ ಮಾಡಿದರೂ ಅದರಲ್ಲಿ ಏನೋ ನ್ಯೂನತೆ ಉಳಿದುಬಿಡುತ್ತದೆ. ಆದರಿಂದಾಗಿ ಬೆಳೆ ಸರಿಯಾಗಿಬಾರದು ಸಾಧನೆಯಲ್ಲಿ ಕೊರತೆ ಇರಕೂಡದೆಂದು ನಮ್ಮ ಬಯಕೆ. ಬೇಸಾಯ ನಮ್ಮ ಸಾಧನೆ. ಬೆಳೆ ಕೆಟ್ಟರೆ ನಮ್ಮ ಸಾಧನೆಯೇ ಕೆಟ್ಟಿತು ಎನ್ನರು. ಹೀಗೆ ಸಾಧನೆ ಕೆಡದಂತೆ ಮಾಡುತ್ತದೆ ನಾಮಸ್ಮರಣೆ, ಇಷ್ಟು ಕೆಲಸ ಅದರಿಂದ ಆಗುತ್ತದೆ ಇಷ್ಟೇ ಅಲ್ಲ, ನಾಮದಿಂದ ಭೌತಿಕ ಚಮತ್ಕಾರವೂ ಸಾಧ್ಯ, ಬೆಳೆಯೂ ಪೂರ್ತಿ ಸಿಗಬಹುದು. ಇದು ಶ್ರದ್ಧೆಯ ಮಾತು ನಾವು ನಾಮಸ್ಮರಣೆ ಮಾಡುತ್ತ ಕೆಲಸ ಮಾಡಿದರೆ; ಕೆಲಸದ ಒಳಗಿನ ಹೊರಗಿನ ಎಲ್ಲಾ ಕೊರತೆಗಳನ್ನೂ ಆ ನಾಮ ಪೂರ್ತಿಮಾಡುತ್ತದೆ. ಹರಿನಾಮದ ಪ್ರತಾಪದಿಂದ ಈ ಚಮತ್ಕಾರ ನಡೆಯಬಲ್ಲದು. ಹರಿನಾಮದಿಂದ ಎರಡೂ ಬಗೆಯ ಸಾದ್ಗುಣ್ಯ (ಒಳಗಿನ ಹೊರಗಿನ ಸಾದ್ಗುಣ್ಯ)ಗಳೂ ಬರುತ್ತವೆ ಕರ್ಮವಿಪಾಕದ ಪ್ರಕ್ರಿಯೆಯಿಂದ ನ್ಯೂನತೆ ಪೂರ್ತಿಯಾಗಬಲ್ಲದೆಂಬ ಈ ಆಶ್ವಾಸನ ವಸ್ತು ಯಾವ ಕರ್ಮಯೋಗಿಯೂ ಕೊಡಲಾರ. ಕರ್ಮ ವಿಪಾಕವಾದೀತೆಂದು ಅವನು ಹೇಳುತ್ತಾನೆ.



ಬಿತ್ತಿದ್ದನ್ನು ಬೆಳೆದುಕೊ ಎನ್ನುತ್ತದೆ. ಕರ್ಮ ವಿಪಾಕ, ಬೇವನ್ನು ನೆಟ್ಟು ಮಾವನ್ನು ಪಡೆಯಲಾಗದು. ಬೇವೇ ಬೆಳೆದೀತು. ಬೇವನ್ನು ಬಿತ್ತಿದರೂ ಮಾವು ಬೆಳೆಯದು ಆದರೆ ಕರ್ಮವಿಪಾಕವನ್ನು ಖಂಡಿಸಿ ಹಾಕುವ ಯಾವುದೋ ಒಂದು ವಸ್ತು ಭಕ್ತಿಯೋಗದಲ್ಲಿದೆ. ಇದರ ಅನುಭವ ಭಕ್ತಿಮಾರ್ಗದಲ್ಲಿ ಆಗುತ್ತದೆ. ಕಡೆಯಲ್ಲಿ ಎಲ್ಲವನ್ನು ಮಾಡುವವನೂ ಈಶ್ವರನೇ. ನೀವು ಅಲ್ಪಸ್ವಲ್ಪ ಪ್ರಯತ್ನ ಮಾಡುತ್ತೀರಿ.

ಆದರಲ್ಲಿ ಎಷ್ಟೋ ಕೊರತೆಯಿರುತ್ತದೆ. ಆ ಕೊರತೆಯನ್ನು ಭಗವಂತನೇ ಪೂರ್ತಿ ಮಾಡುತ್ತಾನೆ. ನಾಮಸ್ಮರಣೆಯಲ್ಲಿ ಈ ಶೃದ್ಧೆ ಇದೆ.

ಮಾಯೆ

ನೀರಿನ ಮೇಲಿರುವ ಪಾಚಿಯನ್ನು ನೀವು ನೂಕಿದರೆ ಪುನಃ ಅದು ತನ್ನ ಸ್ಥಳಕ್ಕೆ ಬರುವದು. ಇದರಂತೆಯೇ ನೀವು ಮಾಯೆಯನ್ನು ನೂಕಿದರೆ ಸ್ವಲ್ಪಕಾಲದಲ್ಲಿ ಪುನಃ ಅದು ಬರುವದು ಆದರೆ ಒಂದು ತೇಲುವ ಬೊಂಬನ್ನು ತಡೆಗಟ್ಟುವದರಿಂದ ಅದು ಬರದಂತೆ ಮಾಡುವಂತೆ; ಜ್ಞಾನ ಮತ್ತು ಭಕ್ತಿಯಿಂದ ಪುನಃ ಮಾಯೆ ನಮ್ಮನ್ನು ಆವರಿಸಿಕೊಳ್ಳದಂತೆ ಮಾಡಿಕೊಳ್ಳಬಹುದು. ಇಂಥ ಅಡಚಣೆಯನ್ನು ದಾಟಿ ಮಾಯೆ ಬರಲಾರದು. ಆಗ ಸಚ್ಚಿದಾನಂದ ಒಂದೇ ಗೋಚರಿಸುವದು.

ಸಾಧನ

ಕಂಬವನ್ನು ಹಿಡಿದುಕೊಂಡು ಸುತ್ತಲೂ ಹುಡುಗನು ವೇಗವಾಗಿ ಸುತ್ತುತ್ತಾನೆ ಸುತ್ತುವಾಗ ಅವನ ಗುರಿಯೆಲ್ಲ ಕಂಬದ ಮೇಲೆ ಇದೆ ಕಂಬವನ್ನು ಅವನು ಎಲ್ಲಿಯವರೆಗೆ ಭದ್ರವಾಗಿ ಹಿಡಿದುಕೊಂಡಿರುವನೊ ಅಲ್ಲಿಯವರೆಗೂ ಅವನು ಬೀಳುವದಿಲ್ಲವೆಂದೂ, ಅವನು ಕಂಬವನ್ನು ಬಿಟ್ಟ ತಕ್ಷಣವೇ ತಾನು ಬಿದ್ದು ಬಿಡುವನೆಂದೂ, ಅವನಿಗೆ ಚೆನ್ನಾಗಿ ಗೊತ್ತಿದೆ. ಅದರಂತೆಯೆ ಮನಸ್ಸನ್ನೂ ದೇವರಮೇಲೆ ಯಾವಾಗಲೂ

ಅಂಬಿಗ

ಹೊಳೆಯ ದಾಟಿಸೊ ಅಂಬಿಗರಣ್ಣಾ।
ಕಳೆವಿಸ ಜರಿಯನು ತಿಳವವನೀನು ॥ಪ॥

ಆಳವಿಲ್ಲದ ನೀರೊಳ್ ತೇಲುವ
ಹರಿಗೋಲು।
ಗಾಳಿಗೊಯಾದಡಪಂತೆ ಪಾಲಬೀಲ
ಲೋಲನಾದ ॥೧॥

ಡೊಂಬರಗಣಿಯಂಥ।
ಲಂಬಕೋಲನು ಹಿಡಿದು।
ಗಂಭೀರನ ತೆರದಿತುಂಬಿ
ರಂಬಿ ಕಾಂಬಿ ಜಲದಿ ॥೨॥

ಧರೆಯೊಳು ಹುಬ್ಬಳಿ ಶಹರ ಆರೂಢರ
ಆಗರ ಗುರುನದಿ ನಂದೀಶ್ವರ
ತೋರಿದಾರಿ ಹರಿಗೋಲ ಹೆಸರ ॥೩॥

ನಿಲ್ಲಿಸಿ ನಿಮ್ಮ ಪ್ರಪಂಚದ ಕೆಲಸಗಳನ್ನು ಮಾಡಿನರೆ ಎಲ್ಲಾ ಅಪಾಯುಗಳಿಂದಲೂ ಪಾರಾಗುವಿರಿ.

ಸಂಗ್ರಾಹಕರು–
ಕು, ಕಸ್ತೂರಿಬಾಯಿ ಭದ್ರಾಪೂರ
ಹುಬ್ಬಳ್ಳಿ

ಪ್ರೇಮ

ಜಗತ್ತಿನಲ್ಲಿ ನಿಜವಾದ ಪ್ರೇಮ ವಸ್ತು ಯಾವದು ಎಂಬುದನ್ನು ವಿಚಾರಿಸಿದರೆ, ಆತ್ಮನು ಅತಿ ಪ್ರಿಯನೆಂಬುದು ಶ್ರುತಿ, ಯುಕ್ತಿ, ಅನುಭವಗಳಿಂದ ಗೋಚರವಾಗುವದು. ತಾನು ಎಂದಿಗೂ ಇಲ್ಲದೆ ಹೋಗಬಾರದೆಂದೂ ಯಾವಾಗಲೂ ಇರಬೇಕೆಂದೂ ಎಲ್ಲ ಪ್ರಾಣಿಗಳೂ ಬಯಸುತ್ತವೆ. ಹೀಗೆ ಆತ್ಮನಲ್ಲಿರುವದೇ ನಿಜವಾದ ರತಿ.

ಕೆಲವು ದುರ್ಬಲ ಶ್ರುತಿಗಳು, 'ಮಕ್ಕಳಿಲ್ಲದವರಿಗೆ ಮೋಕ್ಷವಿಲ್ಲ' ವೆಂಬದನು ಹೇಳಿವೆ. ಮಗನೇ ಮುಖ್ಯವಾದ ಆತ್ಮನೆಂದೂ; ತನ್ನ ಆತ್ಮವು ಮುಖ್ಯವಲ್ಲವೆಂದೂ ಹೇಳುವುದನ್ನೇ ನಂಬಿ ಈ ಲೋಕದಲ್ಲಿ ಆಗಬೇಕಾದ ಎಲ್ಲ ಸುಖವನ್ನು ಕೂಡಾ ಮಗನಿಂದಲೇ ಗಳಿಸಬೇಕೇ ಹೊರತು ಬೇರೆ ಯಾವ ಕರ್ಮದಿಂದಲೂ ಸಾಧ್ಯವಿಲ್ಲ. ಹೊಲ, ಮನೆ ಮುಂತಾದ ಎಷ್ಟೋ ಸುಖ ಸಾಧನೆಗಳಿದ್ದರೂ ಅವೆಲ್ಲ ಮಕ್ಕಳಿಲ್ಲದವರಿಗೆ ವ್ಯರ್ಥವೆಂದು ಭಾವಿಸುವರು. ಈ ರೀತಿ ಜಗತ್ತಿನಲ್ಲಿ ಶಾಸ್ತ್ರದ ಸಂಸ್ಕಾರವಿಲ್ಲದ ಸಾಮಾನ್ಯರಾದ ಬಹುಜನರು ಕೂಡಾ ಮಗನಿಲ್ಲದವನಿಗೆ ಪರಲೋಕ ಗತಿಗಳಿಲ್ಲವೆಂದು ಪುರಾಣಗಳಲ್ಲಿಯ ಕಥೆಗಳನ್ನು ಕೇಳಿ ಅದನ್ನೇ ಮುಖ್ಯವೆಂದು ತಿಳಿದಿರುವರು. ಅವರು ಹಾಗೆ ತಿಳಿದಿರುವದರಿಂದ ತಾವು ಸತ್ತರೂ ಮಕ್ಕಳೇ ಮೊದಲಾದವರು ಸುಖದಿಂದ ಬಾಳಲೆಂದು ಎಷ್ಟೋ ಕಷ್ಟಪಟ್ಟು ಧನ, ಕನಕ, ಹೊಲ, ಮನೆ ಮೊದಲಾದ ವಿಷಯ ಸಂಗ್ರಹ ಮಾಡುವದರಲ್ಲೇ ನಿರತರಾಗುವರು.

ಆದರೆ ಈ ಬಗ್ಗೆ ವಿವೇಚಿಸಬೇಕಾದುದು ಅಗತ್ಯ. ಆತ್ಮನು ಗೌಣಾತ್ಮ, ಮಿಥ್ಯಾತ್ಮ ಮತ್ತು ಮುಖ್ಯಾತ್ಮ ಎಂದು ಮೂರು ಪ್ರಕಾರವಾಗಿರುವದು. "ಈ ಹುಡುಗನು ಬೆಂಕಿ"ಯಾಗಿದ್ದಾನೆ ಎನ್ನುತ್ತೇವೆ. ಆದರೆ ಈ 'ಬೆಂಕಿ'ಯು ಅಡಿಗೆ ಮೊದಲಾದ ಉಪಯೋಗಕ್ಕೆ ಬರುವದಿಲ್ಲ ಆದರೆ ಈ ಹುಡುಗ ಸಿಟ್ಟಿನವನು ಎನ್ನುವುದಕ್ಕೆ ಮಾತ್ರ ಅರ್ಥ ಮಾಡಿಕೊಳ್ಳಬೇಕಾಗುವದು. ಅದೇರೀತಿ ಮಗನು ಹೊಲಮನೆಗಳನ್ನು ಕಾಪಾಡುವ ಯೋಗ್ಯತೆಯುಳ್ಳವನಾದ್ದರಿಂದ ಸಾಯುವ ತಂದೆಯು ಮಗನನ್ನೇ ಅದಕ್ಕೆ ನಿಯಮಿಸುವನು. ಹೀಗೆ ಗೌಣಾತ್ಮನಿಗೆ ಮುಖ್ಯಸ್ಥಾನವನ್ನು ನೈತಿಕಾದಿ ಕೆಲವು ಸಂದರ್ಭಗಳಲ್ಲಿ ಮಾತ್ರ ತೋರಿಸಬೇಕಾಗುತ್ತದೆ.

ಅದೇರೀತಿ ನಾನು ಬಡವನಾಗಿದ್ದೇನೆ ಒಳ್ಳೇ ಪೌಷ್ಟಿಕ ಔಷಧ ತೆಗೆದುಕೊಂಡು ಮೈದುಂಬುವಂತೆ ಮಾಡಿಕೊಳ್ಳಬೇಕೆಂದು ಭಾವಿಸುತ್ತಾನೆ. ಆದರೆ ಮಿಥ್ಯವಾದ ನಶ್ವರವಾದ ಶರೀರವನ್ನು ಲಕ್ಷಿಸಿ ತಾನು ಎಂದು ವ್ಯವಹರಿಸುವದು ಮಿಥ್ಯಾತ್ಮವೆನಿಸುವದು. ಆದ್ದರಿಂದ ಈ ಬಗೆಯ ವ್ಯವಹಾರದಲ್ಲಿ ಮಾತ್ರ ದೇಹವೇ ಮುಖ್ಯವಾದ ಆತ್ಮವೆನಿಸುವದು. ಉಳಿದ ಯಾವತ್ತೂ ಅಂದರೆ ಮಗ, ಹೊಲ; ಮನೆಗಳೆಲ್ಲಿ ಆದರ ಉಪಯೋಗಕ್ಕೆ ಇತರಕ್ಕವುಗಳಾಗುವವು.

ಅದೇ ಯಾವ ಮಾನವನಲ್ಲಿ 'ದೇಹ ದಂಡನೆಯ ರೂಪವಾದ ತಪಸ್ಸನ್ನು ಮಾಡಿ ಸ್ವರ್ಗವನ್ನು ಪಡೆಯುತ್ತೇನೆ' ಎಂಬುವ ಸಂಕಲ್ಪಗಳಿಂದ ಉತ್ಪನ್ನವಾಗಲು, ಆಗ ಭೋಕ್ತೃತ್ವವನ್ನು ಮುಖ್ಯವಾಗಿ ಹೇಳುವದೇ ಹೊರತು ಸ್ಥೂಲದೇಹ ಮೊದಲಾದವುಗಳನ್ನಲ್ಲ. ಏಕೆಂದರೆ ಸ್ವರ್ಗಲೋಕ ಮೊದಲಾದ ಫಲ–ಪದವಿ ಪಡೆಯಬೇಕೆಂಬಾಯಾದರೆ, ಶರೀರದ ಸುಖಗಳನ್ನೆಲ್ಲ ತೊರೆದು, ಉಪವಾಸಗಳಿಂದ ದೇಹವನ್ನು ದಂಡಿಸುವ ವ್ರತ ನಿಯಮಗಳನ್ನು ಸಾಧಿಸುತ್ತಾನೆ. ಆದ್ದರಿಂದ ದೇಹ ಮೊದಲಾದವುಗಳು ಮುಖ್ಯಾತ್ಮವಾಗಲಿಲ್ಲ.

'ನಾನು ಮುಕ್ತಿಯನ್ನು ಪಡೆಯುತ್ತೇನೆ" ಎಂಬುವ ವ್ಯವಹಾರದಲ್ಲಿ ಜ್ಞಾನರೂಪನಾದ ಆತ್ಮನೇ ಮುಖ್ಯ. ಹೇಗಂದರೆ– ಅದೇ ಪುರುಷನಲ್ಲಿ ಶಾಸ್ತ್ರ ಮತ್ತು ಸದ್ಗುರುಗಳ ಸಹಾಯದಿಂದ ವೇದಾಂತಸಿದ್ಧಾಂತ ಮಹಾವಾಕ್ಯಗಳನ್ನು ವಿಚಾರಮಾಡಿ, ತಾನು ಕರ್ತೃವಾದಾತ್ಮನಲ್ಲವೆಂದೂ; ತನ್ನ ಸ್ವರೂಪವು ಅಕರ್ತೃವಾದ ಸಚ್ಚಿದಾನಂದವೆಂದೂ ಪೂರ್ಣಗ್ರಹಿಸುವನು. ಆಗ ಅವನು ತನ್ನನ್ನು ಅಕರ್ತನೆಂದೂ, ಅವಿಕಾರಿ ಎಂದೂ, ತಿಳಿಯುವನು. ಮತ್ತು ಇಹ—ಪರಲೋಕದ ಸುಖಗಳನ್ನು ಗಳಿಸುವ ಯಾವ ವ್ಯವಹಾರಗಳನ್ನೂ ಎಂದೂ ಮಾಡನು. ಹೀಗೆ ಒಂದೊಂದು ಸ್ಥಾನಮಾನದ ಮೇಲೆ ಒಬ್ಬ ಒಬ್ಬ ಆತ್ಮನಿಗೆ ಗೌಣಾತ್ಮ ಮಿಥ್ಯಾತ್ಮ ಮುಖ್ಯಾತ್ಮಗಳನ್ನು ಕೊಡಲಾಗಿದೆ ಹೇಗೆ ಒಕ್ಕಲತನಕ್ಕೆ ಒಕ್ಕಲಿಗನೇ ಮುಖ್ಯನು. ಕಂಬಾರ–ಕುಂಬಾರ ಬೇರೆ ಬೇರೆ ಉದ್ಯೋಗ ವ್ಯವಹಾರಕ್ಕೆ ಅವರವರೇ ಮುಖ್ಯರು. ಯಾವ ಯಾವ ವ್ಯವಹಾರದಲ್ಲಿ ಯಾವ ಯಾವ ಆತ್ಮನು ಮುಖ್ಯವೋ ಆಯಾ ವ್ಯವಹಾರದಲ್ಲಿ ಅವನ ಮೇಲೆಯೇ ಅತಿಶಯವಾದ ಪ್ರೀತಿ ಇರುವದು. ಅವನಿಗೆ ಉಪಕಾರಕರಾದ ಉಳಿದವರ ಮೇಲೆ ಸಾಮಾನ್ಯವಾದ ಪ್ರೀತಿ ಇರುವದು. ತನ್ನ ಮಗನ ಗೆಳೆಯನ ಮೇಲೆ ಪ್ರೀತಿ ಇರುವದು ಸಾಮಾನ್ಯ. ಆದರೆ ತನ್ನ ಮಗನ ಮೇಲೆ ವಿಶೇಷ ಪ್ರೀತಿ ಇರುವದೂ ಅದೇರೀತಿ, ನಿಜವಾದ ಪ್ರೀತಿಯನ್ನು ಹೆಂಡರು—ಮಕ್ಕಳು—ಭೂಮಿ—ಸೀಮಿಗಳಾದಿ ಈ ವಿಷಯಗಳ ಮೇಲೆ ಬಲ್ಲವರು ಎಂದೂ ಮಾಡರು.

ಮಾನವನು ತನಗೆ ಉಪಕಾರವಾದ ವಸ್ತುಗಳ ಮೇಲೆ ಪ್ರೀತಿ, ಅಪಕಾರಕ ವಸ್ತುಗಳ ಮೇಲೆ ದ್ವೇಷ ಮಾಡುವನು. "ಯಾರಿಗೆ ಯಾರಿಲ್ಲ ಎರವಿನ ಸಂಸಾರ" ಎಂದು ಸಂತರು ಹೇಳುವಹಾಗೆ ನಿಜವಾದ ಪ್ರೀತಿಯ ವಸ್ತುಗಳು ಯಾವವೂ ಇರುವದಿಲ್ಲ. ಹೆಂಡತಿ, ಮಗ, ಹಣ ಮತ್ತು ದೇಹ ಮೊದಲಾದವುಗಳಿಗಿಂತಲೂ ಒಳಗಿರುವ ಆತ್ಮ, ಎಲ್ಲಕ್ಕಿಂತಲೂ ಅತಿಪ್ರಿಯವಾಗಿರುವದು. ಹೀಗೆ ಶ್ರುತಿ; ಯುಕ್ತಿ ಪ್ರಮಾಣಗಳಿಂದ ಮಹಾತ್ಮರು ತೋರಿಸಿಕೊಟ್ಟಿದ್ದಾರೆ ವಿಚಾರ ದೃಷ್ಟಿಯಿಂದ ಒಳಗಿರುವ ಆನಂದರೂಪವಾದ ಸಾಕ್ಷಿಯೋ ಮುಖ್ಯಾತ್ಮನು. ಅವನೇ ಅತ್ಯಂತ ಪ್ರೇಮಾಸ್ಪದನೂ ನಿತ್ಯನೂ ಆಗಿದ್ದಾನೆ. - ಸಂ'

ವಚನ ಸಾಹಿತ್ಯದಲ್ಲಿ ಶಬ್ದಾಲಂಕಾರಗಳು

ಲೇಖಕರು:— ಎಚ್. ಗಂಗಾಧರ. (ಬಿ. ಎ.) ಬಳಗಾನೂರ.

(ಶ್ರಿ ಬಸವಾದಿ ಶಿವಶರಣರೂ ರಚಿಸಿದ ವಚನಗಳು ಕನ್ನಡವಾಗ್ದೇವಿಯ ಮಕುಟಮಣಿ ಮಾಲಿಕೆಗಳಾಗಿ ಶೋಭಿಸುತ್ತವೆ. ಆ ವಚನಗಳು ಅಭ್ಯಸಿಸಲು ಸುಲಭವಾಗುವಹಾಗೆ, ರಚಿಸಲು ಸುಲಭಸಾಧ್ಯವಲ್ಲ. ನಡೆಯೇಪಾವನ ನುಡಿಯುಆಗಮುವಾಗಿ ಅಂತರಾಳದಿಂದ ಹೊರ ಹೊಮ್ಮಿದ ಅನುಪಮ ಅನುಭವದ ಉಸಿರು ಅವುಗಳ ಸಾಹಿತ್ಯ ಗುಣ ಮೌಲ್ಯವನ್ನಿಲ್ಲಿ ಈ ಲೇಖಕರು ಎತ್ತಿ ತೋರಿಸಿದ್ದಾರೆ. —ಸಂ)

"ರಸಾತ್ಮಕಂ ವಾಕ್ಯಂಕಾವ್ಯಂ" ಎಂಬ ನಾತಿನಂತೆ ಕಾವ್ಯಕ್ಕೆ ರಸವೇ ಪ್ರಧಾನವೆಂದುಗಣಿಸಿದರೂ ಕಾವ್ಯನದಲ್ಲಿ ಅಲಂಕಾರಗಳಿಗೂ ಒಂದು ಮಹತ್ವದ ಸ್ಥಾನವಿದೆಯೆಂಬುದನ್ನು ಮಾತ್ರ ನಾವು ಮರೆಯುವಂತಿಲ್ಲ ಮಹಕವಿಕಾಳಿದಾಸನು ಕೂಡಾತನ್ನ ಸಂಸ್ಕೃತ ಕಾವ್ಯಗಳಲ್ಲಿ ಅಲಂಕಾರಗಳಿಗೆ ಆಸ್ಪದವಿತ್ತಿದ್ದಾನೆ. ಅದರಂತೆ ನಮ್ಮ ಕನ್ನಡ ಕವಿಗಳೂ ಅಲಂಕಾರಗಳನ್ನುಳಿದು ಕಾವ್ಯಗಳನ್ನುವಿರಚಿಸಿಲ್ಲ. ವೀರಶೈವಮಹಾಕವಿಯಾದ ರಾಘವಾಂಕನು ತನ್ನ ಒಂದು ಕಾವ್ಯದಲ್ಲಿ ಅಲಂಕಾರವೇ ಕಾವ್ಯಕನ್ನಿಕೆಗೆ ತೊಡಿಗೆ ಎಂಬುದುಲ್ಲೇಖಿಸಿದ್ದನೆ ಅಂದನೇಲೆಕಾವ್ಯ ಶ್ರೀಯನ್ನು ಶೃಂಗರಿಸುವ ಬೆಡಗಿನ ಒಡವೆಗಳೆಂದರೆ ಅಲಂಕಾರಗಳೆಂದೇ ಹೇಳಬೇಕು ಹಿರಿಯ ಕಾವ್ಯವನ್ನು ವಿರಚಿಸಬೇಕೆಂಬ ಹಿರಿಯಾಶೆಯುಳ್ಳ ಯಾವ ಕವಿಯು ಕುಂಚದಂಚಿನಿಂದಲೂ ಈ ಅಲಂಕಾರಗಳನ್ನು ಮುಚ್ಚಿಕೊಂಡಿಲ್ಲ ಅಲಂಕಾರಗಳು ನಕ್ಷತ್ರಗಳಿಲ್ಲದ ಹಿಮಾಂಶು ಮಂಡಲವಿಲ್ಲದ ಮಂಡಲದಂತೆ ಹಿತಮಿತವಾಗಿ ಬಳಸಿದ ಅಲಂಕಾರಗಳೇ ಕವಿಯ ಕಾವ್ಯಕ್ಕೆಕಳೆ ತಂದುಕೊಡುವವರಲ್ಲಿ ಸಂದೇಹವಿಲ್ಲ ಹೀಗೆ ಸರ್ವಕವಿಗಳ ಹೃದಯವನ್ನು ಸೂರೆಗೊಂಡ ಈ ಅಲಂಕಾರವಚನ ಸಾಹಿತ್ಯವು ಗದ್ಯರೂಪ ಸಾಹಿತ್ಯದಲ್ಲಿದೆ. ಗದ್ಯ ಸಾಹಿತ್ಯದಲ್ಲಿ ಅತಿಯಾದ ಕಾವ್ಯ ಗುಣಗಳನ್ನು ಹುಡುಕಲು ಬರುವಂತಿಲ್ಲ. ಶ್ರೇಷ್ಟಕಾವ್ಯ ಗಳನ್ನು ಸೃಷ್ಟಿಸಿ ರಾಜಮನ್ನಣೆಯನ್ನು ಪಡೆಯಬೇಕೆಂಬ ಉದ್ದೇಶವು ನಮ್ಮ ವಚನಕಾರರಲ್ಲಿ ಇದ್ದಂತೆ ಕಂಡು ಬರುವದಿಲ್ಲ. ಅವರು ಕೇವಲ ಧರ್ಮಜಾಗ್ರತಿಗಾಗಿ ಸಮಾಜೋದ್ಧಾರಕ್ಕಾಗಿ ವಚನ ಸಾಹಿತ್ಯದ ಸೃಷ್ಟಿಯನ್ನು ಮಾಡಿದರು. ಆದರೆ ಕವಿಹೃದಯರಾದ ನಮ್ಮ ವಚನಕಾರರ ವಚಗಳಲ್ಲಿ ಸಹಜವಾಗಿಯೇ ಕಾವ್ಯ ಗುಣಗಳು ತಲೆದೋರಿಕೊಂಡಿವೆ. ತಮ್ಮ ವಚನಗಳಲ್ಲಿಯ ವಿಚಾರಗಳು ಸ್ಪಷ್ಟವಾಗಿ ಜನಸಾಮಾನ್ಯರಿಗೆವೇದ್ಯವಾಗಲೆಂದು ಅಲ್ಲಲ್ಲಿ ಹದವರಿತು ಕೆಲವು ಅಲಂಕಾರಗಳನ್ನು ಆವ್ಹಾನಿಸಿದ್ದಾರೆ. ಹೆಚ್ಚಿನ ಹುಚ್ಚು ಸೌಂದರ್ಯವಿಲ್ಲದಿದ್ದರೂ ಅರ್ಥಮಾತ್ರ ಸುಸ್ಪಷ್ಟವಾಗಿದೆ ಸ್ವಯಂವರಕ್ಕೆ ಅಣಿಯಾದ ಅರಸುಗುವರಿಯಂತೆ ಅನೇಕ ಚಿನ್ನದನ್ನದ ಅಲಂಕಾರಗಳಿಂದ ಶೋಭಿತವಾಗದಿದ್ದರೂ

ನಮ್ಮ ವಚನ ವಧುವು ಮುಸಿ ಕನ್ನಿಕೆಯಂತೆ ತನ್ನ ಸಹಜ ಸೌಂದರ್ಯದಿಂದ ನಿರಾಭರಣ ಸುಂದರಿಯಾಗಿ ಸರ್ವರಿದೆಯನ್ನೂ ಸೆರೆಹಿಡಿದಿದ್ದಾಳೆ ಅಂತಹ ಸಮಯಕ್ಕೆ ತಕ್ಕಂತೆ ಅರ್ಥವ್ಯರ್ಥವಾಗದಂತೆ ಅಲಂಕಾರಗಳನ್ನೂ ಉಪಯೋಗಿಸುವದರಲ್ಲಿ ನಮ್ಮ ವಚನಕಾರರ ಕುಂಚವು ಕೌಶಲ್ಯದೋರಿದೆ.

ವ್ಯಾಕರಣಕಾರರ ಅಭಿಪ್ರಾಯದಂತೆ ಅಲಂಕಾರಗಳಲ್ಲಿ ಮುಖ್ಯವಾಗಿ ಎರಡು ವಿಧವಾಗಿವೆ. ಒಂದು ಶಬ್ದಾಲಂಕಾರ ಎರಡು ಅರ್ಥಾಲಂಕಾರ ಶಬ್ದ ಚಮತ್ಕೃತಿ ಇರುವಲ್ಲಿ ಶಬ್ದಾಲಂಕಾರವೆಂದು ಅರ್ಥ ಚಮತ್ಕೃತಿ ಇರುವಲ್ಲಿ ಅರ್ಥಾಲಂಕಾರವೆಂದೂ ಹೇಳುತ್ತಾರೆ ಈ ಉಭಯ ಚಮತ್ಕೃತಿಗಳು ನಮ್ಮ ವಚನ ಸಾಹಿತ್ಯದಲ್ಲಿ ಕಾಣುಬರುತ್ತವೆ. ಆದರೂ ಶಬ್ಧಾಲಂಕಾರಗಳು ಮಾತ್ರ ಒಳ್ಳೇ ಜಾಣ್ಮೆಯಿಂದ ಉಪಯೋಗಿಸಲ್ಪಟ್ಟವೆ ಈ ಉಪಯೋಗಿಸಿದ ಶಬ್ದ ಚಮತ್ಕೃತಿಗಳು ಭಾಷೆಯನ್ನೂ ಸುಂದರ ಗೊಳಿಸಿದವು. ಒಳ್ಳೆಯ ಆಕರ್ಷಕವಾಗಿ ಮಾರ್ಪಡಿಸಿ ಸರ್ವರ ದೃಷ್ಟಿಯನ್ನೂ ಇತ್ತ ಸೆಳೆದವು ಶಬ್ದಾಲಂಕಾರಗಳು ಸ್ಮೃತಿ ಸಹಾಯಕಗಳಾಗಿವೆ. ಯಮಕ ಅನುಪ್ರಾಸ ಮುಂತಾದ ಅಲಂಕಾರಗಳಲ್ಲಿ ಒಂದಕ್ಕೊಂದು ಹೋಲಿಕೆಯುಳ್ಳ ಧ್ವನಿಗಳು ಇರುವದರಿಂದ ಅವು ನೆನಪಿಡಲು ಸುಲಭ ಸಾಧ್ಯವಾಗುತ್ತವೆ. ಯಮಕಾದಿ ಅಲಂಕಾರಗಳು ಹೆಚ್ಚಾಗಿ ಕಾವ್ಯದಲ್ಲಿ ಸಹಜವಾಗಿಯೇ ಬಳಸಲ್ಪಟ್ಟಿರುತ್ತವೆ. ಅಂತಹ ಅಲಂಕಾರಗಳನ್ನೂ ತಿಳಿದುಕೊಳ್ಳುವದೂ, ಅತಿ ಸುಲಭವಾದರೂ ಇಂತಹ ಅಲಂಕಾರಗಳು ವಚನ ಸಾಹಿತ್ಯದಲ್ಲಿ ಹೇಗೆ ಉಪಯೋಗಿಸಲ್ಪಟ್ಟವೆಯೆಂಬುದನ್ನು ನಾವು ಕಂಡು ಕೊಳ್ಳಬಹುದು

ವಚನಗಳ ಗದ್ಯರೂಪದಲ್ಲಿ ರಚನೆಗೊಂಡಿದ್ದರೂ ಅವುಗಳನ್ನು ವಿಶಿಷ್ಟ ರೀತಿಯಿಂದ ವಿಭಾಗಿಸಿದರೆ, ಅವುಗಳಲ್ಲಿರುವ ಸಮಪದಗಳ ಅಥವಾ ಸಮಾಕ್ಷರಗಳ ನಿಯತವಾದ ಆವೃತ್ತಿಯನ್ನು ನಾವು ಹುಡುಕಿ ತೆಗೆಯಬಹುದು ಕಾವ್ಯದಲ್ಲಿಯ ಭಾವದರ್ಶನವನ್ನು ಆದಂತೆ ಗಮನವಿಟ್ಟ ನಮ್ಮ ವಚನಕಾರರ ವಚನಗಳಲ್ಲಿ ಶಬ್ದಾಲಂಕಾರಗಳು ಎಂತು ಬಳಕೆಯಾಗಿವೆ ಎನ್ನುವದನ್ನು ನಾವು ಕೆಳಗಿನ ವಚನಗಳಿಂದ ಮನಗಾಣಬಹುದು.

ನೀನೊಲಿದರೆ ಕೊರಡು ಕೊನರುವದಯ್ಯ
ನೀನೊಲಿದರೆ ಬರುಡು ಹಯನಹುದಯ್ಯ
ನೀನೊಲಿದರೆ ವಿಷವು ಅಮೃತವಹುದಯ್ಯ
ನೀನೊಲಿದರೆ ಸಕಲ ಪಡಿಪದಾರ್ಥವು ಇದರಲ್ಲಿಪ್ಪವು ಕೂಡಲಸಂಗಮದೇವಾ

ಮಹಾತ್ಮಾ ಬಸವಣ್ಣನವರಿಂದ ವಿರಚಿತವಾದ ಈ ವಚನವನ್ನು ಚೌಪದಿಯನ್ನಾಗಿ ವಿಭಾಗಿಸಿ ಪರಿಶೀಲಿಸಿದರೆ ವಚನದ ನಾಲ್ಕು ಪಾದಗಳಲ್ಲಿಯೂ "ನೀನೊಲಿದರೆ" ಎಂಬ ಒಂದೇ ತರದ ಪದವು ಆವೃತ್ತವಾದದ್ದು ಕಂಡುಬರುತ್ತದೆ ಮೊದಲನೆಯ ತ್ರಿಪಾದದಂತ್ಯದಲ್ಲಿಯೂ

ಅಯ್ಯ ಎಂಬ ಪದವು ಒಂದೇ ಬಗೆಯಾಗಿವೆ

ಅದೇ ತೆರನಾಗಿ ಪ್ರಥಮ ಹಾಗೂ ದ್ವಿತೀಯ ಪಾದಗಳಲ್ಲಿ "ಕೊರಡು, "ಎರಡು" ಎಂದು ಪ್ರಾಸವಿರುವದನ್ನೂ ನಾವು ಗಮನಿಸಬಹುದು ಈ ಬಗೆಯಾಗಿ ಸಮಪದಗಳ ಹಾಗೂ ಸಮಾಕ್ಷರಗಳ ಆವೃತ್ತಿಯು ಈ ವಚನಕ್ಕೆ ಅಲಂಕಾರ ರೂಪವಾಗಿದೆ. ಶಬ್ದ ಚಮತ್ಕೃತಿಯಿಂದ ಕೂಡಿದ ಈ ವಚನದಲ್ಲಿ ಶಬ್ದಾಲಂಕಾರವನ್ನು ನಾವು ಕಾಣಬಹುದು. ಇದರಂತೆ ಇನ್ನೊಂದು ವಚನವನ್ನು ನಾವು ವಿಂಗಡಿಸಿನೋಡಬಹುದು—

ವಚನದಲ್ಲಿ ನಾಮಾಮೃತ ತುಂಬಿ |
ನಯನದಲ್ಲಿ ಮೂರುತಿ ತುಂಬಿ ||
ಮನದಲ್ಲಿ ನಿಮ್ಮ ನೆನಹು ತುಂಬಿ |
ಕಿವಿಯಲ್ಲಿ ನಿಮ್ಮ ಕೀರ್ತಿಯ ತುಂಬಿ ||
ಕೂಡಲ ಸಂಗಮದೇವಾ ನಿಮ್ಮ
ಚರಣ ಕಮಲದೊಳಗಾನು ತುಂಬಿ ||

ಇಲ್ಲಿ ಪ್ರಥಮ ನಾಲ್ಕು ಸಾಲುಗಳ ಕೊನೆಯಲ್ಲೂ "ತುಂಬಿ" ಎಂಬ ಒಂದೇ ಪದವು ಪದೇಪದೇ ಬಂದಿದೆ. ಮೊದಲಿನ ಮೂರು ಪಾದಗಳ ಆದಿಪದಗಳಾದ "ವಚನ" ನಯನ" ಮನ"ವೆಂಬ ಮೃದು ಹಾಗೂ ಲಲಿತ ಪದಗಳಿದ್ದು "ನ" ಎಂಬಾಕ್ಷರದ ಆವೃತ್ತಿ ಇರುವದು ನಾಲ್ಕನೆಯ ಪಾದಗಳಲ್ಲಿ ಕಿವಿ, ಕೀರ್ತಿ, ಕೊನೆಯ ಪಾದದಲ್ಲಿ "ತುಂಬಿ" ಎಂಬ ಶಬ್ದಗಳಲ್ಲಿ ಸಮಾಕ್ಷರಗಳಾವೃತ್ತಿ ಇರುವದು. ಗೋಚರವಾಗುತ್ತದೆ. ಇದೇ ರೀತಿ ಆದಿಪ್ರಾಸ, ಮಧ್ಯ ಹಾಗೂ ಅಂತ್ಯಪ್ರಾಸಗಳುಳ್ಳ ವಚನಗಳು ಸಾಕಷ್ಟಿವೆ. ನಾವು ಇನ್ನೊಂದು ಬಸವಣ್ಣನವರ ವಚನವನ್ನು ವಿವೇಚಿಸಿ ನೋಡಬಹುದು.

ಕರಿಘನ ಅಂಕುಶ ಅರಿದೆನ್ನಬಹುದೇ
ಅಯ್ಯ ?
ಗಿರಿಘನ ವಜ್ರ ಅರಿದೆನ್ನಬಹುದೇ
ಅಯ್ಯ ?
ತಮಂಧಘನ ನಿಮ್ಮ ನೆನಹು
ಅರಿದೆನ್ನಬಹುದೇ ಅಯ್ಯ ?
ಕೂಡಲ ಸಂಗಮದೇವಾ ನಿಮ್ಮ ಕೃಪೆಯು
ಘನವ ನೀವೇ ಬಲ್ಲಿರಿ ||

ಈ ವಚನದಲ್ಲಿ ಪ್ರಾಸ್ತವಾಗಿರುವ ಪ್ರಾಸಗಳನ್ನು ನಾವು ಕಾಣಬಹುದು. ಪ್ರಥಮ ಹಾಗೂ ದ್ವಿತೀಯ ಸಾಲುಗಳಲ್ಲಿಯ ಆದಿ ಪದಗಳಾದ ಕರಿ, ಗಿರಿ, ಅಲ್ಲದೆ ಮೂರು ಸಾಲುಗಳ ಅಂತ್ಯ ಪದವಾದ 'ಅಯ್ಯ" ಎಂಬುದು, ಇಲ್ಲಿ ಸಮಪದಗಳಾಗಿವೆಯಲ್ಲದೆ ಈ ವಚನಕ್ಕೆ ಶುಚಿ-ರುಚಿಗಳನ್ನು ತಂದುಕೊಟ್ಟಿವೆ. ಹೀಗೇ ಈ ವಚನದ ತುಂಬೆಲ್ಲ ಶಬ್ದಗಳ ಚಮತ್ಕಾರವೇ ಸೇರಿರುವದರಿಂದ ಇದು ಶಬ್ದಾಲಂಕಾರವಾಗಿದೆಯೆಂದು ನಾವು ಒಪ್ಪಬಹುದು

ಹೀಗೆ ಒಬ್ಬರ ವಚನಗಳೆಂದೇ ಅಲ್ಲ. ಸಮಸ್ತ ವಚನಕಾರರ ವಚನಗಳಲ್ಲಿ ಈ ತೆರನಾದ ಶಬ್ದಾಲಂಕಾರಗಳನ್ನು ನಾವು ಗಮನಿಸಬಹುದು

ಇನ್ನು ಈ ರೀತಿಯಲ್ಲಿ ಹೆಚ್ಚಾಗಿ ಶಬ್ದಾಲಂಕಾರಗಳು ನಮ್ಮ ಶಿವಶರಣೆ ಮಹಾ

ದೇವಿಯಕ್ಕನ ವಚನಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಅಕ್ಕನು ಬಳಸಿಕೊಂಡ ಶಬ್ದಾಲಂಕಾರಗಳನ್ನು ಇನ್ನಾವ ಉದ್ಧಾಮ ಕವಿಯೂ ಇಷ್ಟು ಸುಂದರ ಬಂಧುರವಾಗಿ ಬಳಸಿಕೊಳ್ಳಲಾರ. ಅದಕ್ಕೆಂದೇ ಅಕ್ಕನ ಬೆಡಗಿನ ವಚನಗಳು 'ಎಲ್ಲರ ಅಕ್ಕರತೆಗೆ ಪಾತ್ರವಾಗಿವೆ' ಅಂತಹ ಅಕ್ಕನ ಒಂದು ವಚನವನ್ನಿಲ್ಲಿ ವಿಮರ್ಶಿಸಿ ನೋಡೋಣ—

ತುಂಬಿದುದು ತುಳುಕದು ನೋಡಾ ।
ನಂಬಿದುದು ಸಂದೇಹಿಸದು ನೋಡಾ॥
ಒಲಿದುದು ಓಸರಿಸದು ನೋಡಾ ।
ನೆರೆಯರಿದುದು ಮರೆಯದು ನೋಡಾ॥
ಚನ್ನಮಲ್ಲಿಕಾರ್ಜುನಯ್ಯ ನೀನೊಲಿದ ಶರಣಂಗೆ ನಿಸ್ಸೀಮ ಸುಖವಯ್ಯ ।

ಕುಂಚಪಾದಗಳಿಂದಾದ ಈ ವಚನದಲ್ಲಿ ಪಂಚಮದಿ ಚರವು ನಾದಿಸಿದೆ. ಒಂದನೆಯ ಹಾಗೂ ಎರಡನೆಯ ಸಾಲಿನಲ್ಲಿ 'ತುಂಬಿದುದು' ನಂಬಿದುದು'ಎಂಬ ಆದಿಪ್ರಾಸವೂ ಚತುಷ್ಪಾದಗಳ ಕೊನೆಯಲ್ಲಿ "ನೋಡಾ" ಎಂಬ ಸಮಶಬ್ದದ ಆವೃತ್ತಿಯಾದದ್ದು ನಮಗೆ ಕಂಡುಬರುತ್ತವೆ. ಹೀಗೆ ಶಬ್ದಗಳ ಜಾಲದಿಂದ ಕೂಡಿದ ಈ ವಚನದಲ್ಲಿಯ ಶಬ್ದಾಲಂಕಾರವನ್ನು ನಾವು ಸಹಜವಾಗಿಯೇ ಗುರುತಿಸಬಹುದಾಗಿದೆ.

ಹೀಗೆ ಶಬ್ದಾಲಂಕಾರಗಳಿಗೆ ಉದಾಹರಣೆಯಾಗಿ ನಮಗೆ ವಚನಗಳ ನಿಚಯವೇ ದೊರೆಯಬಹುದು. ಆದರೆ ಇಲ್ಲಿ ಎಲ್ಲವನ್ನು ಹೇಳುತ್ತ ವಿವರಿಸುವದು ಅಸಾಧ್ಯ ಅಂತೂ ನಮ್ಮ ವಚನ ರಚನಾಕಾರರೂ ವಚನ

ಸೂಕ್ತ ಸಲಹೆ

....

ಸಮಾಜ ಸತ್ತಾವಾದದ ರಾಜಕೀಯ ವಿಚಾರಗಳನ್ನು ಭಾರತದೊಳಗೆ ಹಬ್ಬಿಸುವ ಮುಂಚೆ ಆಧ್ಯಾತ್ಮಿಕ ವಿಚಾರಗಳನ್ನು ಭಾರತ ತುಂಬ ಹರಡಬೇಕು. ವೇದಗಳಲ್ಲಿ, ಪುರಾಣಗಳಲ್ಲಿ ಅಡಕವಾಗಿರುವ ಬಹು ಮಹಿಮೆಯುಳ್ಳ ಅಧ್ಯಾತ್ಮಿಕ ತತ್ವಗಳನ್ನು ಗ್ರಂಥಗಳ ಬಂಧನದಿಂದ ಬಿಡುಗಡೆ ಮಾಡಬೇಕು. ಆಶ್ರಮಗಳಲ್ಲಿ ಹುಗಿದು ಬಿದ್ದ ಅಧ್ಯಾತ್ಮಿಕ ತತ್ವಗಳನ್ನು ಹೊರಗೆಳೆದು ಬಯಲಿಗೆ ತರಬೇಕು. ಪಟ್ಟಡವಿಗಳಲ್ಲಿ ಅಡಗಿ ಕೂತ ಅಧ್ಯಾತ್ಮವನ್ನು ಗ್ರಾಮ-ಗ್ರಾಮಾಂತರಗಳಲ್ಲಿ ಹಬ್ಬಿಸಬೇಕು. ಕೆಲವೇ ಜನಗಳ ಮನೆಗಳಲ್ಲಿಷ್ಟೇ ನಿಯಂತ್ರಿತವಾಗಿರುವ ಧರ್ಮ ತತ್ವಗಳನ್ನು ಹೊರಗೆಲ್ಲರಿಗೆ ಹಂಚಬೇಕು.

—ಸ್ವಾಮಿ ವಿವೇಕಾನಂದ

ಸಾಹಿತ್ಯದಲ್ಲಿ ಶಬ್ದಾಲಂಕಾರಗಳನ್ನು ಉಪಯೋಗಿಸಿ, ವಚನವಧುವನ್ನು ಹವಣರಿತು ಶೃಂಗರಿಸಿ ಕನ್ನಡ ಸಾಹಿತ್ಯ ರಾಣಿಗೆ ಕಾಣಿಕೆಯಾಗಿ ಕೊಟ್ಟು ಅಮರರಾಗಿದ್ದಾರೆ. ಇಂತಹ ಶಬ್ದಾಲಂಕಾರಗಳಿಂದ ಕೂಡಿದ ವಚನ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಒಂದು ಹೆಮ್ಮೆಯ ಸ್ಥಾನವನ್ನು ಗಳಿಸಿಕೊಂಡು ಯುಗ-ಯುಗದಲ್ಲೂ ತನ್ನ ಸೊಬಗನ್ನು ಬೀರುತ್ತ ಚಿರಂತನವಾಗಿ ಬಾಳಬೆಳಗುತ್ತದೆಂದು ನಿಸ್ಸಂದೇಹವಾಗಿ ಹೇಳಬಹುದು.

ಸದ್ಬೋಧ ಲಹರಿ

ಕಲಿಯುಗದ ಕ್ಲೇಶ ಹರಣಕ್ಕೊಂದು ದಾರಿ

ಲೇ : ಆನಂದರಾವ ಕದಮ್, ಸೊರಬ.

ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ
ನೇಚ್ಛಂತಿ ಮಾನವಾಃ ।
ನ ಪಾಪಫಲಮಿಚ್ಛಂತಿ ಪಾಪಂ
ಕುರ್ವಂತಿ ಯತ್ನತಃ ॥

ಪುಣ್ಯ ಸಂಪಾದನೆಗಾಗಿ ಶ್ರಮಪಡದೆ ಪುಣ್ಯ ಫಲವನ್ನ ಮಾತ್ರ ಅಪೇಕ್ಷಿಸುವವರೂ, ಪಾಪ ಫಲವನ್ನನುಭವಿಸಲು ಇಷ್ಟವಿಲ್ಲದಿದ್ದರೂ ಪಾಪಕರ್ಮ ಮಾಡುವುದನ್ನು ಬಿಡದೆ ಇರುವವರೂ, ಈ ಕಾಲದಲ್ಲಿ ಹೆಚ್ಚು ಜನರಾಗಿದ್ದಾರೆ.

ಆದ್ದರಿಂದಲೇ ಇಂದಿನ ಕಲಿಯುಗವು, ರಾಜಕೀಯ ವಿಸಂಗತ ಘಟನೆಗಳು, ಜೀವನೋಪಯೋಗಿ ಆಹಾರಧಾನ್ಯಾದಿ ವಸ್ತುಗಳ ಬೆಲೆ ಏರಿಕೆ, ವೃತ್ತಿ ಉದ್ಯೋಗದ ಅಭಾವ ಮುಂತಾದ ತನ್ನದೇ ಆದ ವೈಶಿಷ್ಟ್ಯಗಳಿಂದ ಜನಜೀವನವನ್ನು ಅಪಾರ ದುಃಖ ಮತ್ತು ಮನಃಕ್ಲೇಶಕ್ಕೆ ಗುರಿಪಡಿಸುತ್ತಿದೆ. ಕಲಿಯುಗದ ಇಂಥ ಪ್ರಭಾವದಿಂದ ಗಾಬರಿಗೊಂಡಿರುವ ಮಾನವ ಜನಾಂಗವು ದುಃಖದ ನಿವಾರಣೆ, ಸುಖದ ಹಂಬಲ ಮತ್ತು ಶಾಂತಿ—ಸಮೃದ್ಧಿಗಾಗಿ ಅಹರ್ನಿಶ ಹೋರಾಟವನ್ನು ನಡೆಸುತ್ತಲಿದೆ. ಆದರೆ ಆಕಾಂಕ್ಷೆಯ ಸುಖ ಮತ್ತು ಮನಸ್ಸಿನ ಶಾಂತಿಯು ಮಾನವರೊಡನೆ ಮುನಿಸಿಕೊಂಡಿರುವಂತೆ, ಹೆಚ್ಚು ಹೆಚ್ಚಾಗಿ ದೂರ ಸರಿಯುತ್ತಿರುವುದೇ ವಿನಃ ಮಾನವರ ನಿಲುವಿಗೆ ನಿಲುಕುವ ಸಂಭವವು ತೋರಿಬರುತ್ತಿಲ್ಲ.

ಹಾಗಾದರೆ ಮಾನವರ ಜೀವಿತವು ನೆಮ್ಮದಿಯಾಗಿ ನಡೆದು ಚಿತ್ತಶಾಂತಿ ದೊರಕುವ ಉಪಾಯವೇನು ಎಂಬ ಪ್ರಶ್ನೆಯು ಉದ್ಭವಿಸುವುದು ಸಹಜ ಈ ಉಪಾಯವು ಕೆಳಕಂಡ ವೇದೋಕ್ತಿಯಲ್ಲಿ ವಿಸ್ತೃತವಾಗಿ ಸೂಚಿಸಲ್ಪಟ್ಟಿದೆ.

ಸ ಏವ ಕರುಣಾಸಿಂಧುಃ ಭಗವಾನ್
ಭಕ್ತವತ್ಸಲಃ ।
ಉಪಾಸಕಾನುರೋಧೇನ ಭಜತೇ
ಮೂರ್ತಿ ಪಂಚಕಂ ॥
ಸರ್ವೇಶ್ವರಃ ಸರ್ವಮಯಃ ಸರ್ವ
ಭೂತಹಿತೇರತಃ ।

ಸರ್ವೇಷಾಮುಪಕಾರಾಯ ಸಾಕಾ
ರೋಽಭೂನ್ನಿರಾಕೃತಿಃ ||

ತನ್ನ ಆರಾಧಕರಿಗೆ ಕರುಣಾಮೂರ್ತಿ ಯಾಗಿರುವ ದಯಾಸಾಗರ ಪರಮಾತ್ಮನು ಅವರ ಕ್ಲೇಶಹರಣ ಮತ್ತು ಹಿತಸಾಧನೆಗಾಗಿ, ಐದು ರೂಪಗಳನ್ನು ಧರಿಸಿ, ಪಂಚಮುಖಿ ಪರಮೇಶ್ವರ ನೆನಿಸಿಕೊಂಡಿರುವನು ಸಮಸ್ತ ಭೂಮಂಡಲಕ್ಕೆ ಒಡೆಯನೂ, ಭೂಮಂಡಲವನ್ನಿಡೀ ವ್ಯಾಪಿಸಿಕೊಂಡಿರುವವನೂ, ಜೀವಜಂತುಗಳ ಕಲ್ಯಾಣದಲ್ಲಿ ನಿರತನಾಗಿರ ವವನೂ ಆಗಿರುವ ಏಕೈಕ ಪರಮಾತ್ಮನು ಆರ್ತ ಜೀವಿಗಳ ಉದ್ಧಾರಕ್ಕಾಗಿ ರೂಪಧಾರಣೆ ಮಾಡುವನು

ಇಂಥ ಮಹಾಮಹಿಮನಾದ ಪರಮಾತ್ಮನನ್ನು ಆರಾಧಿಸಿ ಒಲಿಸಿಕೊಂಡರೆ, ಮಾನವನು ದಾರಿದ್ರ್ಯ ದು:ಖಗಳೆನ್ನೆಲ್ಲ ಕಳೆದುಕೊಂಡು ಜೀವಿತದ ನೆಮ್ಮದಿ ಮತ್ತು ಚಿತ್ತಶಾಂತಿಯನ್ನು ಹೊಂದುವುದು ನಿಸ್ಸಂದೇಹ ಆದರೆ ಪರಮಾತ್ಮನನ್ನು ಆರಾಧಿಸಿ ಒಲಿಸಿಕೊಳ್ಳುವ ಸೂಕ್ತವಾದ ವಿಧಾನವನ್ನರಿಯದೆ, ಮಿಥ್ಯಾ ವಿಧಾನದಿಂದ ಅಹರ್ನಿಶ ಪ್ರಯತ್ನಿಸಿ ನಿಷ್ಫಲ ಹೊಂದಿದ ಅನೇಕ ಜನರು ಪರಮಾತ್ಮನಲ್ಲಿ ನಂಬಿಕೆಯನ್ನೇ ಕಳೆದುಕೊಂಡಿದ್ದಾರೆ. ಕೇವಲ ಪೂಜೆ ಅಥವಾ ಬಾಹ್ಯಾಡಂಬರದ ಉಪಾಸನೆಯಿಂದ ಪರಮಾತ್ಮನನ್ನೊಲಿಸಿಕೊಳ್ಳುವುದು ಸಾಧ್ಯವಿಲ್ಲ. ಅತ್ಯಂತ ದೀನನಾಗಿ ಶ್ರದ್ಧಾ-ಭಕ್ತಿಯಿಂದ ಪರಮಾತ್ಮನ ಪ್ರಾರ್ಥನೆಯಲ್ಲಿ ತಲ್ಲೀನನಾಗಿರುವ ನಿಜವಾದ ಭಕ್ತನ ಹೃದಯಾಂತರಾಳದಲ್ಲಿ ಸಹಜವಾಗಿ ಉದ್ಭವಿಸುವ ಹಾಗೂ ಪರಮಾತ್ಮನ ಅಗಾಧ ಶಕ್ತಿ ಸಾಗರದಲ್ಲಿ ವಿಲೀನವಾಗುವ ಆತ್ಮಶಕ್ತಿಯು ಪರಮಾತ್ಮನನ್ನು ಒಲಿಸಿಕೊಳ್ಳಲು ಅತ್ಯಾವಶ್ಯಕವಾಗಿ ಬೇಕಾಗುವುದು. ದೃಢಚಿತ್ತ ಮತ್ತು ಏಕೀಭಾವದಿಂದ, ಶ್ರದ್ಧಾ-ಭಕ್ತಿಯಿಂದ, ಗುರುಬೋಧೆಯಿಂದ, ಸಂತ—ಸಜ್ಜನರ ಮಾರ್ಗದರ್ಶನದಿಂದ ಈ ಆತ್ಮಶಕ್ತಿಯನ್ನು ಹೊಂದಲು ನಿರಂತರವೂ ಪ್ರಯತ್ನಿಸಿದರೆ ಸುಖ—ಸೋಪಾನದ ಸಂತೃಪ್ತಿಯು ನಿಸ್ಸಂದೇಹವಾಗಿ ಲಭಿಸುವುದು.

ಅಖಿಲ ಬ್ರಹ್ಮಾಂಡದ ವಿಧಾತನೂ, ಸರ್ವಶಕ್ತಿ ಸಂಪನ್ನನೂ, ಸರ್ವೋದ್ಧಾರಕನೂ, "ಸತ್ಯಂ ಶಿವಂ ಸುಂದರಂ" ಸ್ವರೂಪಿಯೂ, ಸರ್ವವ್ಯಾಪಿಯಾಗಿದ್ದರೂ ಅದೃಶ್ಯನಾಗಿರುವವನೂ, ಆಗಿರುವ ಭಕ್ತವತ್ಸಲ ಪರಮಾತ್ಮನೊಡನೆ ಐಕ್ಯತೆಯನ್ನು ಸಂಭವಿಸಬಲ್ಲ ಶ್ರದ್ಧಾ--ಭಕ್ತಿಯ ಆತ್ಮಶಕ್ತಿಯು ಮಾನವರ ಸಮಸ್ತ ಪಾಪಕ್ಲೇಶಗಳನ್ನು ಧ್ವಂಸಗೊಳಿಸಿ, ಜೀವಿತದ ಚಿರನೆಮ್ಮದಿಯನ್ನು ಕೊಡಬಲ್ಲದು.

ಜೀವನದಲ್ಲಿ ಸುಖ-ಶಾಂತಿ ಪಡೆಯಬೇಕಾದರೆ ಪಾಪಾಚರಣೆಯನ್ನು ಸರ್ವತಃ ತ್ಯಜಿಸಬೇಕು. ಭಗವನ್ನಾಮ ಸ್ಮರಣೆ, ಸತ್ಕರ್ಮಾದಿಗಳ ಮೂಲಕ ಪುಣ್ಯ ಸಂಪಾದನೆಯನ್ನು ಮಾಡಿಕೊಳ್ಳಬೇಕು. ಈ ವಿಧಾನಗಳನ್ನು ನಿಷ್ಕಾಮ ಭಾವನೆಯಿಂದ ಆಚರಿಸಿದರೆ ಮಾತ್ರ ಜೀವನದಲ್ಲಿ ಸುಖಶಾಂತಿಯು ಪ್ರಾಪ್ತವಾಗುವುದು—

ಸುಖಾರ್ಥಾಃ ಸರ್ವಭೂತಾನಾಂ ಮತಾಃ
ಸರ್ವಾಃ ಪ್ರವೃತ್ತಯಃ ।
ಸುಖಂ ಚ ನ ವಿನಾ ಧರ್ಮಾತ್
ತಸ್ಮಾತ್ ಧರ್ಮಪರೋ ಭವೇತ್ ||

ಭಗವದ್ ಭಕ್ತಿಯು ಪವಿತ್ರ ಮಾರ್ಗ

(ರಾಷ್ಟ್ರಪತಿ ಡಾ|| ಎಸ್. ರಾಧಾಕೃಷ್ಣನ್‌ರವರ ವಿಶೇಷ ಲೇಖನದ ಅನುವಾದ)

ಸಗುಣ, ಸಾಕಾರ ಭಗವಂತನೊಡನೆ ಇರುವ ವಿಶ್ವಾಸ ಮತ್ತು ಸ್ನೇಹದ ಸಂಬಂಧವೇ ಭಕ್ತಿ. ಸಾಮಾನ್ಯ ಮನುಷ್ಯರಿಗೆ ಅವ್ಯಕ್ತೋಪಾಸನೆ ಕಠಿಣವಾಗುವದು. ಮಹಾನ್ ಅದ್ವೈತವಾದಿಗಳು ನಿರಾಕಾರ ತತ್ವದ ಕಡೆಗೆ ತಮ್ಮ ಆಂತರಿಕ ಸರಸ ಭಾವನೆಯನ್ನು ಪ್ರಕಟಿಸಿದ ಉದಾಹರಣೆಗಳಿವೆ. ದುರ್ಬಲ ಮತ್ತು ದೀನ, ನಿರಕ್ಷರರ ಮತ್ತು ಅಜ್ಞ ಎಲ್ಲರಿಂದಲೂ ಸಾಧ್ಯವಿರುವದರಿಂದ ಭಗವಂತನ ಸಗುಣ—ಸಾಕಾರ ಉಪಾಸನೆಯು ಸರಳವೆಂದು ಹೇಳಲ್ಪಟ್ಟಿದೆ ಭಗವತ್ ಸಂಕಲ್ಪಕ್ಕೆ ಅನುರೂಪವಾಗಿ ಇಚ್ಛಾಶಕ್ತಿಯನ್ನು ನಿರ್ಮಿಸಿಕೊಳ್ಳುವದು; ಕಠೋರ ತಪಸ್ಸಾಧನೆಯನ್ನಾಶ್ರಯಿಸುವದು, ಅಥವಾ ವಿಚಾರ ಜ್ಞಾನದ ಕಠೋರ ಪದ್ಧತಿಯನ್ನು ಅನುಸರಿಸುವದು ಅತ್ಯಂತ ಕಠಿಣವಿರುವಂತೆ ಪ್ರೇಮ ಮೂಲಕ ತ್ಯಾಗವು ಕಠಿಣವಿರುವದಿಲ್ಲ.

ಭಕ್ತಿಯ ಸಾಧನೆಯ ಮೂಲವು ಪ್ರಾಚೀನ ಕಾಲದ ಅಲಭ್ಯ ಇತಿಹಾಸದಲ್ಲಿ ಹುದುಗಿಕೊಂಡಿದೆ. ಗೀತಾಕಾರ ಭಗವಾನ್ ಶ್ರೀ ಕೃಷ್ಣನ ಋಗ್ವೇದದ ಸ್ತುತಿಗಳು, ಮತ್ತು ಪ್ರಾರ್ಥನೆಗಳು ಉಪನಿಷತ್ತುಗಳ ಉಪಾಸನಾತ್ಮಕ ಭಾವ ಮತ್ತು ಭಾಗವತ ಧರ್ಮದ ಉತ್ಕೃಷ್ಟ ಶ್ರದ್ಧೆ ಇವುಗಳಿಗೆ ವಿಶೇಷ ಮಹತ್ವ ಕೊಟ್ಟಿರುವನು ಅವನು ಉಪನಿಷತ್ತುಗಳಲ್ಲಿರುವ ಆಸ್ತಿಕ ಪಕ್ಷವನ್ನಲ್ಲದೆ ಮುಕ್ತ ಮತ್ತು ಸ್ಪಷ್ಟ ರೂಪದಲ್ಲಿಲ್ಲದ ವಿಚಾರ ಧಾರೆಯೊಂದನ್ನು ಸಂಸ್ಥಾಪಿಸುವ ಪ್ರಯತ್ನ ಮಾಡುತ್ತಾನೆ ಅವನ ಉಪದೇಶದಲ್ಲಿ, ಅತ್ಯಂತವ್ಯಥಿತ ಭಕ್ತನು ಕಾತರತೆಯಿಂದ ಪ್ರಾರ್ಥಿಸಿದಾಗಲೂ ತನ್ನ ನಿಸ್ತಬ್ಧ ಉದಾಸೀನತೆ (ಅಭಿನ್ನ ಸ್ವರೂಪ ಮಹಿಮೆ)ಯಲ್ಲಿ ನಿಮಗ್ನನಾದ ಸರ್ವೋಪರಿಸತ್ತೆಯು ಈಶ್ವರನಿರುವದಿಲ್ಲ. ಆದರೆ ಪ್ರೇಮಮಯನೂ ರಕ್ಷಕನೂ ಆದ ಈಶ್ವರನಿರುವನು ತನ್ನ ಮೇಲೆ ವಿಶ್ವಾಸವನ್ನಿಟ್ಟವರಿಗೆ ಮುಕ್ತಿಯನ್ನು ಕರುಣಿಸುವನೆಂಬ ಅನುಭವವನ್ನು ಸಾರುವ ಭಕ್ತರ ಈಶ್ವರನವನು. ಅವನು ಘೋಷಿಸಿದ್ದಾನೆ. ನನ್ನಲ್ಲಿ ಭಕ್ತಿಯನ್ನಿಟ್ಟವನು ಎಂದೂ ನಾಶಹೊಂದುವದಿಲ್ಲ ಇದು ನನ್ನ ಪ್ರತಿಜ್ಞೆ.

'ಭಜ್' ಧಾತುವಿನಿಂದ ಭಕ್ತಿ ಶಬ್ದದ ವ್ಯುತ್ಪತ್ತಿಯಾಗಿದೆ. ಭಕ್ತಿಯ ಅರ್ಥವೆಂದರೆ ಭಗವಂತನ ಸೇವೆ. ಅದು ಭಗವಂತನಲ್ಲಿ ಪ್ರೇಮಮಯೀ ಆಸಕ್ತಿಯಾಗಿದೆ. ದೇವರ್ಷಿ

ನಾರದರು ಇದಕ್ಕೆ ಪರಮ ಪ್ರೇಮಸ್ವರೂಪಾ ಎಂದು ಕರೆದಿದ್ದಾರೆ. ಮಹರ್ಷಿ ಶಾಂಡಿಲ್ಯರ ಅಭಿಪ್ರಾಯದಂತೆ ಇದು ಈಶ್ವರನಲ್ಲಿ ಹೆಚ್ಚಿನ ಆಸಕ್ತಿಯಾಗಿದೆ. ಮತ್ತು ಅಹೈತುಕ (ನಿಷ್ಕಾಮ)ವಾಗಿದೆ. ಭಗವಂತನ ಕೃಪೆಯ ಮೇಲೆ ವಿಶ್ವಾಸವಿಡುತ್ತ ಆತ್ಮಸಮರ್ಪಣೆ ಮಾಡುವದಕ್ಕೆ ಭಕ್ತಿಯೆಂದು ಹೇಳಬೇಕು. ಇದೇ ಯೋಗಸೂತ್ರದ "ಈಶ್ವರ ಪ್ರಣಿಧಾನ"ವಾಗಿದೆ. ಇವಕ್ಕೆ ವೃತ್ತಿಕಾರ ಭೋಜನು "ವಿಷಯ ಸುಖಪ್ರಾಪ್ತಿಯಂಥ ಯಾವದೇ ಕಾಮನೆಯಿಲ್ಲದ, ಗುರುಗಳ ಗುರುವಾಗಿರುವ ಭಗವಂತನಲ್ಲಿ ಎಲ್ಲ ಕಾರ್ಯಗಳ ಸಮರ್ಪಣವೆಂದು ಅರ್ಥ ಮಾಡಿದ್ದಾನೆ. ಎಲ್ಲ ಕಾಮನೆಗಳನ್ನು ನಷ್ಟಗೊಳಿಸಿ ಹೃದಯದಲ್ಲಿ ಪ್ರಭು-ಪ್ರೇಮವನ್ನು ತುಂಬುವ ಪರಿಶುದ್ಧ ಪ್ರೇಮದ ಗಂಭೀರ ಅನುಭವವಾಗಿದೆ. ಈ ವಿಶುದ್ಧ ಪ್ರೇಮವು ಗುಣದರ್ಶನದಿಂದಾಗಲಿ, ಕಾಮನೆಯಿಂದಾಗಲಿ ಉದಯವಾಗುವದಿಲ್ಲ ಪ್ರತಿಕ್ಷಣದಲ್ಲಿಯೂ ವೃದ್ಧಿಯಾಗುತ್ತಲೇ ಇರುವದು. ಯಾವಾಗಲೂ ಇದು ವಿಚ್ಛಿನ್ನವಾಗುವದಿಲ್ಲ. ಸೂಕ್ಷ್ಮತರವೂ ಅನುಭವರೂಪವೂ ಆಗಿರುತ್ತದೆ. (ಗುಣರಹಿತಂ ಕಾಮನಾ ರಹಿತಂ ಪ್ರತಿಕ್ಷಣ ವರ್ಧಮಾನ ಮವಿಚ್ಛಿನ್ನಂ ಸೂಕ್ಷ್ಮತರಮನುಭವ ರೂಪಂ. ನಾರದ ಭಕ್ತಿ ಸೂತ್ರ ೫೪) ವಿಶುದ್ಧ ಭಕ್ತಿ ಮಾರ್ಗದ ಸಮರ್ಥಕರು, ಭಗವಂತನ ಸ್ಥಿರಸಂಕಲ್ಪವನ್ನನುಸರಿಸಿ ನಡೆಯಲಿಕ್ಕೆ ಮಹತ್ವ ನೀಡುವಷ್ಟು ಪಾರಲೌಕಿಕ ಕಲ್ಯಾಣಕ್ಕೆ ಮಹತ್ವನೀಡುವದಿಲ್ಲ ಭಗವಂತನ ಶಕ್ತಿ ಮತ್ತು ಕಲ್ಯಾಣರೂಪಮಯ ಲೀಲೆಗಳನ್ನು ಚಿಂತನೆ ಮಾಡುವದರಿಂದ. ಪ್ರೇಮಪೂರ್ಣ ಹೃದಯದಿಂದ ನಿರಂತರ ಅವನ ಸ್ಮರಣೆ ಮಾಡುವದರಿಂದ; ತಮ್ಮೊಳಗೆ ಪರಸ್ಪರ ಅವನ ಗುಣಗಳ ಕಥೋಪಕಥನ ಮಾಡುವದರಿಂದ, ಪರಿವಾರದೊಡಗೊಂಡು ಅವನ ಸ್ತುತಿಗಳನ್ನು ಹಾಡುವದರಿಂದ ಮತ್ತು ಎಲ್ಲ ಕೆಲಸಗಳನ್ನು ಅವನ ಸೇವೆಯೆಂಬ ಭಾವನೆಯಿಂದ ಮಾಡುವದರಿಂದ ಮನುಷ್ಯನ ಆತ್ಮನು ಭಗವಂತನ ಸಮೀಪಕ್ಕೆ ಹೋಗಹತ್ತುತ್ತಾನೆ ಭಕ್ತನು ತನ್ನ ಸಂಪೂರ್ಣ ಅಸ್ತಿತ್ವವನ್ನು ಭಗವಂತನಲ್ಲಿ ಅರ್ಪಿಸುತ್ತಾನೆ. ಭಜನೆಯೇ ಧರ್ಮದ ಸಾರವಾಗಿದೆ. ಭಕ್ತಿಯಲ್ಲಿ ಆರಾಧಕ ಮತ್ತು ಆರಾಧ್ಯ ಎಂಬ ದ್ವೈತದ ಅಸ್ತಿತ್ವವಿರುತ್ತದೆ. ಭಗವಂತನು ಎಲ್ಲವುಗಳಲ್ಲಿಯೂ ಅನುಸ್ಯೂತನಾಗಿದ್ದಾನೆ ಮಾನವನ ಜೀವ ಭಾವ ಮತ್ತು ಭಗವಂತನ ಸರ್ವಾತೀತತೆ ಇವುಗಳ ನಾಶವಾದರೆ ಅದರಲ್ಲಿ ಶ್ರದ್ಧೆ ಮತ್ತು ಭಕ್ತಿಗೆ ಏನೂ ಸ್ಥಾನವೇ ಉಳಿಯುವದಿಲ್ಲವೆಂದು ಈ ಸಿದ್ಧಾಂತದ ವ್ಯಾಖ್ಯೆ ಮಾಡಬಹುದು. ಸೃಷ್ಟಿಕರ್ತ ಮತ್ತು ಸೃಷ್ಟಿ ಇವುಗಳೊಳಗಿನ ಭೇದವೇ ಭಕ್ತಿಪಥದ ತಾತ್ವಿಕ ಆಧಾರವಾಗಿದೆ. ಶ್ರೀ ಭಗವದ್ಗೀತೆಯಲ್ಲಿ, ಮಾನವನು ಹುಡುಕುತ್ತಿರುವ, ಮಾನವನ ಮನಸ್ಸಿಗೆ ಅವಶ್ಯಕವಿರುವ, ವಿಶ್ವಾಸ, ಪ್ರೇಮ, ಶ್ರದ್ಧೆ, ನಿಷ್ಠಾಪೂರ್ಣ ಆತ್ಮಸಮರ್ಪಣೆಗಳನ್ನು ಪ್ರೇರಿಸುವ ಕೃಪಾಮಯ ಭಗವದ್ರೂಪವನ್ನು ನಿರೂಪಿಸಿದಷ್ಟು, ತಾತ್ವಿಕರ ವಿವೇಚನ ವಿಷಯವಾದ ಭಗವಂತನ ಅಕ್ಷರಸತ್ತೆಯನ್ನು ನಿರೂಪಿ

ಸುವದಿಲ್ಲ. ಜ್ಞಾನೋದಯದ ಮೊದಲಿನ ದ್ವೈತ ಭಾವನೆಯು ಮೋಹವನ್ನು ಹುಟ್ಟಿಸುತ್ತದೆ. ಆದರೆ ಜ್ಞಾನಪ್ರಾಪ್ತಿಯಾದ ನಂತರ ದ್ವೈತವು [ಜ್ಞಾನೋತ್ತರ ಪ್ರೇಮವು] ಅದ್ವೈತಕ್ಕಿಂತ ಹೆಚ್ಚು ಸುಂದರವಾಗಿ ತೋರುತ್ತದೆ. (ದ್ವೈತಂ ಮೋಹಾಯ ಬೋಧಾತ್ ಪ್ರಾಗಜಾತೇ ಬೋಧೇ ಮನೀಷಯಾ । ಭಕ್ತ್ಯರ್ಥಂ ಕಲ್ಪಿತಂ ದ್ವೈತಮದ್ವೈತಾದಪಿಸುಂದರಂ) ಅದ್ವೈತವೇ ಯಥಾರ್ಥ ತತ್ವವಾದರೂ ಪ್ರೇಮೋಪಾಸನೆಗಾಗಿದ್ವೈತ ಸತ್ತೆಯು ಇರುವದು. ಈ ದೃಷ್ಟಿಯಿಂದ ಮುಕ್ತಿಗಿಂತಲೂ ಭಕ್ತಿಯು ನೂರುಪಟ್ಟು ಹೆಚ್ಚಿನದಾಗಿದೆ. (ಪಾರಮಾರ್ಥಿಕ ಮದ್ವೈತಂ ಭಜನಹೇತವೇ ತಾದೃಶೀಯದಿ ಭಕ್ತಿಃಸ್ಯಾತ್ ಸಾತು ಮುಕ್ತಿ ಶತಧಿಕಾ॥) ಗೀತೋಕ್ತ ಭಕ್ತಿಯು ವಿಚಾರ, ಚಿಂತನ ಮತ್ತು ಮನನಗಳಿಗೆ ಪ್ರಾಧಾನ್ಯವಿರುವ ಭಕ್ತಿ, ಬುದ್ಧಿಗತ ಪ್ರೇಮವಲ್ಲ. ಇದು ಜ್ಞಾನವಾಗಿರದೆ ಜ್ಞಾನದಿಂದ ಪುಷ್ಟಿ ಹೊಂದಿದ್ದಾಗಿದೆ. ಯೋಗದ ಪ್ರತಿಕ್ರಿಯೆಗಳೊಡನೆ ಇದರ ಸಂಬಂಧವೂ ಇಲ್ಲ. ಈಶ್ವರ ವಿಷಯದ ವಿವೇಚನೆಯಿರುವ ಜ್ಞಾನದ ಲಾಲಸೆಯೂ ಇರುವದಿಲ್ಲ. ಶಾಂಡಿಲ್ಯಮತಾನುಸಾರ ಜ್ಞಾನರಹಿತ ಭಕ್ತಿಯಾದರೂ ಅಧ್ಯಾತ್ಮಿಕ ಶಾಂತಿಯನ್ನು ಕೊಡುತ್ತದೆ. ಇದಕ್ಕೆ ಗೋಪಿಕಾ ಸ್ತ್ರೀಯರೇ ಸಾಕ್ಷಿ. ಭಕ್ತರಲ್ಲಿ ಅತ್ಯಂತಿಕ ದೈನ್ಯದ ಭಾವವುಂಟಾಗುತ್ತದೆ. ಭಗವತ್ ಸನ್ನಿಧಿಯಲ್ಲಿ ಅವನು ಅಗಣಿತ ಅನುಭವ ಹೊಂದುತ್ತಾನೆ. ಭಗವಂತನಿಗೆ ದೈನ್ಯ ಮತ್ತು ಅಹಂಕಾರ ಪೂರ್ತಿ ನಾಶಪ್ರಿಯವಾದದ್ದು.

ಭಕ್ತಿಗೆ ಸಂಬಂಧಿಸಿದ ಗುಣಗಳಾದ- ಸ್ನೇಹ, ಶ್ರದ್ಧೆ, ಕರುಣೆ, ಮೃದುತಾ ಇವುಗಳು ಪುರುಷರಿಗಿಂತ ಸ್ತ್ರೀಯರಲ್ಲಿ ಹೆಚ್ಚು ಕಂಡು ಬರುವವು. ಭಕ್ತಿಪಥದಲ್ಲಿ ದೈನ್ಯ, ಅನುಸರಣ, ವಿನಯಯುಕ್ತ ಸೇವೆ, ದಯೆ ಮತ್ತು ಪ್ರಣಯದ ಮಹತ್ವವಿದೆ ಮತ್ತು ಭಕ್ತನು, ಆತ್ಮಸಮರ್ಪಣ. ಸ್ವಸಂಕಲ್ಪದ ತ್ಯಾಗ, ನಿರಪೇಕ್ಷತೆಯನ್ನು ಬಯಸುತ್ತಾನೆ ಕಾರಣ ಭಕ್ತಿಯನ್ನು ಸ್ತ್ರೀರೂಪದಲ್ಲಿ ಚಿತ್ರಿಸಲಾಗಿದೆ. ಸ್ತ್ರೀಯರು ಅಪೇಕ್ಷಿಸುತ್ತಾರೆ, ಕಷ್ಟ ಸಹಿಸುತ್ತಾರೆ, ಆಶೆಯನ್ನು ಹುಟ್ಟಿಸುತ್ತಾರೆ. ಮತ್ತು ಇಷ್ಟವನ್ನು ಪಡೆಯುತ್ತಾರೆ. ಅವರು ದಯೆ, ಸಹಾನುಭೂತಿ, ಮತ್ತು ಶಾಂತಿಯನ್ನು ಅಪೇಕ್ಷಿಸುತ್ತಾರೆ. ಎಲ್ಲ ಜೀವಿಗಳಲ್ಲಿ ನಾರೀ ಸ್ವಭಾವವಿರುತ್ತದೆ. ಶ್ರೀ ಕೃಷ್ಣನನ್ನು ಪತಿರೂಪದಲ್ಲಿ ಪಡೆಯಲಿಕ್ಕೆ ಗೋಪಿಕಾ ಸ್ತ್ರೀಯರು ಮಹಾಶಕ್ತಿ ಕಾತ್ಯಾಯನಿಯನ್ನು ಉಪಾಸನೆ ಮಾಡಿದರಾಗಿ ಶ್ರೀಮದ್ ಭಾಗವತದಲ್ಲಿ ಬಂದಿದೆ. ಸ್ತ್ರೀಯರು ತಮ್ಮ ವಾಸ್ತವಿಕ ಸ್ವರೂಪದಲ್ಲಿ ಸ್ಥಿತರಾಗಿದ್ದಾಗ ಎಲ್ಲವನ್ನೂ ಕೊಡುತ್ತಾರೆ. ಸರ್ವಸ್ವವನ್ನು ಸಮರ್ಪಿಸುತ್ತಾರೆ. ಅವರು ಪ್ರೇಮವನ್ನು ನೀಡುವವರು ಮತ್ತು ಪಡೆಯುವವರು. ಇದರಿಂದಲೇ ಶ್ರೀ ರಾಧಾದೇವಿಯು ಪ್ರೇಮಿಗಳ ಆದರ್ಶವಾಗಿದ್ದಾಳೆ. ಭಕ್ತನು ಅಧಿಕಾಂಶಪ್ರೇಯಸಿಗೆ ಸಮಾನ ಪರಮೇಶ್ವರನು ಏಕಮಾತ್ರ ಪುರುಷನೆಂದೂ ಬ್ರಹ್ಮಾದಿಉಳಿದವರೆಲ್ಲರೂ ನಾರಿಯರೆಂದೂ ಪರಮಪುರುಷನೊಡನೆ ಏಕಾತ್ಮತೆಯನ್ನು ಬಯಸುವವರು ಉಪಾಸನೆ ಮಾಡಿದ್ದುಂಟು.

ನಾವು ಭಗವಂತನಲ್ಲಿ ಆತ್ಮಸಮರ್ಪಣ ಮಾಡಿದಾಗ ಅವನು ನಮ್ಮ ಜ್ಞಾನವನ್ನೂ, ಪ್ರವಾದವನ್ನೂ ತನ್ನೊಳಗೆ ತೆಗೆದುಕೊಳ್ಳುತ್ತಾನೆ. ನಮ್ಮ ಎಲ್ಲ ಪ್ರಕಾರದ ನ್ಯೂನತೆಗಳನ್ನು ಪರಿಹರಿಸುತ್ತಾನೆ. ಅಂಥವರನ್ನು ಅನಂತ ಜ್ಯೋತಿ ಮತ್ತು ವಿಶ್ವಕಲ್ಯಾಣದ ಪಾವಿತ್ರ್ಯದಲ್ಲಿ ಪರಿವರ್ತಿಸುತ್ತಾನೆ. ಅಂಥವರನ್ನು ಅನಂತಜ್ಯೋತಿ ಮತ್ತು ವಿಶ್ವಕಲ್ಯಾಣದ ಪಾವಿತ್ರ್ಯದಲ್ಲಿ ಪರಿವರ್ತಿಸುತ್ತಾನೆ. ಭಕ್ತಿಯೆಂದರೆ ಒಬ್ಬನು ಇನ್ನೊಬ್ಬನನ್ನು ಅನುಸರಿಸುವದಲ್ಲ. ಜೀವಾತ್ಮನು ಜಗತ್ತಿನಿಂದ ವಿರಕ್ತಿ ಹೊಂದುವದಲ್ಲ. ಭಗವಂತನಲ್ಲಿ ಆಸಕ್ತಿ ಹೊಂದುವದು ಮಾತ್ರವಲ್ಲ, ಆದರೆ ಜಗತ್ತಿನ ಉದ್ಧಾರವನ್ನೊಡಗೊಂಡಿರುವ ಸಕ್ರಿಯ ಪ್ರೇಮ.

''ಭಗವತ್ ಕೃಪೆಯ ಪ್ರಾಪ್ತಿಯು ನಮ್ಮ ಪ್ರಯತ್ನದಿಂದ ಆಗುವದಿಲ್ಲ" ಈ ವಿಚಾರವು ದೃಢಭಕ್ತಿಯನ್ನು ಹುಟ್ಟಿಸುವದು. ಕೇವಲ ವಿಶ್ವಾಸ ಮತ್ತು ಪ್ರೇಮದ ಅವಶ್ಯಕತೆಯಿರುವಲ್ಲಿ ನಾವು ಭಗವಂತನಲ್ಲಿ ನಮ್ಮನ್ನು ಅರ್ಪಿಸಿಕೊಳ್ಳುವದರಿಂದ, ಯಾವ ಶರ್ತವೂ ಇಲ್ಲದೆ ಅವನ ಕೈಗಳಿಗೆ ನಾವಾಗ ಸಮರ್ಪಿತರಾಗುವದರಿಂದ ತನ್ನಿಚ್ಛೆಯಂತೆ ನಮ್ಮನ್ನು ಉಪಯೋಗಿಸಿಕೊಳ್ಳಲು ನಾವವನಿಗೆ ಅಧಿಕಾರ ಕೊಡುವದರಿಂದ ಅವುಗಳ ಪೂರ್ತಿಯಾಗುವದು ನಮ್ಮ. ಈ ಸಮರ್ಪಣವು ನಿಶ್ಚಲತೆ, ಪೂರ್ಣ ಪಾವಿತ್ರ್ಯ. ವಿನಮ್ರಭಾವ, ಸರಳ ವಿಶ್ವಾಸಗಳಿಂದ ಪ್ರೇರಿಸಲ್ಪಟ್ಟದ್ದಾಗಿರಬೇಕು. ಇಲ್ಲಿ ಭಕ್ತಿ ಸಾಧನಗಳ (ತೀವ್ರತೆ) ಗಿಂತಲೂ "ಸಮರ್ಪಣದ ಪೂರ್ಣತೆಯನ್ನೇ ಯಥಾರ್ಥ ಧರ್ಮ ನಿಷ್ಠೆಯ ಸ್ವರೂಪ"ವೆಂದು ಮನ್ನಿಸಲಾಗಿದೆ ನಾವು ಅಂತರ್ಹೃದಯವನ್ನು ಸ್ವಚ್ಛಗೊಳಿಸಿ ಶೂನ್ಯ ಮಾಡಿಕೊಟ್ಟಾಗ ಭಗವಂತನು ಅಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸುತ್ತಾನೆ ನಮ್ಮ ಗುಣ,ಅಭಿಮಾನ, ಜ್ಞಾನ, ಸೂಕ್ಷ್ಮ ಕಾಮನೆಗಳು, ಅಲಕ್ಷಿತ ಮನ್ನಣೆಗಳು, ಕೆಟ್ಟ ಯೋಜನೆಗಳೇ. ನಮ್ಮ ಮೇಲೆ ಅಧಿಕಾರ ನಡೆಯಿಸಲಿಚ್ಛಿಸುವ ಭಗವಂತನಿಗೆ ಅಡ್ಡಿಯನ್ನುಂಟು ಮಾಡುವವು. ನಾವು ನಮ್ಮೆಲ್ಲ ಕಾಮನೆಗಳಿಂದ ವಿಹೀನರಾಗಿ ಪೂರ್ಣ ವಿಶ್ವಾಸದೊಡನೆ ಭಗವಂತನಲ್ಲಿ ನೈಜ ಶ್ರೆಯಸ್ಸನ್ನು ಹೊಂದಲಿಕ್ಕೆ ನಾವು ನಮ್ಮ ಸಂಪೂರ್ಣ ಅಧಿಕಾರಗಳನ್ನು ಸಮರ್ಪಿಸಬೇಕು.

ಭಕ್ತಿ ಮತ್ತು ಪ್ರಪತ್ತಿಗಳ ಅಂತರವು 'ಮರ್ಕಟ—ಕಿಶೋರ—ನ್ಯಾಯ"ಮತ್ತು 'ಮಾರ್ಜಾರ—ಕಿಶೋರ—ನ್ಯಾಯ" ಇವುಗಳಿಂದ ವಿವರಿಸಲ್ಪಡುತ್ತದೆ. ಮಂಗನ ಮರಿಯು ತಾಯಿಯನ್ನು ಸತ್ವಃ ತಾನೇ ಗಟ್ಟಿಯಾಗಿ ಹಿಡಿದುಕೊಂಡಿರುತ್ತದೆ. ಎಲ್ಲಾದರೂ ತಾಯಿಯು ಸ್ವಲ್ಪ ಅಲುಗಿ ಹೋದಾಗ ಹಾರಿ ಅವಳನ್ನು ಹಿಡಿದುಕೊಳ್ಳುತ್ತದೆ. ಹೀಗೆ ಮಂಗನ ಮರಿಯು ಕಿಂಚಿತ್ ಪ್ರಯಾಸ ಪಟ್ಟು ತಾಯಿಯ ಆಶ್ರಯಪಡೆದರೆ, ಬೆಕ್ಕಿನ ಮರಿಗೆ ಯಾವ ಪ್ರಯಾಸವೂ ಇಲ್ಲ ಬೆಕ್ಕು ತನ್ನ ಮರಿಯನ್ನು ಬಾಯಲ್ಲಿ ಕಚ್ಚಿಕೊಂಡು ಇಚ್ಛಿತ ಸ್ಥಳಕ್ಕೆ ಹೋಗುತ್ತದೆ. ಇವುಗಳಲ್ಲಿ ಮೊದ

ಲನೆಯದು ಮರ್ಕಟ ಕಿಶೋರ ನ್ಯಾಯ ಎರಡನೆಯದು ಮಾರ್ಜಾರ ಕಿಶೋರ ನ್ಯಾಯ. ಮೊದಲನೆಯದು ಭಕ್ತಿ, ಎರಡನೆಯದು ಪ್ರಪತ್ತಿ. ಯಾವವನ ಮೇಲೆ ಭಗವತ್ ಕೃಪೆಯಾಗುವದೋ ಅವನಿಗೆ ಮಾತ್ರ ಭಗವಂತನು ಪ್ರಾಪ್ತಿಯಾಗುವದು. ಅವನೆದುರಿಗೇ ತನ್ನ ಸ್ವರೂಪವನ್ನು ಅಭಿವ್ಯಕ್ತಗೊಳಿಸುವನು. "ಪರಮಾತ್ಮನ ಕೃಪೆಯಿಂದಲೇ ವಿಶ್ವರೂಪ ದರ್ಶನವಾಯಿತೆಂದು" ಅರ್ಜುನನು ಹೇಳಿದ್ದಾನೆ. ಕೇವಲ ಭಗವಂತನ ಅನುಗ್ರಹದಿಂದಲೇ ನಿಮಗೆ ಮೋಕ್ಷ ಪ್ರಾಪ್ತಿಯಾಗುವದೆಂದು ಶ್ರೀ ಶಂಕರಾಚಾರ್ಯರೂ ಒಪ್ಪುತ್ತಾರೆ.

ಭಗವಂತನಲ್ಲಿ ಆತ್ಮ ಸಮರ್ಪಣವನ್ನು ಮಾಡಲಿಕ್ಕೆ ಪುರುಷಾರ್ಥದ ಆವಶ್ಯಕತೆಯೂ ಇದೆ, ಇಚ್ಛೆಯ ಹೊರತು ಪ್ರಯಾಸವಿಲ್ಲದೆ, ಇದು ಸಾಧ್ಯವಿಲ್ಲ.

ಶ್ರದ್ಧೆಯು ಭಕ್ತಿಗೆ ಆಧಾರ, ಶ್ರದ್ಧೆಯಿಂದ ಮಾಡುವ ಉಪಾಸನೆಯು ಅಂತಃಕರಣವನ್ನು ಪವಿತ್ರಗೊಳಿಸುತ್ತದೆ ಉಚ್ಚಮಟ್ಟದ ಚೈತನ್ಯಕ್ಕೋಸ್ಕರವಾಗಿ ಮನಸ್ಸನ್ನು ಸಿದ್ಧಗೊಳಿಸುತ್ತದೆ. ತನ್ನ ಪ್ರತಿಯೊಂದು ಅಭಿಲಾಷೆಗನುರೂಪವಾಗಿ ಭಗವಂತನ ರೂಪವನ್ನು ಸಂಗ್ರಹಿಸುತ್ತದೆ. ಮರಣೋನ್ಮುಖಿರಿಗೆ ಅದು ಅನಂತ ಜೀವನವಾಗುತ್ತದೆ. ನಾವು ಎಷ್ಟೇ ಎತ್ತರಕ್ಕೆ ಹೋದರೂ ಕ್ಷಿತಿಜವು ನಮ್ಮ ಕಣ್ಣಿನ ಮಟ್ಟಕ್ಕೆ ಇರುವಂತೆ ಭಗವತ್ ಸ್ವರೂಪವ ಮಟ್ಟವಾದರೂ ನಮ್ಮ ಚೈತನ್ಯದ ಮಟ್ಟಕ್ಕಿಂತ ಎತ್ತರವಾಗುವದೇ ಇಲ್ಲ. ಭಕ್ತಿಯ ಕೆಳಗಿನ ಭೂಮಿಕೆಯಲ್ಲಿ ನಾವು ಧನ ಮತ್ತು ಜೀವನಗಳಿಗೋಸ್ಕರ ಪ್ರಾರ್ಥಿಸುತ್ತೇವೆ. ಮತ್ತು ಭಗವಂತನನ್ನು ನಮ್ಮ ಭೌತಿಕ ಅವಶ್ಯಕತೆಗಳನ್ನು ಪೂರೈಸುವವನೆಂದು ತಿಳಿಯುತ್ತೇವೆ. ಮುಂದೆ ಹೋಗಿ ಧ್ಯಾನದಲ್ಲಿ ಶ್ರೇಷ್ಠ ಉದ್ದೇಶವಾದ ಭಗವದುದ್ದೇಶವನ್ನು ಅರಿತು ಏಕಾತ್ಮತೆಯನ್ನು ಸ್ಥಾಪಿಸುತ್ತೇವೆ ಸರ್ವೋಚ್ಚ ಭೂಮಿಕೆಯನ್ನು ತಲುಪಿದ ಬಳಿಕ ಕೇವಲ ಭಗವಂತನಿಂದಲೇ ಆತ್ಯಂತಿಕ ವೈಜತೃಪ್ತಿಯಾಗುತ್ತದೆ ಮತ್ತು ಅದೇ ಮಾನವ— ಆತ್ಮನನ್ನು ಪೂರ್ಣಸ್ಥಿತಿಗೆ ಮುಟ್ಟಿಸುತ್ತದೆ. ಮತ್ತು ಕೃತಾರ್ಥನನ್ನಾಗಿ ಮಾಡುತ್ತದೆ ಭಕ್ತಿಯ ಪರಿಭಾಷೆಯನ್ನು ವಿವರಿಸುತ್ತ "ಚಿತ್ತವು ಪ್ರೇಮೋತ್ಮತ್ತತೆಯಿಂದ ಕರಗಿ ನೀರಾಗಿ ಭಗವದಾಕಾರ ಹೊಂದುವಂಥ ಮಾನಸಿಕ ಸ್ಥಿತಿ"ಯೆಂಬದಾಗಿ ಶ್ರೀ ಮಧುಸೂದನ ಸರಸ್ವತಿಗಳು ಅಭಿಪ್ರಾಯಪಟ್ಟಿದ್ದಾರೆ ಭಗವಂತನಲ್ಲಿ ಈ ರಾಗಾತ್ಮಿಕವಾದ ಆಸಕ್ತಿಯು ಅತ್ಯುನ್ಮಾದವಾಗಿ ಪರಿಣಮಿಸಿದಾಗ ನಿಜವಾದ ಪ್ರೇಮೀಭಕ್ತನು ತನ್ನನ್ನು ಭಗವಂತನಲ್ಲಿ ವಿಲೀನಗೊಳಿಸುತ್ತಾನೆ. ಭಕ್ತ ಪ್ರಹ್ಲಾದನನ್ನು ಭಗವಂತನೊಡನೆ ಪೂರ್ಣ ಏಕಾಗ್ರತೆಯ ಆಧ್ಯಾತ್ಮಿಕ ಸ್ಥಿತಿಯಲ್ಲಿ ನಾವು ಕಾಣುತ್ತೇವೆ ಈ ಪ್ರಕಾರದ ಆತ್ಮವಿಸ್ಮೃತಿಕಾರಿ ರಸಾತ್ಮಕ ಅನುಭವ ಳು ಅದ್ವೈತ ಸಿದ್ಧಾಂತದ ಸಮರ್ಥನೆ ಮಾಡತಕತವ್ಯಗಳಿಂದ ಮನ್ನಿಸಲ್ಪಡಲು ಸಾಧ್ಯವಿಲ್ಲ ಏಕೆಂದರೆ ಅಪರೋಕ್ಷಾನುಭವವೆಂಬದು ವ್ಯಷ್ಟಿಯ ಪೃಥಕ್ ಅಸ್ತಿತ್ವವೇ ಇಲ್ಲ

ದಿರುವ ಬ್ರಹ್ಮನಲ್ಲಿ ಲೀನವಾದ ಕೊನೆಯ ಭೂಮಿಕೆ.

ಭಕ್ತಿಯುಜ್ಞಾನದ ಮೆಟ್ಟಿಲು ಆಚಾರ್ಯ ರಾಮಾನುಜರ ದೃಷ್ಟಿಯಲ್ಲಿ ಅದು ಸ್ಮರಣೆಯ ಅವಿಚ್ಛಿನ್ನಧಾರೆ ಭಕ್ತಿಯ ಜ್ವಾಲೆಯೊಡ್ಡೊಡನೆ ಅಂತರ್ಯಾಮಿಯಾದ ಭಗವಂತನು ತನ್ನ ಕೃಪೆಯಿಂದ ಭಕ್ತನು ಪರಮೇಶ್ವರನೊಡನೆ ಏಕಾತ್ಮಯೋಗದ ಅನುಭವ ಪಡೆಯುತ್ತಾನೆ ಈ ಅನುಭವದಲ್ಲಿ ವಿರೋಧಗಳೆಲ್ಲವೂ ಕರಗಿ ಹೋಗುತ್ತವೆ. ಅವನು ಭಗವಂತನನ್ನು ತನ್ನೊಳಗೂ, ತನ್ನನ್ನು ಭಗವಂತನೊಳಗೂ ನೋಡುತ್ತಾನೆ. "ಮನುಷ್ಯನ ಸರ್ವೋಚ್ಛಧ್ಯೇಯವು ಭಗವಂತನಲ್ಲಿ ಏಕಾಂತ ಭಕ್ತಿಯೆಂದೂ ಮತ್ತು ಅವನ ಸರ್ವವ್ಯಾಪಕತ್ವದ ಅನುಭವವೆಂದೂ" ಪ್ರಹ್ಲಾದನ ಉಕ್ತಿ. ಭಕ್ತನು ಸ್ನೇಹದ ಆವೇಗದಲ್ಲಿ ಪ್ರೇಮಾಸ್ಪದ ಭಗವಂತನ ವೃಕ್ಷಸ್ಥಲದಲ್ಲಿ ವಿಹಾರ ಮಾಡಲಿ ಅಥವಾ ಅವನ ಚರಣವನ್ನು ಚುಂಬಿಸಲಿ, ಯಾವ ಅಂತರವೂ ಇರುವದಿಲ್ಲ. ಇದೇ ಪ್ರಕಾರ ಜ್ಞಾನಿಯು ಚೈತನ್ಯದ ಗಡಿಯನ್ನು ದಾಟಿ ರಸದಲ್ಲಿ ಮುಳುಗಲಿ ಅಥವಾ ಭಗವಂತನನ್ನು ಪ್ರೇಮದಿಂದ ಭಜಿಸಲಿ ಎಲ್ಲವೂ ಒಂದೇ. ಭಕ್ತನು ಭಗವಚ್ಚರಣಾರವಿಂದಗಳಲ್ಲಿ ಲೀನನಾಗುವದೇ ಮುಕ್ತಿ.

"ಲೀನತಾ ಹರಿಪಾದಾಬ್ಜೇ ಮುಕ್ತಿರಿತ್ಯಭಿಧೀಯತೇ"

ಭಜಗೋವಿಂದ ಸ್ತೋತ್ರ

—ಶ್ರೀ ಶಂಕರ ಭಗವತ್ಪಾದಾಚಾರ್ಯರು

ಯಾವಜ್ಜೀವೋ ನಿವಸತಿದೇಹೇ
ತಾವತ್ಪೃಚ್ಛತಿ ಕುಶಲಂಗೇಹೆ ।
ಗತಿವತಿವಾಯೌ ದೇಹಾಪಾಯೇ
ಭಾರ್ಯಾಬಿಭ್ಯತಿ ತಸ್ಮಿನ್ ಕಾಯೇ ॥

ಟೀ॥ ದೇಹದಲ್ಲಿ ಪ್ರಾಣವಾಯುವಿರುವವರೆಗೂ ಮನೆಯಲ್ಲಿ ಎಲ್ಲರೂ ಅವನ ಕುಶಲವನ್ನು ಕೇಳಿ ತಿಳಿದುಕೊಳ್ಳುತ್ತಿರುವರು, ಆ ಉಸಿರು ನಿಂತುಹೋದರೆ (ಪ್ರಾಣ ಹೋದರೆ) ಅವನ (ಮೃತ) ದೇಹವನ್ನು ನೋಡಿ ಅತ್ಯಂತ (ಆಪ್ತಳಾಗಿದ್ದ) ಪ್ರೀತಿಯ ಸತಿಯೂ ಸಹ ಹೆದರಿಕೊಳ್ಳುವಳು.

ಅರ್ಥಮನರ್ಥಂ ಭಾವಯ ನಿತ್ಯಂ
ನಾಸ್ತಿ ತತಸ್ಸುಖಲೇಶಸ್ಸತಂ ।
ಪುತ್ರಾದಪಿ ಧನಭಾಜಾಂ ಭೀತಿಃ
ಸರ್ವತ್ರೈಷಾ ವಿಹಿತಾರೀತಿಃ ॥

ಧನವು ಅನರ್ಥಕಾರಿಯು ಮತ್ತು ಆದರಿಂದ ಸುಖವು ಸ್ವಲ್ಪವೂ ಇಲ್ಲವೆಂಬುದು ನಿಜವೆಂದು ನೀನು ಯಾವಾಗಲೂ ತಿಳಿದಿರು. (ಏಕೆಂದರೆ) ಧನಿಕರಿಗೆ ತಮ್ಮ ಮಗನಿಂದಲೇ ಭಯವುಂಟಾಗುವ ಸಂಭವವುಂಟು ಇದು ಲೋಕದಲ್ಲಿ ಸಹಜವಾದ ರೀತಿಯು.

ಬಾಲಸ್ತಾವತ್ಕ್ರೀಡಾಸಕ್ತಃ
ತರುಣಸ್ತಾವತ್ತರುಣೀಸಕ್ತಃ ।
ವೃದ್ಧಸ್ತಾವಚ್ಚಿಂತಾಮಗ್ನಃ ಪರೇ
ಬ್ರಹಣಿಕೋಽಪಿ ನ ಲಗ್ನಃ ॥

ಬಾಲನಾಗಿರುವಾಗ ಆಟಪಾಟಗಳಲ್ಲಿ ಲೋಲನಾಗಿಯೂ, ಯೌವನದಲ್ಲಿ ಯುವತಿಯಲ್ಲಿ ಆಸಕ್ತನಾಗಿಯೂ ಮುದುಕನಾದಾಗ ಚಿಂತೆಯಿಂದ ಕೂಡಿಯೂ ಇರುವುದೇ ಮನುಷ್ಯನ ರೀತಿಯೋ ಹೊರತು, ಪರಬ್ರಹ್ಮನನ್ನು ಧ್ಯಾನಿಸಿ ಆತನಲ್ಲಿ ಐಕ್ಯನಾಗಬೇಕೆಂಬ ಆಶೆಯು ಯಾರಿಗೂ ಇರುವದಿಲ್ಲ.

ಪವಾಡ ಪುರುಷರು
ಶ್ರೀ ಶಿವಾನಂದರು

ಯಾವ ಯಾವ ಸಮಯದಲ್ಲಿ ಧರ್ಮ
ಕಳೆಗುಂದುವದೋ ಆಯಾ ಸಮಯದಲ್ಲಿ
ನಾನು ಅವತರಿಸುತ್ತೇನೆ” ಎಂಬುದಾಗಿ
ಶ್ರೀ ಭಗವಂತನು ಹೇಳಿದಮೇರೆಗೆ ಯುಗ
ಯುಗಕ್ಕೂ ಭಗವಾನ್ ಸ್ವರೂಪಿಗಳಾದ
ಮಹಾತ್ಮರು ಅವತರಿಸುತ್ತ ಬಂದಿದ್ದಾರೆ.
ಅಂಥ ಮಹನೀಯರ ಮಾಲಿಕೆಯಲ್ಲಿ ಶ್ರೀ
ಶಿವಾನಂದ ಮಹಾಸ್ವಾಮಿಗಳವರೂ
ಒಬ್ಬರು. ಅವರು ಕನ್ನಡ ನಾಡಿನಲ್ಲಿ ಜನಿಸಿ
ಅಧ್ಭುತ ದಿವ್ಯಲೀಲಾ ನಾಟಕದಲ್ಲಿ ಪ್ರಮುಖ
ಪಾತ್ರವಾಗಿ ಬೆಳಗಿದವರೆಂದರೆ ಅತಿಶಯೋಕ್ತಿ
ಯಾಗಲಾರದು

ಶ್ರೀ ಶಿವಾನಂದ ಮಹಾಸ್ವಾಮಿಗಳವರು
ಸರಳ ಜೀವನದಲ್ಲಿ ಶಾಸ್ತ್ರೀಯ ಪ್ರಪಂಚ
ಸಾಗಿಸಿಕೊಂಡು ಬಂದರು. ಶ್ರೀ ರುದ್ರ
ಮುನಿಸ್ವಾಮಿ ಬನಹಟ್ಟಿ ಅವರ ಅಂತರಂಗ
ದ ಶಿಷ್ಯ ಕೋಟಿಯಲೊಬ್ಬರಾಗಿ ಜಗತ್ತಿನ
ವಿಸ್ಮಯದಲ್ಲಿ ಮೂಕವ ಅನಂತಾನಂತ
ಪವಾಡಗಳನ್ನೂ ತೋರಿಸಿದರು. ಪಾಪಿಗ
ಳನ್ನು ಕರುಣೆಯಿಂದ ನೋಡಿದರು. ಅವರ
ಜೀವ ಒಂದು ಅಗವ್ಯ ನಿಷ್ಕರುಣ ಜಗತ್ತಿನ
ಕ್ರೂರನಖಗಳಿಗೆ ಆಹುತಿಯಾದ ಬತ್ತಿದ
ಬುದ್ಧಿಗಳಿಗೆ ಛರವಸೆಯನಿತ್ತು, ಮೇಲೆತ್ತು
ವ ಅನಂತ ಚೇತನಾತ್ಮರು ಆಗಿದ್ದರು.
ತಪಪ್ರಭಾವದಿಂದಅವರವಾಣಿಯಲ್ಲಿಸಿಡಿಲಿ
ನಂತೆ ತೇಜಸ್ಸು ಹೊರಹೊಮ್ಮುತ್ತಿತ್ತು.
ಆಧ್ಯಾತ್ಮಿಕ ಜಯಡಿಂಡಿಮವನ್ನು ಬಡಿ
ದರು. ತಮ್ಮದೆ ಆದ ಒಂದು ಮಾರ್ಗವನ್ನು
ಹಾಗು ಗಾಂಭೀರ್ಯತೆಯನ್ನು ಕಾಯ್ದುಕೊ
ಕೊಂಡು ಬಂದರು. ವಿಶ್ವಮಾನವ ಕಲ್ಯಾಣ
ಬಯಸಿದ ಶರಣರಾಚರಣೆಯನ್ನು ಚಾಚೂ
ತಪ್ಪದೆ ತಮ್ಮ ಜೀವಿತದಲ್ಲಿ ನಡೆಯಿಸಿದರು

ಬಾಹ್ಯ ಚಕ್ಷುಗಳಿಗೆ ಅವರೊಂದು
ಸಾಮಾನ್ಯ ಜೀವಿಯಂತೆ ತೋರಿದರೂ
ಆಧ್ಯಾತ್ಮಿಕ ಜೀವನದಲ್ಲಿ ಅವರು ಏರಿದ
ಎತ್ತರಬದ್ಧ ಜೀವರನ್ನು ಉದ್ಧರಿಸುವ
ಮಹಾವಾರಿಧಿಯಂತೆ ವಿಶಾಲ ಭಾವದವ
ರಾಗಿದ್ದರು. ಅವರು ತಾಯಿಯೊಲುಮೆಯ
ಹ್ಹಾಗೆ ಶಿಷ್ಯರನ್ನು ಮುಕ್ತರನ್ನಾಗಿ ಮಾಡು
ವ ಕಳಕಳಿ ತುಂಬಿದವರಾಗಿದ್ದರು. ನಿರಭಿ
ಮಾನತೆ ನಿಸ್ವಾರ್ಥ ಭಾವನೆಗಳು ಅಸದಳ
ವಾಗಿದ್ದವು. ಬದ್ಧಜೀವರ ಉದ್ಧರಿಸುವ
ಹಾಗು ಆರ್ತಜೀವಗಳಿಗೆ ವಾತ್ಸಲ್ಯದ
ಪುಣ್ಯ ಮೂರ್ತಿಯಾಗಿರುವ ಅವರ ಸದ್ಗು
ಣ ಸದಾಚಾರ ಅಗಾಧ ಹೃದಯ ವೈಶಾ
ಲ್ಯವನ್ನು ಕೇವಲ ಶಬ್ದದ ಅಳತೆಗೋಲಿ
ನಿಂದ ಅಳೆಯುತ್ತೇನೆನ್ನುವದು ಯಾರಿಂದ
ಲೂ ಸಾಧ್ಯವಿಲ್ಲ ಗುರುಮಹಿಮಾ ಅಪಾರ
ವದೆ ಜನಜಾಗೃತ ಗೊಳಿಸುವ ಅವರ
ಚೈತನ್ಯ ಗಂಭೀರ ಪ್ರಶಾಂತ ವ್ಯಮ

ಮಧುರ ನುಡಿಗಳು ಗ್ರಂಥ ಬ್ಯಾಸದಿಂದ ಜನ್ಮತಾಳಿರಲಿಲ್ಲ. ತಮ್ಮ ತಪಶ್ಯಾಗ ಪ್ರಭಾವದಿಂದ ಭೂವಿತಲನ್ನು ಸೀಳಿ ಚಿಮ್ಮಿ ಬರುವ ನೀರ ಬಗ್ಗೆಯಂತೆ ಭವದ ಬೇಗೆ ಯಿಂದ ಒಳಲಿಬೆಂಡಾದ ಮನಗಳಿಗೆ ಭರವಸೆಯನ್ನು ನೀಡುವ, ಶಾಂತಿಸುಧೆಯನ್ನು ಈಯುವ ಹೃದಯಾಂತರಾಳದಿಂದ ಜನಿಸಿ ಬಂದ ಪಾವನ ಪ್ರೇಮ ಜಾಹ್ನವಿ ಆಗಿದ್ದರು ಹೊರಒಳಗೆಲ್ಲ ಒಂದೇ ಆಗಿದ್ದ ಅವರಲ್ಲಿ ಯಾವತರಹದ ಭೇದಕ್ಕೆ ಅವಕಾಶವಿದ್ದಿಲ್ಲ.

"ಯಸ್ತು ಸರ್ವಾಣಿ ಭೂತಾನ್ಯಾತ್ಮ
ನ್ಯೇವಾನುಪಶ್ಯತಿ |
ಸರ್ವ ಭೂತೇಷುಚಾತ್ಮಾನಂ
ತತೋನವಿಜುಗುಪ್ಸತೇ ||"

ಎಂಬ ಈಶೋಪನಿಷತ್ತಿನ ಮುಕ್ತನ ಲಕ್ಷಣದ ವಾಕ್ಯದ ಹಾಗೆ ಯಾವನು ಸರ್ವ ಜೀವಿಗಳನ್ನು ತನ್ನ ಆತ್ಮದಲ್ಲಿ ನೋಡುವನೋ, ತನ್ನ ಆತ್ಮವನ್ನು ಸಕಲ ಜೀವಿಗಳಲ್ಲಿ ನೋಡುವನೋ, ಅವನೆಂದೂ ಜುಗುಪ್ಸೆ ಯನ್ನು ಪಡೆವದಿಲ್ಲ ಆ ರೀತಿ ಜ್ಞಾನಿ-ಅಜ್ಞಾನಿ, ಬಡವ—ಬಲ್ಲಿದ, ಉಚ್ಚ-ನೀಚರೆಂಬ ತಾರತಮ್ಯವಿಲ್ಲದೆ ಶ್ರೀ ಶಿವಾನಂದ ಮಹಾಗುರುಗಳ ವಾತ್ಸಲ್ಯ ಗಂಗೆ ಹೊಮ್ಮಿ ಹರಿಯುತ್ತಿತ್ತು. ಅವರಲ್ಲಿ ತ್ರಿಕಾಲ ಜ್ಞಾನವಿತ್ತು; ಅಪಾರ ಶಕ್ತಿಸಾಮರ್ಥ್ಯವಿತ್ತೆಂಬ ದನ್ನು ಸ್ಪಷ್ಟರನೆ ಕರು ಕಂಡುಕೊಂಡಿದ್ದಾರೆ. ಇಂದಿಗೆ ಸುಮಾರು ೩೦ ವರ್ಷದ ಹಿಂದಿನ ಒಂದು ಘಟನೆಯು ಒಂದಾಗಿದೆ. ಸವಡಿ ಗ್ರಾಮದ ಬಸಮ್ಮನೆಂಬ ಒಬ್ಬ ಭಕ್ತಳು ಸ್ವಾಮಿಯ ದರ್ಶನಕ್ಕೆಂದು ಗದುಗಿಗೆ ಆಗಮಿಸಿದ್ದಳು ಆದರೆ ಆ ತಾಯಿ ಇಂದು ಜೀವಿತದಲ್ಲಿರುವಳು ಶ್ರೀ ಗುರುನಾಥನಾದ ಶ್ರೀ ಶಿವಾನಂದರ ಪಾರ್ಥೀವ ಶರೀರವಿರಡಿದ್ದರು, ಆಸ್ಥಾನದಲ್ಲಿ ಹಾಗು ಅವರ ಕೃಪಾಕಟಾಕ್ಷಕ್ಕೆ ಪಾತ್ರರಾದ ಮಹಿಮರನೇಕರವರೆಲ್ಲರಲ್ಲಿ ಎಂದಿನಂತೆ ಇಂದಿಗೂ ಭಕ್ತಿವಿಶ್ವಾಸಗಳಿಂದ ವರ್ತಿಸುವಳು.

ದರ್ಶನಕ್ಕೆ ಬಂದ ಬಸವ್ವನು ಗದುಗಿನ ಶ್ರೀಗಳವರ ಆಶ್ರಮಕ್ಕೆ ತಲುಪಿದಾಕ್ಷಣ ಶ್ರೀಗಳವರು ಹೆಣ್ಣುಗಳ ಮೇಲೆ ಸಂಚಾರಾರ್ಥವಾಗಿ ಹೋಗಿದ್ದಾರೆಂಬುದು ಕೇಳಿ ತಾಯಿಗಲಿದ ಕರುವಿನಂತೆ ಕಕ್ಕಾವಿಕ್ಕಿಯಾದಳು ಮನದಲ್ಲಿ ಮರುಕು ಹುಟ್ಟಿತು. ಈ ಸ್ಥಾನದಲ್ಲಿ ಹೆಣ್ಣುಮಕ್ಕಳಿಗೆ ಇರಲಿಕ್ಕೆ ಅವಕಾಶವಿಲ್ಲ ಮೇಲಾಗಿ ಗುರುಗಳಿಲ್ಲ. ವಿಶೇಷ ಗುರುತು—ಪರಿಚಯುದವರೂ ಇಲ್ಲವೆಂದು ವ್ಯಾಕುಲಚಿತ್ತಳಾದಳು. ಅಗ್ಗ ಅಲ್ಲಿದ್ದ ಅಡವಯ್ಯಸ್ವಾಮಿ ಎಂಬ ಅಡಿಗೆ ಮಾಡುವಾತ ಮಾತನಾಡಿಸಿ ಪ್ರೇಮದಿಂದ ಅಂಬಲಿ ಸಜ್ಜಿಗೆ ಉಣಿಸಿದ ಅಮೃತಪ್ರಾಯವಾದ ಅಂಬಲಿ ಗುರುಪಾದ ಕಾಣದೆ ಹಂಬಲಿಸುವ ವ್ಯಾಕುಲಾತ್ಮಕ್ಕೆ ಶಾಂತಿ ಯನ್ನು ತಂದುಕೊಟ್ಟಿತು.

ಆದರೂ ಅಂದು ಆ ತಾಯಿ ಬಸವ್ವನು ಗದುಗಿನ ಸಮೀಪದ ಗ್ರಾಮವಾದ ನರಸಾಪೂರಕ್ಕೆ ತನ್ನ ಆಪ್ತೇಷ್ಟರ ಮನೆಗೆ ಹೋದಳು ರಾತ್ರಿಯಲ್ಲಿ ಗುರುಧ್ಯಾನಾಸಕ್ತಳಾಗಿ ಮಲಗಿದ್ದಾಗ್ಗೆ ಸ್ವಪ್ನದಲ್ಲಿ ಸಾಕಾರಮೂರ್ತಿ ಒಲಗೆ (ಲಟ್ಟಿ)ಯಲ್ಲಿ ಲಿಂಗು ಧರದ ಅಜಾನುಬಾಹು ಭಸ್ಮಪೂರಿತ ಮಹಾಕಾಯ ಕಾಂತಿಯಿಂದ ದರ್ಶನವಾಯಿತು.

ತನಗಾದ ಸ್ವಪ್ನದ ಆನಂದವನ್ನು ಮನೆಯ ಬಂಧು—ಬಾಂಧವರಿಗೆ ಹೇಳಿದಳು. ಅವರು ನಿನ್ನ ಆಲ್ಹಾದ(ಆಳಿವಂಡ)ವೆಂದರು ಆದರೂ ಎರಡು ದಿವಸ ಇದ್ದು ನಿನ್ನ ಊರಿಗೆ ಹೋಗುವೆ ಎಂದು ಆಗ್ರಹ ಮಾಡಿದರು. ಮತ್ತು ಗುರುಧ್ಯಾನ ಸಕ್ತಳಾದ ಬಸಮ್ಮನು ಆ ಮನೆಯ ಬಾಂಧವರ ಸಂಗಡ ಅವರ ಹೊಲದ ಕೆಲಸಕ್ಕೆ ಹೋದಳು.

ಅಲ್ಲಿ ತೆನೆ ಕೊಯ್ಯುವ ಕೆಲಸ ನಡೆದಿತ್ತು. ಬಹುಜನರು ಕೂಲಿಯ ಆಳುಗಳಿದ್ದರು. ಅವರ ಸಂಗಡ ಬಸಮ್ಮ ತಾನು ಕೆಲಸಕ್ಕೆ ನಿಂತಿದ್ದಳು ಅಜಮಾಸು ಮುಂಜಾನೆ ೧೦ ಗಂಟೆಯ ಸುಮಾರಿಗೆ ಬಡವನಿಗೆ ಭಾಗ್ಯದನಿಧಿ ಇದ್ದಲ್ಲಿ ದೊರೆತಂತೆ ಶ್ರೀ ಜ. ಶಿವಾನಂದ ಗುರುಗಳು ಒಬ್ಬ ಶಿಷ್ಯನನ್ನು ಕರೆದುಕೊಂಡು ಆ ಭಕ್ತಳಿದ್ದಲ್ಲಿಗೆ ದಯಮಾಡಿಸಿದರು ಬಸಮ್ಮ ರಾತ್ರಿ ಸ್ವಪ್ನದ ಮೂರ್ತಿ ಎದುರಿಗೆ ಬಂದು ನಿಲ್ಲಲು ನಾನು ಎಚ್ಚರದಲ್ಲಿದ್ದೇನೊ ಇಲ್ಲವೋ ಎಂಬುದು ತಿಳಿಯದಾಗಿ, ಆ ಮುಗ್ಧಳು ಪಾದಗಳಿಗೆ ಎರಗಿದಳು. ನಾವು ಕನ್ಯಾಳ ಗ್ರಾಮದಿಂದ ಹೀಗೆ ಅಡ್ಡಾಡುತ್ತ ಇಲ್ಲಿಯವರೆಗೆ ಬಂದೆವು. ಎಂದು ಹಸನ್ಮುಖದಿಂದ ಗುರುಗಳು ನುಡಿದರು.

ಆಗ ಆ ಭಕ್ತಳು ಇಲ್ಲಿಯೇ ಸಮೀಪ ನಮ್ಮ ಬೀಗರ ಗ್ರಾಮವಿದೆ ತಾವು ಪೂಜಾದಿಕ್ರಮ ತೀರಿಸಿಕೊಂಡು ಭೋಜನ ಮಾಡಿಕೊಂಡು ಹೋಗಬೇಕೆಂದು ಅಂಗಲಾಚಿ ಬೇಡಿಕೊಂಡಳು. ಆದಕ್ಕೆ ಶ್ರೀಗಳವರು, "ತಂಗೀ, ಅಲ್ಲಿ ಭಕ್ತರು ನಿನ್ನ ಹಾಗೆ ದಾರಿ ಕಾಯುತ್ತಿದ್ದಾರೆ. ಶಾಸ್ತ್ರ ಶ್ರವಣಕ್ಕೆ ಬಹುಜನರು ಬರುವರು ತಡಮಾಡುವಂತಿಲ್ಲವೆಂದು ಅನುಗ್ರಹಿಸಿ ಶಿಷ್ಯಸಮೇತ ಕನ್ಯಾಳಕ್ಕೆ ದಯಮಾಡಿಸಿದರು.

ಈ ಮಹಾತ್ಮರು ಅಂದು ಭಕ್ತರ ಭಕ್ತಿ ಪೂರೈಸಿದ ಹಾಗೆ ಇಂದು ನಂಬಿದ ಭಕ್ತರ ಸಲಹುವರಲ್ಲದೆ, ಅನೇಕ ಅಘಟಿತ ಘಟನೆಗಳನ್ನು ಜರುಗಿಸುತ್ತಲಿದ್ದಾರೆ. ಮಹಾಶಿವಯೋಗಿ, ಬ್ರಹ್ಮಜ್ಞಾನಿ ಇಷ್ಟೇ ಅಲ್ಲ ಶ್ರೀ ಶಿವಾನಂದ ಶಿವಯೋಗಿಗಳು ಪವಾಡ ಪುರುಷರೆಂದೂ ಧಾರಾಳವಾಗಿ ಹೇಳಬಹುದು. -ಸಂ

ಭೃತ್ಯಾಚಾರ

ಶಿವಭಕ್ತರೆಲ್ಲರೂ ಪ್ರತ್ಯಕ್ಷ ಶಿವಮೂರ್ತಿಗಳೆಂದೂ, ತನ್ನ ಹೊರತು ಮಿಕ್ಕವರಾರು ಸೇವಕರಲ್ಲವೆಂದೂ ಎಲ್ಲರ ಸೇವಕನಾಗಿ ಇಲ್ಲವೆ ಸೇವಕಳಾಗಿ ಶರಣ ಮಾರ್ಗದಲ್ಲಿ ನಿರಹಂಭಾವದಿಂದು ನಿರತವಾಗುವದು ಭೃತ್ಯಾಚಾರ.

ಪಾದೋದಕ

ರಸನೇಂದ್ರಿಯವು ಬಾಹ್ಯರುಚಿಗೆ ಹರಿಯದಂತೆ ಅದರ ಸಕಲ ವ್ಯಾಪಾರವನ್ನೆಲ್ಲ ಪರಿಪೂರ್ಣವಾದ ಲಿಂಗಾನುಭವದ ಆನಂದಮಯವಾದ ಚಿದ್ರಸದಲ್ಲಿ ಭಕ್ತನನ್ನು ಲೀನ ಮಾಡಿಕೊಂಡುದುದೇ ಪಾದೋದಕ.

ನಾರಿಯ ಮುನಿಸು ವಂಶನಾಶ ಮಾಡಿತು

ಗಾಂಧಾರ ದೇಶದ ರಾಜನಾದ ಸುಬಲನ ಮಗಳಾದ ಗಾಂಧಾರಿಯು ಚಿಕ್ಕಂದಿನಿಂದಲೂ ಛಲಗಾರ್ತಿಯಾಗಿದ್ದಳು. ಕುರುಕುಲ ಪಿತಮಹಾನಾದ ಭೀಷ್ಮನ ಅಪ್ಪಣೆಯಂತೆ ಸುಬಲನು ತನ್ನ ಮಗಳನ್ನು ಕುರುಡನಾದ ಧೃತರಾಷ್ಟ್ರನಿಗೆ ಕೊಡಲು ಒಪ್ಪಿದನು ನಿಶ್ಚಿತಾರ್ಥದ ದಿನದಂದು ತನ್ನ ಪತಿಯು ಕುರುಡನೆಂದು ತಿಳಿದನಂತರ ಗಾಂಧಾರಿಯು "ಪತಿಯಂತಿರುವುದು ಸತಿಯಾದವಳ ಕರ್ತವ್ಯವೆಂದು ತಿಳಿದು ಕಾಣಿಸುವ ಕಣ್ಣಿನಮೇಲೆ ಪಟ್ಟಿಯನ್ನು ಕಟ್ಟಿಕೊಂಡಳು. ಅಂತೇ ಸಾಯುವವರೆಗೂ ಹಾಗೇ ಕಟ್ಟಿದ್ದಳು ಮದುವೆಯಾದ ನಂತರ ಗಾಂಧಾರಿಯು ಈಶ್ವರನನ್ನು ತಪಸ್ಸಿನಿಂದ ಮೆಚ್ಚಿಸಿ ನೂರು ಮಕ್ಕಳನ್ನು ಪಡೆಯುವ ವರವನ್ನು ಬೇಡಿದಳ. ಅಂತೇ ಗರ್ಭವತಿಯಾದಳು, ಎರಡು ವರ್ಷ ಗರ್ಭವು ಉದರದಲ್ಲೇ ನಿಂತು ಬೆಳೆಯಿತು. ಆ ಕಾಲಕ್ಕೆ ಕುಂತಿಯು ಯುಧಿಷ್ಠಿರನನ್ನು ಹಡೆದಳು ಈ ವಾರ್ತೆಯನ್ನು ಕೇಳಿದ ಗಾಂಧಾರಿಯು ಕುತೂಹಲದಿಂದ ತನ್ನ ಉದರವನ್ನು ಒಗೆದು ಗರ್ಭಪಿಂಡವನ್ನು ಉರುಳಿಸಿದಳು. ಅದೊಂದು ವಜ್ರದ ಗುಂಡಿನಂತಿತ್ತು. ಅದನ್ನಿತ್ತ ಒಗೆಯುವದರಲ್ಲಿದ್ದ ಗಾಂಧಾರಿಯನ್ನು ವ್ಯಾಸರು ತಡೆದು ಒಂದು ಉಪಾಯವನ್ನು ಹೇಳಿದರು. ಆ ಉಪಾಯದಂತೆ ಆ ಪಿಂಡವನ್ನು ನೂರುತುಂಡು ಮಾಡಿ ನೂರು ತುಪ್ಪದ ಕೊಡದಲ್ಲಿ ಹಾಕಿಡಲಾಯಿತ್ತು. ಕ್ರಮೇಣ ಅದರಿಂದ ನೂರು ಮಂದಿ ಕೌರವರು ಉಂಟಾದರು

ಚಿಕ್ಕಂದಿನಿಂದಲೂ ಕೌರವ—ಪಾಂಡವರಲ್ಲಿ ಹಗೆಯ ಬೀಜವು ಬೆಳೆಯುತ್ತ ಬಂದಂತನ್ನು ಕಂಡ ವ್ಯಾಸರು ಕೌರವನೊಬ್ಬನನ್ನಾದರೂ, ವಜ್ರಕಾಯವಾಗಿರಿಸಬೇಕೆಂಬ ಆಶೆಯಿಂದ ಅತನಿಗೊಂದು ಉಪಾಯವನ್ನು ಹೇಳಿಕೊಟ್ಟರು. ವ್ಯಾಸರ ಮಾತಿನಂತೆ ವಿವಸ್ತ್ರನಾಗಿ ತನ್ನ ತಾಯಿಯ ಎದುರಿನಲ್ಲಿ ನಿಲ್ಲಲು ಹೋಗಹತ್ತಿರುವ ಯುವಕನಾದ ಕೌರವನನ್ನು ಕಂಡ ಶ್ರೀಕೃಷ್ಣನು ಕಾರ್ಯವನ್ನು ಕೆಡಿಸಬೇಕೆಂದು ಯೋಚಿಸಿ ಆತನನ್ನು ತಡೆದು ಹೀಗೆಂದನು- ದುರ್ಯೋಧನಾ, ನಿನ್ನ ಮಾತೆಯಾದ ಗಾಂಧಾರಿಯು ಮೊದಲನೇಸಲ ಕಣ್ಣಿನ ಪಟ್ಟಿಯನ್ನು ಬಿಚ್ಚುತ್ತಾಳೆ, ಆಗ ಆಕೆ ಕಾಣಬೇಕಾದುದು ನಿನ್ನ ಬತ್ತಲೆಯ ಶರೀರವನ್ನೇ ? ಯುವಕನಾದ ನಿನಗೆ ನಾಚಿಕೆಯಾಗುವದಿಲ್ಲವೇ ? ಕೃಷ್ಣನ ಮಾತನ್ನು ಕೇಳಿದ ದುರ್ಯೋಧನನು ಗುಪ್ತಾಂಗವನ್ನು ತೊಡೆ ಮುಚ್ಚುವ ಬಟ್ಟೆ ತೊಟ್ಟು ಮರೆಮಾಡಿಕೊಂಡನು.

(ಲಾ. ನೇಸ್ರುಟಕ್ಕೆ)

ಉದ್ಯೋಗಾವಕಾಶಗಳು

ಲೇ : ಶ್ರೀ ಡಿ. ಸಂಜೀವಯ್ಯ

(ಕೇಂದ್ರ ಕಾರ್ಮಿಕ ಹಾಗೂ ಉದ್ಯೋಗ ಶಾಖೆ ಮಂತ್ರಿಗಳು)

ಉದ್ಯೋಗಾವಕಾಶಗಳನ್ನು ಹೆಚ್ಚು ಹೆಚ್ಚಾಗಿ ಕಲ್ಪಿಸುವುದು ಪಂಚವಾರ್ಷಿಕ ಯೋಜನೆಯ ಒಂದು ಮುಖ್ಯ ಗುರಿಯಾಗಿದೆ ೧೯೫೧ರಿಂದ ನಡೆದ ಸತತ ಪ್ರಯತ್ನಗಳ ಫಲವಾಗಿ ಉದ್ಯೋಗಾವಕಾಶಗಳು ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿವೆ. ಆದರೂ ಜನಸಂಖ್ಯೆಯ ತೀವ್ರ ಹೆಚ್ಚಳಿಕೆ ಫಲವಾಗಿಯೂ ಹಣಕಾಸಿನ ಕೊರತೆ ಹಾಗೂ ಇತರ ಸಂಪತ್ಸಾಧನಗಳ ಕುಂದುಕೊರತೆಗಳ ಫಲವಾಗಿಯೂ ಇನ್ನೂ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸಲು ಸಾಧ್ಯವಾಗದೇ ಹೋಗಿದೆ.

ತೃತೀಯ ಯೋಜನೆ ಪ್ರಾರಂಭದಲ್ಲಿ ಸುಮಾರು ೮೦ ಲಕ್ಷ ಜನ ನಿರುದ್ಯೋಗಿಗಳಾಗಿದ್ದರು. ತೃತೀಯ ಯೋಜನೆಯ ಅವಧಿಯಲ್ಲಿ ಸುಮಾರು ೧೪ ದಶಲಕ್ಷ ಮಂದಿ ಜನರಿಗೆ ಉದ್ಯೋಗಗಳು ದೊರೆತಿವೆ. ಸುಮಾರು ೧೩ ದಶಲಕ್ಷ ಜನರಿಗೆ ತೃತೀಯ ಯೋಜನೆಯ ಫಲವಾಗಿ ಹೊಸದಾಗಿ ಉದ್ಯೋಗಾವಕಾಶಗಳು ದೊರಕುವ ನಿರೀಕ್ಷೆ ಇದೆ. ನಾಲ್ಕನೆಯ ಯೋಜನೆಯ ಪ್ರಾರಂಭ ಕಾಲದಲ್ಲಿ ಇನ್ನೂ ಸುಮಾರು ೧೨ ದಶಲಕ್ಷ ಜನರು ಉದ್ಯೋಗಾವಕಾಶಗಳಿಗಾಗಿ ಕಾದಿರುತ್ತಾರೆ. ನಾಲ್ಕನೆಯ ಯೋಜನೆಯಲ್ಲಿ ಸುಮಾರು ೨೦—೨೧ ದಶಲಕ್ಷ ಜನರಿಗೆ ಉದ್ಯೋಗಾವಕಾಶಗಳು ಸಿಗುವ ನಿರೀಕ್ಷೆಯಿದೆ.

ಮುಂದಿನ ದಶಕದ ಮಧ್ಯಭಾಗದ ಹೊತ್ತಿಗೆ ನಿರುದ್ಯೋಗವನ್ನು ಸಂಪೂರ್ಣವಾಗಿ ನಿವಾರಿಸುವುದು ನಮ್ಮ ಗುರಿಯಾಗಿದೆ. ಈ ಗುರಿಯನ್ನು ಮುಟ್ಟಬೇಕಾದರೆ ಮುಂದಿನ ಯೋಜನೆಯ ಅವಧಿಯಲ್ಲಿ ಉದ್ಯೋಗಾಪೇಕ್ಷಿಗಳಾಗಿ ಮುಂದೆ ಬರುವವರೆಲ್ಲರಿಗೂ ಉದ್ಯೋಗಗಳನ್ನು ಕಲ್ಪಿಸುವ ಪ್ರಯತ್ನ ನಡೆಸಬೇಕು.

೧೯೬೧ರಿಂದ ೧೯೭೬ರ ವರೆಗೆ ಒಟ್ಟು ಕಾರ್ಮಿಕ ಸಂಖ್ಯೆ ನಮ್ಮ ದೇಶದಲ್ಲಿ ೭೦ ದಶಲಕ್ಷದಷ್ಟಾಗಬಹುದು. ಬೇಸಾಯೇತರ ಕ್ಷೇತ್ರಗಳಲ್ಲಿಯೇ ಉದ್ಯೋಗಾವಕಾಶಗಳು ಹೆಚ್ಚು. ಇದು ನಮ್ಮ ಅನುಭವ. ಇದೇ ಪ್ರವೃತ್ತಿ ಮುಂದುವರಿಯುತ್ತದೆಯೆಂದು

ನಿರೀಕ್ಷಿಸುವುದೇ ಆದರೆ ಸುಮಾರು ಮೂರನೆಯ ಎರಡರಷ್ಟು ಉದ್ಯೋಗಾಪೇಕ್ಷಿಗಳನ್ನು ಬೇಸಾಯೇತರ ಕ್ಷೇತ್ರಗಳಲ್ಲಿ ವಿವಿಧ ಕೆಲಸಗಳಿಗೆ ನೇಮಿಸುವುದಾದರೆ ೧೯೭೬ರ ಹೊತ್ತಿಗೆ ಬೇಸಾಯವನ್ನಾಶ್ರಯಿಸಿರುವ ಕಾರ್ಮಿಕ ಸಂಖ್ಯೆಯನ್ನು ಸುಮಾರು ಶೇಕಡ ೬೦ಕ್ಕೆ ಇಳಿಸಬಹುದು. ಈ ಗುರಿಯನ್ನು ಗಮನದಲ್ಲಿಟ್ಟುಕೊಂಡು ನಾವು ಕೆಲಸ ಮಾಡಬೇಕಾಗಿದೆ.

ಇದೇ ದೃಷ್ಟಿಯನ್ನು ಮುಖ್ಯವಾಗಿಟ್ಟುಕೊಂಡು ಬೇಸಾಯೇತರ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು ಅವಶ್ಯವಾಗಿದೆ. ಆರ್ಥಿಕ ಭದ್ರತೆಗೆ ಕುಂದುಬಾರದ ರೀತಿಯಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು ನಾಲ್ಕನೆಯ ಯೋಜನೆಯಲ್ಲಿ ನಮ್ಮ ಗುರಿಯಾಗಿದೆ.

ಸಂಖ್ಯೆಯದೃಷ್ಟಿಗೆ ಗಮನ ಕೊಟ್ಟರಷ್ಟೇ ಸಾಲದು. ಗುಣಮೌಲ್ಯದ ಕಡೆಗೂ ದೃಷ್ಟಿ ಹರಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ನಿರುದ್ಯೋಗಿಗಳ ಸಂಖ್ಯೆ ಕೂಡ ಮುಖ್ಯವಾಗುತ್ತದೆ. ಅವರಿಗೆ ಯಾವುದೇ ರೀತಿಯ ವಿಶೇಷ ಅರ್ಹತೆಗಳೂ ಇರುವುದಿಲ್ಲ. ಸ್ಥಳೀಯ ಪರಿಸ್ಥಿತಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಹೊಸಹೊಸ ಉದ್ಯೋಗಾವಕಾಶಗಳನ್ನು ಅವರಿಗೆ ದೊರಕಿಸಬೇಕಾಗುತ್ತದೆ. ಯಾವ ಕೆಲಸ ಕೊಟ್ಟರೂ ಅವರು ಮಾಡುತ್ತಾರೆಂಬ ನಿರೀಕ್ಷೆ ಮಾತ್ರ ಸುಳ್ಳಾಗುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗ ಸ್ವರೂಪ ಸಾಮಾನ್ಯವಾಗಿ ಒಂದು ಕುಟುಂಬದ ಅಗತ್ಯಗಳು, ಸ್ಥಾನಮಾನ ಹಾಗೂ ದುಡಿಮೆಯ ವಿಚಾರದಲ್ಲಿ ಕುಟುಂಬದ ಸದಸ್ಯರು ಅನುಸರಿಸಿಕೊಂಡು ಬಂದಿರುವ ಸಂಪ್ರದಾಯ ಇವುಗಳನ್ನನುಸರಿಸಿ ಇತ್ಯರ್ಥವಾಗುತ್ತದೆ. ಎಂದೇ ಒಂದೊಂದು ಕಡೆಯಲ್ಲೂ ಈ ರೀತಿಯ ಸ್ಥಳೀಯ ಸ್ಥಿತಿಗತಿಗಳನ್ನು ಗಮನಿಸಿ ಉದ್ಯೋಗಾವಕಾಶಗಳನ್ನು ನಿರ್ಮಿಸಬೇಕಾಗುತ್ತದೆ.

ಈ ತನಕ ನಿರ್ಮಿಸಲ್ಪಟ್ಟಿರುವ ಉದ್ಯೋಗಾವಕಾಶಗಳನ್ನು ವಿಚಾರಮಾಡಿ ನೋಡಿದರೆ ಸಾಧ್ಯವಾಗುವ ಪ್ರಗತಿ ಗಮನಾರ್ಹವಾದುದು. ಮೊದಲು ಎರಡು ಪಂಚವಾರ್ಷಿಕ ಯೋಜನೆಗಳ ಕಾಲದಲ್ಲಿ ಕೈಗೊಂಡ ವಿವಿಧ ಕಾರ್ಯ ಯೋಜನೆಗಳ ಫಲವಾಗಿ ೧೪ರಿಂದ ೧೫ ದಶಲಕ್ಷ ಜನರಿಗೆ ಹೊಸದಾಗಿ ಉದ್ಯೋಗಾವಕಾಶಗಳು ದೊರಕಲು ಅವಕಾಶವಾಯಿತು. ಶೈಕ್ಷಣಿಕ ಹಾಗೂ ಸಾರ್ವಜನಿಕ ಆರೋಗ್ಯ ಸಂಬಂಧವಾದ ಸೇವಾ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ತೀವ್ರವಾಗಿ ಹೆಚ್ಚಾಗಿದೆ. ಅದೇರೀತಿಯಲ್ಲಿ ಸಾಮಾಜಿಕ ಸೇವಾ ಕ್ಷೇತ್ರಗಳಲ್ಲೂ ಕೂಡ ಉದ್ಯೋಗಾವಕಾಶಗಳು ತುಂಬಾ ಹೆಚ್ಚಿವೆ. ಕೈಗಾರಿಕೆಗಳು ಬೆಳೆದಂತೆ, ಎಣ್ಣೆ ಉದ್ಯಮ ಹಾಗೂ ಪೆಟ್ರೋ ಕೆಮಿಕಲ್ ಕೈಗಾರಿಕೆಗಳು ಹೆಚ್ಚಿದಂತೆ ಮತ್ತು ಮಿಷಿನ್ ಟೂಲ್ ತಯಾರಿಕೆ ಕೂಡ ಹೆಚ್ಚಾದಂತೆ ಉದ್ಯೋಗಾವಕಾಶಗಳು ತಾನೇತಾನಾಗಿ ಇನ್ನೂ ಹೆಚ್ಚಿಕೊಳ್ಳುತ್ತವೆ ತಾಂತ್ರಿಕ ಸಿಬ್ಬಂದಿ ವರ್ಗವನ್ನು ಹೆಚ್ಚಿಸುವ

ಬೇಡಿಕೆ ತೀವ್ರವಾದಂತೆ ತಾಂತ್ರಿಕ ಶಿಕ್ಷಣದ ಸೌಲಭ್ಯಗಳೂ ಹೆಚ್ಚುತ್ತಾ ಹೋಗುತ್ತವೆ. ಕೈಗಾರಿಕಾ ತರಬೇತಿ ಕಾರ್ಯ ಯೋಜನೆಗಳೂ ಅಪ್ರೆಂಟಿಸ್ ಕಾರ್ಯ ಯೋಜನೆಗಳೂ ಹೆಚ್ಚುತ್ತಿದ್ದು ಅವುಗಳ ವ್ಯಾಪ್ತಿ ಕೂಡ ತುಂಬಾ ವ್ಯಾಪಕವಾಗಿ ಬೆಳೆಯುತ್ತಿದೆ ಗ್ರಾಮಾಂತರ [illegible]
ಕರಣ ಕಾರ್ಯ [illegible]
ಅಲ್ಲಿ ಉದ್ಯೋಗಾವ [illegible]
ಹೆಚ್ಚಾಗುತ್ತಿವೆ.

ಜನಬಲದ ಪೂ [illegible]
ಯಬೇಕು. ಉತ್ಪ [illegible]
ಇದು ಬಹಳ ಅವ [illegible]
ತುಂಬಾ ಪ್ರಾಮುಖ [illegible]
ವರ್ಷ ಈ ವಿಚಾರ [illegible]
ಗೋಷ್ಠಿ ನಡೆಯಿತ [illegible]
ಗದ ಪ್ರತಿನಿಧಿಗಳೂ [illegible]
ಪ್ರತಿನಿಧಿಗಳೂ ಈ [illegible]
ಭಾಗವಹಿಸಿದ್ದರು [illegible]
ಮಂಡಿಸಿದ ಅಭಿಪ [illegible]
ದಲ್ಲಿಟ್ಟುಕೊಂಡು [illegible]
ಗಳನ್ನೂ ಕೈಗೊಳ್ಳ [illegible]
ಪೂರ್ಣ ಪ್ರಯೋಜ [illegible] ಸಂಬಂಧವಾದ ಹಲವಾರು ಸಮಸ್ಯೆಗಳು ಇದೀಗ ಸರಕಾರದ ತೀವ್ರ ಪರಿಶೀಲನೆಯಲ್ಲಿದೆ

ಉದ್ಯೋಗಾವಕಾಶಗಳನ್ನು ಒದಗಿಸುವ ವಿಚಾರದಲ್ಲಿ ನಮ್ಮಲ್ಲಿರುವ ಕೆಲವು ಮುಖ್ಯ ದೋಷಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನಮಗೆ ಬೇಕಾದ ಕೆಲವು ಉದ್ಯೋಗಗಳಿಗೆ ಜನ ಸಿಕ್ಕುವುದೇ ಕಷ್ಟವಾಗಿದೆ. ಕೆಲವು ಬಗೆಯ ಉದ್ಯೋಗಗಳಿಗೆ ಜನರ ನೂಕುನುಗ್ಗಲು ಇದೆ. ಎಲ್ಲರೂ ಸಾಮಾನ್ಯವಾಗಿ ಅಂತಹ ಉದ್ಯೋಗಗಳನ್ನೇ ಹುಡುಕಿಕೊಂಡು ಬರುತ್ತಾರೆ.

ಈ ಕೆಲವು ವಿಚಾರಗಳನ್ನು ಗಮನದಲ್ಲಿ [illegible]
[illegible] ಗ, ನಮ್ಮ ಪ್ರಯ
[illegible] ಲ್ಲಿ ಸಾಗಬೇಕು
[illegible] ದೆ. ರಾಷ್ಟ್ರೀಯ
[illegible] ಟ್ಟದಲ್ಲಿ ಮತ್ತು
[illegible] ರ್ಥಿಕ ಕ್ಷೇತ್ರ
[illegible] ದ್ಯೋಗಾವಕಾ
[illegible] ಮ್ಮ ಕಣ್ಮುಂದೆ
[illegible] ವಾದ ಬಂದು
[illegible] ಕಡೆಗೆ ಗಮನ
[illegible] ಮುಖ್ಯವಾಗಿದೆ
[illegible] ನ್ಯಾಶನಲ್
[illegible] ಗ ಹಾಗೂ
[illegible] ರಿ, ಜನಬಲ
[illegible] ಭೇರಿ, ಸಂಶೋ
[illegible] ಬೇರೆ ಸಂಸ್ಥೆ
[illegible] ಳಿಗೆ ಸಂಬಂಧಿಸಿದಂತೆ ವಿಶೇಷ ರೀತಿಯ ಅಧ್ಯಯನ ಕಾರ್ಯವನ್ನು ನಡೆಸುತ್ತಿವೆ ಅವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಒಂದು ಸಮನ್ವಯ ವ್ಯವಸ್ಥೆಯ ಆಧಾರದ ಮೇಲೆ ಸರ್ಕಾರ ಕೆಲಸ ಮಾಡಬೇಕಾಗಿದೆ.

——————

೨೬ ನೇಪುಟದಿಂದ ಬಂದದ್ದು

ಮಗನು ಎದುರು ನಿಂತದನ್ನು ತಿಳಿದು ಗಾಂಧಾರಿಯು ಕಣ್ಣಿನ ಪಟ್ಟಿಯನ್ನು ಬಿಚ್ಚಿದಳು. ಆ ಪತಿವೃತಾ ಶಿರೋಮಣಿಯ ದೃಷ್ಟಿಬಿದ್ದ ಶರೀರದ ಭಾಗವೆಲ್ಲ ವಜ್ರದಂತೆ ಗಟ್ಟಿಯಾಯಿತು. ಆದರೆ ತೊಡೆಯು ಭಾಗವು ಹಾಗೆ ಉಳಿಯಿತು. ಅದೇ ಭಾಗಕ್ಕೆ ಭೀಮನಿಂದ ಹೊಡಿಸಿ ಶ್ರೀ ಕೃಷ್ಣನು ದುರ್ಯೋಧನನನ್ನು ಕೊಲ್ಲಿಸಿದನು.

ಭಾರತದ ಯುದ್ಧದ ಕೊನೆಗೆ ತನ್ನ ಎಲ್ಲಾ ಮಕ್ಕಳನ್ನು ಕಳೆದುಕೊಂಡ ಗಾಂಧಾರಿಯು ಸಹನೆಯು ಮೀರಿತು. ತನ್ನ ಪುತ್ರರನ್ನು ಶ್ರೀ ಕೃಷ್ಣನೇ ಕೊಲ್ಲಿಸಿದನೆಂದು ಆಕೆಗೆ ತಿಳಿದು ಕೋಪಾಗ್ನಿಯು ಪ್ರಜ್ವಲಿಸಿತು ಕೊನೆಗೆ ಶ್ರೀ ಕೃಷ್ಣನನ್ನು ಕರೆದ್ದು ಶಾಪವಿತ್ತಳು— 'ನೀನು ಸರ್ವೇಶ್ವರನಾಗಿಯೂ ನನ್ನ ವಂಶವು ನಾಶವಾಗುತ್ತಿರುವದನ್ನು ನಗುತ್ತ ನೋಡಿದೆ, ಯಾವ ರೀತಿಯಲ್ಲಿ ಇಂದು ಕುರುಕುಲವು ನಾಶವಾಗುತ್ತಿರುವುದನ್ನು ಕಂಡೂ ಸುಮ್ಮನಿದ್ದಿಯೋ ಅಂತೇ ಇಂದಿನಿಂದ ಮೂವತ್ತು ವರ್ಷಗಳ ನಂತರ ನಿನ್ನ ವಂಶವಾದ ಯದುವಂಶವೂ ನಾಶವಾಗುತ್ತಿರುವದನ್ನು ನೋಡುತ್ತಿರು ಇಂದು ಯಾವ ರೀತಿಯಲ್ಲಿ ಕುರುಕುಲದ ರಮಣಿಯರ ಕಣ್ಣೀರನ್ನು ಕಂಡೆಯೋ ಅಂತೇ ಅಂದು ಯದುಕುಲದ ರಮಣಿಯರ ಕಣ್ಣೀರನ್ನು ನೋಡು' ಎಂದು ಶಾಪವಿತ್ತಳು. ಕೊನೆಗೆ ಆಕೆಯ ಶಾಪವೂ ಫಲಿಸಿತು.

ಸಂಗ್ರಹಕರು—

ಡಾ. ಭೀಮರಾವ ದೇ. ಪತ್ತಾರ

ಜಾಪೂರ

ಶ್ರದ್ಧಾಂಜಲಿ

ವೇ| ಬ್ರ| ಶ್ರೀ ಅಪರೋಕ್ಷಾನುಭವಿ ಸಕ್ರಪ್ಪ ಸ್ವಾಮಿಗಳವರು ರಾಯದುರ್ಗ ಅವರು (ತಾ. ೨೫—೫—೬೫) ಬ್ರಾಹ್ಮೀಭೂತರಾದರೆಂಬುದು ಕೇಳಿ ಅತ್ಯಂತ ಖೇದವೆನಿಸುತ್ತದೆ

ದಿವಂಗತ ಸಕ್ಕರಪ್ಪ ಸ್ವಾಮಿಗಳನ್ನು ನಾನು ಪ್ರ ಪ್ರಥಮವಾಗಿ ಕಂಡದ್ದು ಶ್ರೀ ಸದ್ಗುರು ಸಿದ್ಧಾರೂಢ ಮಹಾಸ್ವಾಮಿಗಳವರ ಮಠದಲ್ಲಿ ಜರುಗಿದ ವೇದಾಂತ ಪರಿಷತ್ತಿನಲ್ಲಿ ಅಂದಿನ ನೆನವು ಸ್ಮರಣಕ್ಕೆ ಬರುತ್ತದೆ ಅವರು ವಾಙ್ಮಗಳು ಅಲ್ಲದೆ ಉತ್ತಮ ಬರಹಗಾರರಾಗಿದ್ದರು. ಸುಖಾಶ್ರಯ ಪ್ರಬೋಧ" ಮಾಸಪತ್ರಿಕೆಯ ಸಂಸ್ಥಾಪಕರಾಗಿದ್ದರು. ಆಧ್ಯಾತ್ಮಪರ ಎಷ್ಟೋ ಲೇಖನ ಕಥೆ—ಕವನ—ಗ್ರಂಥ—ಪುರಾಣಗಳನ್ನು ರಚಿಸಿ ಕನ್ನಡ ಸಾಹಿತ್ಯ ಸೇವೆಗೆ ತಮ್ಮ ಶಕ್ತಿಮೀರಿ ಸಹಾಯ ಸಲ್ಲಿಸಿ ಅಮರಾತ್ಮರಾಗಿದ್ದಾರೆ.

ಆದರೆ ಅವರ ಮಾರ್ಗದರ್ಶನ ನಮಗೆ ಇನ್ನು ಕೆಲವು ಕಾಲಬೇಕಾಗಿತ್ತು. ಇಂದು ಅವರ ಅಗಲುವಿಕೆಯಿಂದ ಆಧ್ಯಾತ್ಮ ಅನುಸಂಧಾಯಕರಿಗೆ ಅಷ್ಟೇಅಲ್ಲ; ಕನ್ನಡಿಗರಿಗೆ ತುಂಬಿಬಾರದ ಹಾನಿಯಾಗಿದೆ. ಬ್ರಹ್ಮೀಭೂತರಾದ ಅಪರೋಕ್ಷ ಅನುಭವಿ ಸಕ್ರಪ್ಪನವರ ಆತ್ಮಕ್ಕೆ ಶಾಂತಿ ಕೋರುವರೆಂದರೆ, ಅವರ ಅಮರ ಸಂದೇಶದ ಮಾರ್ಗದರ್ಶನದಲ್ಲಿ ನಾವು ಬೆಳೆದು ಬಾಳಬೇಕಾದದು ಪ್ರಾವಮುಖ್ಯವಾದುದು.

ಮುಖ ಚಿತ್ರ

ಶ್ರೀ ಸಂತಜ್ಞಾನೇಶ್ವ ಮಹಾರಾಜ

...ರಿಗೆಗಳಲ್ಲಿ ಕಾರ್ಪೊರೇಶನ್ನಿಗೆ ...ಯೋಗ್ಯ ಪಾಲು ಸಿಗಬೇಕು

...ಗರಾಡಳಿತ ಸಚಿವರ ಅಭಿಪ್ರಾಯ

ಬೆಂಗಳೂರು ೧೯- ನಗರ ಕಾರ್ಪೋರೇಶನ ...ವರು ವೇಯೋ ಭವನದಲ್ಲಿ ತಮ್ಮ ಗೌರವಾ...ವಾಗಿ ನಿನ್ನೆ ದಿವಸ ಏರ್ಪಡಿಸಿದ್ದ ಸತ್ಕಾರ ...ಭೆಯಲ್ಲಿ ಉತ್ತರರೂಪವಾಗಿ ಭಾಷಣ ...ಮಾಡುತ್ತ ನಗರಾಡಳಿತ ಸಚಿವರಾದ ಶ್ರೀ ಆರ್ ...ಂ ಪಾಟೀಲರು ಆರೋಗ್ಯ ಹಾಗೂ ವಿದ್ಯಾ...ಭ್ಯಾಸ ತೆರಿಗೆಗಳಲ್ಲಿ ಕಾರ್ಪೋರೇಶನ್ನಿಗೆ ನ್ಯಾಯ...ವಾದ ಪಾಲು ದೊರೆಯಬೇಕೆಂದೂ ವಾಹನ ...ತೆರಿಗೆಯಲ್ಲಿ ಈಗ ಕೊಡಲಾಗುತ್ತಿರುವ ಪಾಲು ...ಕಡಿಮೆಯಿದ್ದು ಅದು ಹೆಚ್ಚಾಗಬೇಕೆಂದೂ ಅಭಿ...ಪ್ರಾಯ ವ್ಯಕ್ತ ಮಾಡಿದರು.

ಮುಂದುವರೆದು ಅವರು ನಗರದ ...ಆರೋಗ್ಯ ಸ್ವಚ್ಛತೆ ಮೊದಲಾದವನ್ನು ಕಾಪಾಡಿ...ಕೊಂಡು ಬಂದು ಅಂತಾರಾಷ್ಟ್ರೀಯ ಪ್ರವಾಸಿ ...ಕೇಂದ್ರವೆನಿಸಿರುವ ಬೆಂಗಳೂರನ್ನು ಸುಂದರ ...ನಗರವನ್ನಾಗಿ ಮಾಡಬೇಕೆಂದು ಪ್ರಾರ್ಥಿಸಿದರು. ...ಮುಖ್ಯವಾಗಿ ಕೊಳಚೆ ಪ್ರದೇಶಗಳ ನಿರ್ಮೂಲನ...ಕ್ಕೆ ಗಮನ ಕೊಡಬೇಕು ಎಂದರು.

...ಪ್ರಾರಂಭದಲ್ಲಿ ಮೇಯರರಾದ ಶ್ರೀ ಕೆ ಎಂ ...ನವರು ಸ್ವಾಗತ ಕೋರಿ ವಾಹನ ...ಯಲ್ಲಿ ಕಾರ್ಪೋರೇಶನ್ನಿಗೆ ನ್ಯಾಯವಾದ ... ಕೊಡಬೇಕು. ಮನರಂಜನೆ ಕರ ಹಾಗು ...ನ ಕರಗಳನ್ನು ಕಾರ್ಪೋರೇಶನ್ನಿಗೆ ... ಕೊಡಬೇಕು. ಕಟ್ಟಡಗಳ ಮೇಲಿ ಆಸ್ತಿ ...ವಸೂಲ ಮಾಡಲು ಬದ್ಧವಂತೆ ಕಾರ್ಪೊ...

ವಿದ್ಯಾರ್ಥಿ ವೇತನದ ಹಣ ದುರುಪಯೋಗ- ಆದರೆ ಸೂಕ್ತ ಕ್ರಮ

ಬೆಂಗಳೂರು ೧೯— ವಿದ್ಯಾರ್ಥಿ ವೇತನ ಹಣವನ್ನು ಪಡೆದು ವಿದ್ಯಾರ್ಥಿಗಳಿಗೆ ನೀಡದೆ, ಶಾಲಾ ನಿಧಿಗೆ ಸೇರಿಸಿಕೊಂಡ ಸಹಾಯ ಧನ ಪಡೆಯುವ ಪ್ರೌಢ ಶಾಲೆಗಳ ಆಡಳಿತ ವರ್ಗದ ಬಗ್ಗೆ ಸೂಕ್ತ ರೀತಿಯಲ್ಲಿ ಕ್ರಮ ಕೈಕೊಳ್ಳಲಾಗಿದೆಯೆಂದು ಸರಕಾರ ತಿಳಿಸಿದೆ.

ಸಹಾಯ ಧನ ಪಡೆಯುವ ಹಲವು ಪ್ರೌಢ ಶಾಲೆಗಳ ಆಡಳಿತ ವರ್ಗದವರು ೧೯೬೩-೬೪ ರಲ್ಲಿ ಸರಕಾರದಿಂದ ಸ್ಕಾಲರ್‌ಶಿಪ್ ಹಣ ಪಡೆದು ಸ್ಕಾಲರ್‌ಶಿಪ್ ಹಣ ಪಡೆದವರು ಉಚಿತ ಶಿಕ್ಷಣಕ್ಕೆ ಅರ್ಹರಲ್ಲವೆಂದೂ ಆ ಹಣವನ್ನು ಉಚಿತ ಸೆಕೆಂಡರಿ ಶಿಕ್ಷಣ ಶುಲ್ಕಕ್ಕೆ ಸ್ಕಾಲರಶಿಪ್ ಹಣವನ್ನು ಇಲ್ಲವೆಂದು ಜಮಾ ಮಾಡಿಕೊಳ್ಳಲಾಗಿರುವುದೆಂದೂ ಹೇಳಿ. ಶಾಲಾ ನಿಧಿಗೆ ಆ ಹಣವನ್ನು ಸೇರಿಸಿಕೊಂಡಿರುವುದು ಗೊತ್ತಾಗಿ ಸೂಕ್ತಕ್ರಮ ಕೈಗೊಳ್ಳಲಾಗಿದೆ ಯೆಂದು ಸರಕಾರ ತಿಳಿಸಿದೆ.

ಉಚಿತ ಶಿಕ್ಷಣದ ಜೊತೆಗೆ ವರ್ಷಕ್ಕೆ ಪೋಷಕರ ಆದಾಯ ೨೪೦೦ ರೂ ಗಳಿಗಿಂತ ಕಡಿಮೆಯಿರುವ ಬಡ ಮತ್ತು ಅರ್ಹ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಂದುವರೆಸಲೆಂದು ಸ್ಕಾಲರಶಿಪ್ ನೀಡಲಾಗುತ್ತಿದೆ. ಆದ್ದರಿಂದ ...

ಕಾರ್ಮಿಕ ಪ್ರತಿನಿಧಿಗಳ ಸಾಮೂಹಿಕ ನಿರಶನ

ಬೆಂಗಳೂರು ೧೯- ನಗರದ ಎಚ್. ಎ. ಎಲ್, ಬಿ ಇ ಎಲ್, ಎಚ್ ಎಂ ಟಿ ಹಾಗು ಭಾರತ ಅರ್ಥ ಮೂವರ್ಸ ಕಾರಖಾನೆಗಳ ನೌಕರರ ಸಂಘದ ಪ್ರತಿನಿಧಿಗಳು ಇದೇ ದಿ. ೨೧—೨೨-೨೩ ರಂದು ಸಾಮೂಹಿಕ ಉಪವಾಸ ಸತ್ಯಾಗ್ರಹವನ್ನು ಆಚರಿಸಲಿದ್ದಾರೆ. ಇದಲ್ಲದೆ ದಿ. ೨೨ ರಂದು ಮೇಲಿನ ಎಲ್ಲ ಕಾರಖಾನೆಗಳ ನೌಕರರು ೧ ದಿನದ ಉಪವಾಸ ಮಾಡುವರು. ಆಡಳಿತ ವರ್ಗದವರು ಕಾರ್ಮಿಕರ ಪ್ರಮುಖ ಬೇಡಿಕೆಗಳನ್ನು ಇನ್ನೂ ಮಾನ್ಯ ಮಾಡದಿರುವುದೇ ಈ ಪ್ರತಿಭಟನೆಗೆ ಕಾರಣವಾಗಿದೆ. ತುಟ್ಟಿಭತ್ತೆಯನ್ನು ಜೀವನ ಸೂಚ್ಯಂಕದ ಗುಣವಾಗಿ ನೀಡಬೇಕು, ವೇತನವನ್ನು ೧೦೦ ಕ್ಕೆ ೨೫ ರಷ್ಟು ಹೆಚ್ಚಿಸಬೇಕು. ನೂರಕ್ಕೆ ೨೦ ರಷ್ಟು ಬೋನಸ ನೀಡಬೇಕು ಮೊದಲಾದ ಬೇಡಿಕೆಗಳಿವೆ.

...ಟಿಕೆಟ್ ಇವರಿಂದ ದೊರೆಯುವು.

ಪ್ರಕಟಣೆ

ಜನರಲ್ ನರ್ಸಿಂಗ್‌ನಲ್ಲಿ ತರಬೇತಿ ಕೋರ್ಸಿಗೆ ಪ್ರವೇಶಕ್ಕಾಗಿ ಯೋಗ್ಯ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳಿಂದ ನಿಗದಿಯಾದ ಫಾರಂನಲ್ಲಿ ಅರ್ಜಿಗಳನ್ನು ಕರೆಯಲಾಗಿದ್ದು, ಹೆಡ್ಸ್ ಆಫ್ ದಿ ಇನ್‌ಸ್ಟಿಟ್ಯೂಶನ್ಸ್‌ರವರು ತಾ|| ೨೫-೬-೧೯೬೫ (ಸಂಜೆ ೫-೦೦ ಗಂಟೆ) ವರೆಗೆ ಸ್ವೀಕರಿಸುವರು. ಅಭ್ಯರ್ಥಿಗಳು ಮೇಲಿನ ತರಬೇತಿಯನ್ನು ತಾವು ಎಲ್ಲಿ ಪಡೆಯಲಿಚ್ಛಿಸುವರೋ ಆಯಾ ತರಬೇತಿ ಕೇಂದ್ರಗಳ ಮುಖ್ಯಸ್ಥರಿಗೆ ಅರ್ಜಿ ಬರೆದುಕೊಳ್ಳತಕ್ಕದ್ದು.

ತರಬೇತಿ ಕೇಂದ್ರದ ಹೆಸರು	ಅಂದಾಜು ಜಾಗಗಳು: ವಿದ್ಯಾರ್ಥಿ ಶುಲ್ಕ ಸಹಿತ (ಸ್ಟೈಪೆಂಡರಿ)	ಅಂದಾಜು ಜಾಗಗಳು: ವಿದ್ಯಾರ್ಥಿ ಶುಲ್ಕ ರಹಿತ (ನಾನ್-ಸ್ಟೈಪೆಂಡರಿ)
೧ ಸಿವಿಲ್ ಹಾಸ್ಪಿಟಲ್, ಗುಲಬರ್ಗಾ	೮	೩
೨ ಸಿವಿಲ್ ಹಾಸ್ಪಿಟಲ್, ವಿಜಾಪುರ	೫	೫

ಜನದಟ್ಟಣೆಯಲ್ಲಿ ಪ್ರದರ್ಶನ
ಚಂದ್ರಕಲಾ - ಹುಬ್ಬಳ್ಳಿ
೩-೧೫, ೬-೧೫, ೯-೧೫ ಕ್ಕೆ.
ಸಂಗೀತಮಯ ವರ್ಣರಂಜಿತ ಹಿಂದಿ ಚಿತ್ರ

ಹಿಮಾಲಯ ಕಿ ಗೋದಮೆ

ಭೂ— ಮಾಲಾಸಿನ್ಹಾ, ಮನೋಜಕುಮಾರ, ಶಶಿಕಲಾ, ಡೆವಿಡ್, ಜಯಂತ
(ಶ್ರೀನಿವಾಸ ರಿಲೀಜ)

ಜನ... ೫ ನೇ ವಾರ
ಕೇವಲ ಗುರುವಾರ ತಾ ... ರ ವರೆಗೆ
ಮಲ್ಲಿಕಾರ್ಜುನ-ಹುಬ್ಬಳ್ಳಿ
ದಿನಾಲು ೩ ಆಟ ೩।,೬।,೯। ಕ್ಕೆ
ಎ. ಎಲ್. ಎಸ್. ಪ್ರೊಡಕ್ಷನ್ನವರ
ಹೃದಯಸ್ಪರ್ಶಿ ಕೌಟುಂಬಿಕ ಹಿಂದಿ ಚಿತ್ರ

ಸುಹಾಗನ

ಭೂ: ಮಾಲಾಸಿಹ, ಗುರುದತ್ತ
ಫಿರೋಜಖಾನ, ಡವಿಡಾ
ನಜೀರಹುಸೇನ
[ರಾಜಶ್ರೀ ರಿಲೀಜ ಹುಬ್ಬಳ್ಳಿ]

ಕನ್ನಡ ಥಿಯೇಟರ್ಸ (ಪ್ರೈ.) ಲಿ. ಮೈಸೂರ ಇವರು
ಹುಬ್ಬಳ್ಳಿ ಗಜಾನನ ಥೇಟರಿನಲ್ಲಿ | ದಿನಾಲು ರಾತ್ರಿ ೧೦-೩೦ ಕ್ಕೆ
ಯಶಸ್ವೀ
೪೭ನೇ ಪ್ರಯೋಗ

ರಾಜಾ ವಿಕ್ರಮ

ಮುಂದಿನ ಬದಲಾವಣೆ : "ಅತ್ತೆ ಸೊಸೆ"

Au... ...ts
RA... CENTRE,
Narasimharaja Road,
Bangalore City

USE
SARVODAYA
EXERCISE BOOKS.
LETTER BOOKS.
DRAWING BOOKS
PERFORATED,
BOOKS.
EXAM. PAPER.

SARVODAYA

ANCHOR
DUPLICATE BOOKS. PERFORATED BLOCKS. NOTE BOOKS. SHORT HAND. ACCOUNT BOOKS ETC.

SARVODAYA BOOK DEPOT.
(Formerly M/s. A. G. BOOKWALA)
1, MIRZA STREET, BOMBAY-3.

ಕಾರ್ಯರೂಪದಲ್ಲಿ ತರಲು ರಾಜ್ಯಪಾ...
ಆತುರತೆ

ಬೆಂಗಳೂರು ೧೯- ರಾಜ್ಯಪಾಲರಾದ ಶ್ರೀ ... ವಿ ಗಿರಿಯವರು ಕೆಲವು ದಿನಗಳ ಹಿಂದೆ ... ಪಾಡಿದಂತೆ ಇದೇ ಜುಲೈ ೪ ರಂದು ... ಕಸಬರಿಗೆ ತೆಗೆದುಕೊಂಡು ನಗರದ ... ಗಳನ್ನು ಉಡುಗುವರು.

ಈ ಕಾರ್ಯದಲ್ಲಿ ನಗರಾಡಳಿತ ಸಚಿವರಾದ ... ಆರ್ ಎಂ ಪಾಟೀಲರು, ಮೇಯರರಾದ ಶ್ರೀ ... ಎಂ ನಾಗಣ್ಣನವರು ಹಾಗು ಕಾರ್ಪೋರೇಟರ... ಅವರನ್ನು ಕೂಡಿಕೊಳ್ಳುವರು.

ರಾಜ್ಯಪಾಲರಾದ ಶ್ರೀ ಗಿರಿ ಅವರು ... ವಾರ ದಿವಸ ಮೇಯರರಾದ ಶ್ರೀ ನಾಗಣ್ಣ... ರನ್ನು ಹಾಗು ಕಾರ್ಪೋರೇಟರರನ್ನು ರಾಜ ... ನಕ್ಕೆ ಬರಮಾಡಿಕೊಂಡು ತಾವು ಹಿಂ... ಮಾಡಿದ ಸೂಚನೆಯನ್ನು ಕಾರ್ಯರೂಪ... ತರಲಿರುವದನ್ನು ತಿಳಿಸಿದರು. ಬೆಂಗಳೂರನ್ನು ... ದೇಶದಲ್ಲಿಯೇ ಅತ್ಯಂತ ನಿರ್ಮಲ ... ನ್ನಾಗಿ ಮಾಡಿ ಉಳಿದ ನಗರಗಳಿಗೂ ... ಳಗಾಗಿ ಮಾಡಲಿ ಹಾಕಿ ಕೊಡಬೇಕು ... ರಾಜ್ಯಕೀಯವನ್ನು ತರಬಾರದು. ... ಅವರು ಕಾರ್ಪೋರೇಟರರಿಗೆ ತಿಳಿಸಿದ...